ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 15 ಗುರುವಾರ 2022

ಸಂಪುಟ: 43 | ಸಂಚಿಕೆ: 238 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಆನೆಗಳ ಸಂಖ್ಯೆ ಹೆಚ್ಚಳ: ಅರಣ್ಯದ ಹೊರಗೆ ಅಡ್ಡಾಡುತ್ತಿವೆ 400 ಆನೆಗಳು!

ಬೆಂಗಳೂರು, ಡಿ.14–ಆನೆ–ಹುಲಿಗಳು ಹೆಚ್ಚಾಗಿರುವ ರಾಜ್ಯವೆಂಬ ಹೆಗ್ಗಳಿಕೆ ಪಾತ್ರವಾಗಿರುವ ಕರ್ನಾಟಕದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಬಳಿಕ ಮಾನವ–ಪ್ರಾಣಿ ಸಂಘರ್ಷ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದೆ.

ಈ ಸಂಘರ್ಷಗಳ ನಡುವೆಯೂ ರಾಜ್ಯದಲ್ಲಿ ಆನೆಗಳ ಗಣತಿಯಲ್ಲಿ ಹೆಚ್ಚಳಗಳು ಕಂಡು ಬಂದಿದ್ದು, 2017ರ ಸಮೀಕ್ಷಾ ವರದಿ ಪ್ರಕಾರ ರಾಜ್ಯದಲ್ಲಿ 6,049 ಆನೆಗಳಿದ್ದವು. ಇದೀಗ ಈ ಸಂಖ್ಯೆ 7,000–7,500ಕ್ಕೆ ಏರಿಕೆಯಾಗಿದೆ. ಇಷ್ಟೇ ಅಲ್ಲ, 400ಕ್ಕೂ ಹೆಚ್ಚು ಆನೆಗಳು ಅರಣ್ಯ ಪ್ರದೇಶಗಳ ಹೊರಗೆ ಅಡ್ಡಾಡುತ್ತಿದ್ದು, ಈ ಪ್ರದೇಶವನ್ನು ತನ್ನ ವಾಸಸ್ಥಳಗಳನ್ನಾಗಿ ಮಾಡಿಕೊಂಡಿವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

4000 ಆನೆಗಳ ಪೈಕಿ 200 ಆನೆಗಳು ಕೊಡಗು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿವೆ. ಹಾಸನದಲ್ಲಿ 60–70 ಆನೆಗಳಿದ್ದು, 100–150 ಆನೆಗಳು ಕೃಷಿ ಬೆಳೆಗಳ ಮೇಲೆ ದಾಳಿ ಮಾಡುತ್ತಿವೆ. ಆನೆಗಳು ನೆಲೆಯೂರಲು ಕಾಡಿನ ಸಾಮರ್ಥ್ಯ ಕೂಡ ಕಡಿಮೆಯಿದೆ. ಕೆಲವು ಪ್ರದೇಶಗಳಲ್ಲಿ, ಒಂದು ಆನೆಯು 1–2 ಚದರ ಕಿಮೀ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತದೆ ಎಂದು ಹೇಳಿದ್ದಾರೆ.

ಮಾನವ–ಪ್ರಾಣಿಗಳ ಸಂಘರ್ಷದ ಪ್ರಕರಣಗಳ ಸಮಸ್ಯೆಯನ್ನು ಪರಿಹರಿಸಲು, ರಾಜ್ಯ ಸರ್ಕಾರವು ಆನೆ ಸಂಘರ್ಷ ಕಾರ್ಯಪಡೆ ಮತ್ತು ಆನೆ ಕಾರಿಡಾರ್ ಎಂದು



ಘೋಷಿಸಬಹುದಾದ ಪ್ರದೇಶಗಳನ್ನು ನಿರ್ಣಯಿಸಲು ವಿಶೇಷ ಸಮಿತಿಯನ್ನು ರಚಿಸಿದೆ. ಆನೆ ದಾಳಿಗೆ ಬಲಿಯಾದವರ ಕುಟುಂಬಗಳಿಗೆ ಹಾಗೂ ಬೆಳೆ ಹಾನಿ ಪರಿಹಾರವನ್ನು ಕೂಡ ಸರ್ಕಾರ ಹೆಚ್ಚಿಸಿದೆ. ಆದರೆ, ನಿಜವಾದ ಸಮಸ್ಯೆಗೆ ಸರ್ಕಾರ ಪರಿಹಾರ ನೀಡುತ್ತಿಲ್ಲ ಎಂದು ಅಧಿಕಾರಿಗಳು ಮತ್ತು ತಜ್ಞರು ಹೇಳಿದ್ದಾರೆ.

ಎಲ್ಲೆಡೆ ಜನರು ಅರಣ್ಯವನ್ನು ಆಕ್ರಮಿಸುತ್ತಿರುವುದರಿಂದ ಪ್ರಾಣಿಗಳು ನೆಲೆಸಲು ತಾಣವಿಲ್ಲದಂತಾಗುತ್ತಿದೆ. ಇದರಿಂದ ಅರಣ್ಯ ಪ್ರದೇಶಗಳ ಹೊರಗೆ ಆನೆಗಳು ಹೆಚ್ಚು ಅಲೆದಾಡುತ್ತಿವೆ. ವಯಸ್ಸಾದ ಆನೆಗಳು ಸಂಘರ್ಷಕ್ಕಿಳಿಯುತ್ತಿರುವುದು ಹೆಚ್ಚಾಗಿ ಕಂಡು ಬರುತ್ತಿವೆ ಎಂದು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ 12,000ಕ್ಕಿಂತ ಹೆಚ್ಚು ಆನೆಗಳಿವೆ ಎಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ತಿಳಿಸಿದೆ.

ಈ ಹಿಂದೆ ತಮಿಳುನಾಡು ಆನೆಗಳನ್ನು ತಮ್ಮ ಕಾಡಿನಿಂದ ಓಡಿಸುತ್ತಿತ್ತು. ಅಲ್ಲಿಂದ ಆನೆಗಳು ಕರ್ನಾಟಕಕ್ಕೆ ಬರುತ್ತಿದ್ದವು. ನಂತರ ಇಲ್ಲಿ ಸಂಘರ್ಷಕ್ಕಿಳಿಯುತ್ತಿತ್ತು. ಇದೀಗ ಕರ್ನಾಟಕದ ಅರಣ್ಯಗಳಲ್ಲಿ ಆನೆಗಳ ಸಂಖ್ಯೆ ಹೆಚ್ಚಾಗಿದೆ. ಇದಷ್ಟೇ ಅಲ್ಲದೆ, ಅರಣ್ಯದಲ್ಲಿರುವ ಹೆಣ್ಣು ಆನೆಗಳು ಗಂಡಾನೆಗಳನ್ನು ಸೆಳೆಯುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫಿಫಾ ವಿಶ್ವಕಪ್: ಮೆಸ್ಸಿ ಚಮತ್ಕಾರದಿಂದ 6ನೇ ಬಾರಿಗೆ ಫೈನಲ್ ಪ್ರವೇಶಿಸಿದ ಅರ್ಜೆಂಟಿನಾ

ಕತಾರ್, ಡಿ.14– ಫಿಫಾ ವಿಶ್ವಕಪ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಲಿಯೋನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ ಕ್ರೊಯೇಷಿಯಾ ತಂಡವನ್ನು 3–0 ಗೋಲುಗಳ ಅಂತರದಲ್ಲಿ ಮಣಿಸಿ 6ನೇ ಬಾರಿಗೆ ಫೈನಲ್ ಪ್ರವೇಶಿಸಿದೆ. ಈ ಮೂಲಕ ಅರ್ಜೆಂಟೀನಾ ತಂಡ ಆರನೇ ಬಾರಿ ವಿಶ್ವಕಪ್‌ನ ಫೈನಲ್‌ಗೇರಿದಂತಾಗಿದೆ. ವೃತ್ತಿ ಜೀವನ ಕೊನೆಯ ವಿಶ್ವಕಪ್ ಟೂರ್ನಿಯನ್ನಾಡುತ್ತಿರುವ ಮೆಸ್ಸಿಗೆ ಪ್ರಶಸ್ತಿ ಗೆಲ್ಲುವ ಭರವಸೆ ಕೂಡ ಮೂಡಿದಂತಾಗಿದೆ. ▸ 8ನೇ ಪುಟಕ್ಕೆ

ಪದವಿ, ಸ್ನಾತಕೋತ್ತರ ಪದವಿಗಳಲ್ಲಿ
ಕನ್ನಡ, ಇಂಗ್ಲಿಷ್ ಎರಡರಲ್ಲೂ ಉತ್ತರ ಬರೆಯಲು ಅವಕಾಶ

- ಡಾ.ಅಶ್ವತ್ಥನಾರಾಯಣ್ ನೇತೃತ್ವದ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆಯಲ್ಲಿ ತೀರ್ಮಾನ
- ಬೇಕಿದ್ದರೆ ಒಂದು ಪ್ರಶ್ನೆಗೆ ಕನ್ನಡ, ಮತ್ತೊಂದು ಪ್ರಶ್ನೆಗೆ ಇಂಗ್ಲಿಷ್‌ನಲ್ಲಿ ಉತ್ತರಿಸಲೂಬಹುದು
- ಪ್ರಾದೇಶಿಕ ಭಾಷೆಯಲ್ಲೇ ಉನ್ನತ ಶಿಕ್ಷಣ ನೀಡಲು ಗುಣಮಟ್ಟದ ಪುಸ್ತಕ ಕನ್ನಡಕ್ಕೆ ಅನುವಾದ



ಬೆಂಗಳೂರು: ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತದಲ್ಲಿ ವಿದ್ಯಾರ್ಥಿಗಳು ಯಾವುದೇ ವಿಷಯದ ಪರೀಕ್ಷೆ ಯನ್ನು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಬರೆಯಲು ಅವಕಾಶ ಕಲ್ಪಿಸಲು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಸಾಮಾನ್ಯ ಸಭೆ ತೀರ್ಮಾನಿಸಿದೆ.

ಇದರ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲಿ ಉನ್ನತ ಶಿಕ್ಷಣವನ್ನು ಪೂರೈಸಬೇಕೆಂಬ ಎನ್‌ಇಪಿ ಆಶಯವನ್ನು ಸಾಧಿಸಲು ಯುಜಿಸಿ ಸೂಚನೆಯಂತೆ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಗುಣಮಟ್ಟದ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕಾಗಿ ಆಧುನಿಕ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವುದರ ರೂಪುರೇಷೆಯನ್ನು ತೀರ್ಮಾನಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ▸ 8ನೇ ಪುಟಕ್ಕೆ

ಶಿಕ್ಷಕರ ಅರ್ಹತಾ ಪರೀಕ್ಷೆಯ ಫಲಿತಾಂಶ ಪ್ರಕಟ

ಬೆಂಗಳೂರು: 2022ನೇ ಸಾಲಿನ ಶಿಕ್ಷಕರ ಅರ್ಹತಾ ಪರೀಕ್ಷೆಯ ಫಲಿತಾಂಶವನ್ನು (Teachers Eligibility Test Result 2022) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಪ್ರಸಕ್ತ ಸಾಲಿನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ ಒಟ್ಟು ಅಭ್ಯರ್ಥಿಗಳ ಪೈಕಿ ಪತ್ರಿಕೆ 1 ರಲ್ಲಿ 20,070 ಅಭ್ಯರ್ಥಿಗಳು, ಪತ್ರಿಕೆ 2ರಲ್ಲಿ 41,857 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪತ್ರಿಕೆ 1ರಲ್ಲಿ 20,070 ಅಭ್ಯರ್ಥಿಗಳು ಹಾಗೂ ಪತ್ರಿಕೆ 2ರಲ್ಲಿ 41,857 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಇನ್ನು ಶಿಕ್ಷಕರ ಅರ್ಹತಾ ಪರೀಕ್ಷೆಯ ಫಲಿತಾಂಶವನ್ನು ಅಧಿಕೃತವಾಗಿ ಕೆಲ ಹೊತ್ತಿನಲ್ಲಿ ಪ್ರಕಟಿಸಲಾಗುವುದು ಎಂದು ಬರೆದುಕೊಂಡಿದ್ದಾರೆ.

ಕಳೆದ ನವೆಂಬರ್ 6ರಂದು ರಾಜ್ಯಾದ್ಯಂತ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 2022ನೇ ಸಾಲಿನ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ ನಡೆದಿತ್ತು. ಬಳಿಕ ನ.25ರಂದು ಟಿಇಟಿ ಪರೀಕ್ಷೆಯ ಪತ್ರಿಕೆ 1 ಮತ್ತು ಪತ್ರಿಕೆ 2ರ ಫೈನಲ್ ಕೀ ಉತ್ತರಗಳನ್ನು ಪ್ರಕಟಿಸಲಾಗಿತ್ತು. ಒಟ್ಟು 3, 32,913 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇಟಿಟಿ ಪರೀಕ್ಷೆ ಪತ್ರಿಕೆ 1ಕ್ಕೆ 1,54,929 ಅರ್ಜಿಗಳ ಪೈಕಿ 1,40,801 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ರೆ, ಪತ್ರಿಕೆ–2ಕ್ಕೆ ಬಂದ 2,06,455 ಅರ್ಜಿಗಳಲ್ಲಿ 1,92,112 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇನ್ನು ಅರ್ಜಿ ಹಾಕಿದ್ದ ಒಟ್ಟು 28,471 ಅಭ್ಯರ್ಥಿಗಳು ಕಾರಣಾಂತರಗಳಿಂದ ಪರೀಕ್ಷೆಗೆ ಗೈರಾಗಿದ್ದರು.

ಫಲಿತಾಂಶ ಚೆಕ್ ಮಾಡುವ ವಿಧಾನ

- ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯ http://www.schooleducation.kar.nic.in ವೆಬ್‌ಸೈಟ್‌ಗೆ ಭೇಟಿ ನೀಡಿ.
- ತೆರೆದ ಹೋಮ್ ಪೇಜ್‌ನಲ್ಲಿ 'KARTET-2022 Results' ಎಂಬಲ್ಲಿ ಕ್ಲಿಕ್ ಮಾಡಿ.
- ಬಳಿಕ ಮತ್ತೊಂದು ಪೇಜ್ ಓಪನ್ ಆಗುತ್ತದೆ.
- ಈ ಪುಟದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳು ತಮ್ಮ ಅಪ್ಲಿಕೇಶನ್ ನಂಬರ್ ಮತ್ತು ಜನ್ಮ ದಿನಾಂಕ ಮಾಹಿತಿಯನ್ನು ಹಾಕಿ 'Submit' ಎಂಬಲ್ಲಿ ಕ್ಲಿಕ್ ಮಾಡಿ.
- ಫಲಿತಾಂಶ ಓಪನ್ ಆಗುತ್ತದೆ. ಡೌನ್‌ಲೋಡ್ ಮಾಡಿ ಪ್ರಿಂಟ್ ತೆಗೆದುಕೊಳ್ಳಬಹುದು.

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ: ಕೇಂದ್ರ ಮಧ್ಯಪ್ರವೇಶ

ಉಭಯ ರಾಜ್ಯಗಳ ತಲಾ ಮೂವರು ಸಚಿವರ ಸಮಿತಿ ರಚನೆ



ನವದೆಹಲಿ: ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಿನ ಗಡಿ ಗಲಾಟೆಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿದ್ದು, ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ಸಂಬಂಧ ಪ್ರತ್ಯೇಕ ಸಮಿತಿ ರಚಿಸಲು ನಿರ್ಧರಿಸಲಾಗಿದೆ.

ಉಭಯ ರಾಜ್ಯಗಳ ಗಡಿ ವಿವಾದ ರಸ್ತೆಯಲ್ಲಿ ನಿಂತು ಬಗೆಹರಿಸುವ ವಿಷಯವಲ್ಲ. ಸಂವಿಧಾನಬದ್ಧವಾಗಿ ವಿವಾದ ಇತ್ಯರ್ಥಗೊಳಿಸುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಇತ್ಯರ್ಥ ಹಾಗೂ ಸಾಂವಿಧಾನಿಕ ಪರಿಹಾರಕ್ಕಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಕರ್ನಾಟಕದ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳ ಜೊತೆ ಅಮಿತ್ ಶಾ ಸಭೆ ನಡೆಸಿದರು. ಬಳಿಕ ಟ್ವೀಟ್ ಮಾಡಿರುವ ಅವರು, ಉಭಯ ರಾಜ್ಯಗಳಿಂದ ತಲಾ ಮೂವರು ಮಂತ್ರಿಗಳಂತೆ ಒಟ್ಟು ಆರು ಮಂತ್ರಿಗಳ ಸಮಿತಿ ರಚನೆ ಮಾಡಲಾಗುವುದು. ಅವರು ಒಟ್ಟಿಗೆ ಕುಳಿತು ಇದರ ಬಗ್ಗೆ ವಿಸ್ತೃತ ಚಿಂತನೆ, ಚರ್ಚೆ ನಡೆಸಲಿದ್ದಾರೆ. ಎರಡೂ ರಾಜ್ಯಗಳ ನಡುವೆ ಇನ್ನೂ ಕೆಲವು ಸಣ್ಣಪುಟ್ಟ ವಿವಾದಗಳಿವೆ. ಅದು ಸಾಮಾನ್ಯವಾಗಿ ಉಭಯ ರಾಜ್ಯಗಳ ನಡುವೆ ಇರುತ್ತದೆ. ಇದನ್ನು ಕೂಡ ಈ ಸಮಿತಿಯೇ ಬಗೆಹರಿಸಲಿದೆ ಎಂದರು. ಭಾರತ ಸರ್ಕಾರದ ಭೂ ವಿವಾದ ಅಧಿಕಾರಿಗಳೊಂದಿಗೆ ಉತ್ತಮ ವಾತಾವರಣದಲ್ಲಿ ಮಾತುಕತೆ ನಡೆಯಿತು. ಇಬ್ಬರು ಮುಖ್ಯಮಂತ್ರಿಗಳ ಸಕಾರಾತ್ಮಕ ಧೋರಣೆ ತೋರಿಸಿದ್ದಾರೆ. ಸಭೆಯಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಸುಪ್ರೀಂ ಕೋರ್ಟ್ ನಿರ್ಣಯ ಹೊರಬರುವವರೆಗೆ ಯಾವುದೇ ರಾಜ್ಯದ ಬಗ್ಗೆ ಒಬ್ಬರ ಮೇಲೊಬ್ಬರು ಆರೋಪಿಸುವುದಿಲ್ಲ ಎಂದು ಶಾ ಹೇಳಿದ್ದಾರೆ. ಎರಡೂ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿರಲಿದೆ. ▸ 8ನೇ ಪುಟಕ್ಕೆ

ಸಾಂವಿಧಾನಿಕ ವಿಧಾನಗಳಿಂದ ಮಾತ್ರ ಪರಿಹಾರ; ಬೀದಿ ಘರ್ಷಣೆಗಳಿಂದಲ್ಲ: ಶಾ

ನವದೆಹಲಿ, ಡಿ.14– ಮಹಾರಾಷ್ಟ್ರ–ಕರ್ನಾಟಕ ರಾಜ್ಯಗಳ ಸಂಘರ್ಷಕ್ಕೆ ಕಾರಣವಾಗಿರುವ ಗಡಿ ವಿವಾದವನ್ನು ಸಾಂವಿಧಾನಿಕ ವಿಧಾನಗಳಿಂದ ಮಾತ್ರ ಇತ್ಯರ್ಥಗೊಳಿಸಬಹುದು, ಬೀದಿ ಘರ್ಷಣೆಗಳಿಂದಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ದೆಹಲಿಯಲ್ಲಿ ಇಂದು ಮಹಾರಾಷ್ಟ್ರ–ಕರ್ನಾಟಕ ರಾಜ್ಯಗಳ ಮುಖ್ಯಮಂತ್ರಿಗಳಾದ ಸಿಎಂ ಬೊಮ್ಮಾಯಿ ಮತ್ತು ಸಿಎಂ ಏಕನಾಥ್ ಶಿಂಧೆ ಅವರೊಂದಿಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಮಿತ್ ಶಾ ಅವರು, ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ವಿಚಾರವಾಗಿ ಇಂದು ನಡೆದ ಸಭೆ ಸಕಾರಾತ್ಮಕ ವಾತಾವರಣದಲ್ಲಿ ನಡೆದಿದೆ. ಸಕಾರಾತ್ಮಕ ದೃಷ್ಟಿಕೋನವನ್ನು ಇಟ್ಟುಕೊಂಡು, ಎರಡೂ ರಾಜ್ಯಗಳ ಸಿಎಂಗಳು ಸಾಂವಿಧಾನಿಕ ▸ 8ನೇ ಪುಟಕ್ಕೆ

2000 ರೂ. ನೋಟು ಮುದ್ರಣ ಇಲ್ಲ



ಕೇಂದ್ರ ಸರ್ಕಾರ ಸ್ಪಷ್ಟನೆ

ನವದೆಹಲಿ, ಡಿ.14– 2018–19ರ ಆರಂಭದಲ್ಲಿ 2,000 ರೂ ಮುಖಬೆಲೆಯ ನೋಟುಗಳ ಮುದ್ರಣಕ್ಕಾಗಿ ಯಾವುದೇ ಹೊಸ ಇಂಡೆಂಟ್ ಅನ್ನು ಮುದ್ರಣಾಲಯಕ್ಕೆ ಸಲ್ಲಿಸಿಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ. ಕೆಲವೊಂದು ಮುಖಬೆಲೆಯ ಬ್ಯಾಂಕ್ ನೋಟುಗಳ ಉತ್ಪಾದನೆಯನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ಸೇರಿ ಸರ್ಕಾರ ನಿರ್ಧರಿಸುತ್ತದೆ. 2019–20, 2020–21, ಮತ್ತು 2021–22ರಲ್ಲಿ 2 ಸಾವಿರ ರೂ ಮುಖಬೆಲೆಯ ಕರೆನ್ಸಿ ನೋಟುಗಳ ಮುದ್ರಣದ ಬಗ್ಗೆ ಮಾಹಿತಿ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಉತ್ತರಿಸಿದರು. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಕೇಂದ್ರ ಸಂಸ್ಥೆಯಾಗಿದ್ದು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ವರದಿಯಾಗುವ ನಕಲಿ ಕರೆನ್ಸಿ ನೋಟುಗಳ ಪ್ರಕರಣಗಳನ್ನು ಒಳಗೊಂಡಂತೆ ಅಪರಾಧಗಳ ದತ್ತಾಂಶವನ್ನು ಸಂಗ್ರಹಿಸುತ್ತದೆ ಮತ್ತು ಅದನ್ನು ತನ್ನ ವಾರ್ಷಿಕ ಆವೃತ್ತಿ 'ಕ್ರೈಮ್ ಇನ್ ಇಂಡಿಯಾ'ದಲ್ಲಿ ಪ್ರಕಟಿಸುತ್ತದೆ.

ವಯಸ್ಸಾದವರಿಗೆ ಸಹಾಯ ಮಾಡುವ ಸೋಗಿನಲ್ಲಿ ಅವರ ಎಟಿಎಂ ಕಾರ್ಡ್ ಕದ್ದು ಭಾರೀ ವಂಚನೆ
ಮೈಸೂರು ಖದೀಮ ಚಿಕ್ಕಬಳ್ಳಾಪುರದಲ್ಲಿ ಬಂಧನ

- ಬಂಧಿತನಿಂದ 14 ಎಟಿಎಂ ಕಾರ್ಡ್, 2.46 ಲಕ್ಷ ನಗದು ವಶ
- ಕೊಳ್ಳೇಗಾಲ, ರಾಮನಗರ, ಗದಗ ಸೇರಿ ಹಲವೆಡೆ ವಯಸ್ಸಾದವರಿಗೆ ವಂಚನೆ

ಚಿಕ್ಕಬಳ್ಳಾಪುರ, ಡಿ. 14– ಸಹಾಯ ಮಾಡುವ ನೆಪದಲ್ಲಿ ಅಮಾಯಕರ ಎಟಿಎಂ ಕಾರ್ಡ್ ಲಪಟಾಯಿಸಿ, ಹಣ ಡ್ರಾ ಮಾಡಿಕೊಂಡು ವಂಚಿಸುತ್ತಿದ್ದ ಮೈಸೂರು ಮೂಲದ ಖದೀಮನನ್ನು ಬಂಧಿಸಿ, 14 ಎಟಿಎಂ ಕಾರ್ಡ್, ಹಾಗೂ 2.46 ಲಕ್ಷರೂ. ವಶಪಡಿಸಿಕೊಳ್ಳುವಲ್ಲಿ ಚಿಕ್ಕಬಳ್ಳಾಪುರ ನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ಆಲನಹಳ್ಳಿ ಗಿರಿದರ್ಶಿನಿ ಬಡಾವಣೆ ನಿವಾಸಿ ಬಿ.ಕೆ.ಕಿರಣ್‌ಕುಮಾರ್ (32) ಬಂಧಿತ ಖದೀಮನಾಗಿದ್ದು, ಎಟಿಎಂ ಕೇಂದ್ರಗಳಲ್ಲಿ ಅಮಾಯಕರನ್ನು ವಂಚಿಸುವುದನ್ನೇ ಈತ ವೃತ್ತಿಯಾಗಿಸಿಕೊಂಡಿದ್ದು, ಇಂತಹ ಪ್ರಕರಣಗಳಲ್ಲಿ ಈಗಾಗಲೇ ಕೊಡಗು, ಕುಮಟ, ಶಿರಾಳಕೊಪ್ಪ, ಉಡುಪಿ, ಹಡಿಯಾಲ ಮತ್ತು ಮುಂಗೋಡು ಪೊಲೀಸರಿಂದ ಬಂಧಿಸಲ್ಪಟ್ಟು ಜೈಲು



ಸೇರಿ ಜಾಮೀನಿನ ಮೇಲೆ ಹೊರಬಂದಿದ್ದಾನೆ. 8 ವಂಚನೆಗಳು ವಿವಿಧ ನ್ಯಾಯಾಲಯಗಳಲ್ಲಿ ಈತನ ವಿರುದ್ಧ ವಿಚಾರಣೆ ಹಂತದಲ್ಲಿದೆ. ಕಳೆದ ಮೇ 27ರಂದು ಚಿಕ್ಕಬಳ್ಳಾಪುರ ತಾಲೂಕು ಸೂಲಿಗುಂಟೆ ಗ್ರಾಮದ ರೆಡ್ಡಪ್ಪ ಎಂಬುವರು ಚಿಕ್ಕಬಳ್ಳಾಪುರ ನಗರ ಬಿಬಿ ರಸ್ತೆಯ ಅಯ್ಯಪ್ಪ ದೇವಸ್ಥಾನದ ಎದುರಿನಲ್ಲಿರುವ ಎಸ್‌ಬಿಐ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದಾರೆ. ಅವರಿಗೆ ಸಹಾಯ ಮಾಡುವ ನೆಪದಲ್ಲಿ ಖದೀಮ ಅವರ ಎಟಿಎಂ ಕಾರ್ಡ್ ಬದಲಿಸಿ ಬೇರೆ ಕಾರ್ಡನ್ನು ಅವರಿಗೆ ನೀಡಿದ್ದ. ಅಲ್ಲದೇ ಅವರ ಕಾರ್ಡ್ ಮೂಲಕ 1.60 ಲಕ್ಷ ರೂ.ಗಳನ್ನು ಡ್ರಾ ಮಾಡಿಕೊಂಡಿದ್ದ. ಈ ವಿಚಾರ ತಿಳಿದ ನಂತರ ರೆಡ್ಡಪ್ಪ ಅವರು ಜುಲೈ 4ರಂದು ಚಿಕ್ಕಬಳ್ಳಾಪುರ ನಗರ ▸ 8ನೇ ಪುಟಕ್ಕೆ

ಚಿತ್ರದುರ್ಗದಲ್ಲಿ ಜ.8ರಂದು ಕಾಂಗ್ರೆಸ್‌ನಿಂದ ಪರಿಶಿಷ್ಟರ ಐಕ್ಯತಾ ಸಮಾವೇಶ

- 5 ಲಕ್ಷ ಮಂದಿ ಪರಿಶಿಷ್ಟರ ಸೇರಿಸಲು ಸಿದ್ಧತೆ; ಕಾಂಗ್ರೆಸ್‌ನಿಂದಲೇ ಪರಿಶಿಷ್ಟರ ಮೀಸಲಾತಿಗೆ ಅಡಿಗಲ್ಲು
- ಸಮಾವೇಶ ಸಮಿತಿ ಅಧ್ಯಕ್ಷ, ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮಾಹಿತಿ

ಮೈಸೂರು, ಡಿ.14(ಆರ್‌ಕೆಬಿ)– ಕಾಂಗ್ರೆಸ್ ಪಕ್ಷದಿಂದ ಪರಿಶಿಷ್ಟರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಜ.8ರಂದು ಚಿತ್ರದುರ್ಗದಲ್ಲಿ ಕಾಂಗ್ರೆಸ್ ಎಸ್‌ಸಿ–ಎಸ್‌ಟಿ ಬೃಹತ್ ಐಕ್ಯತಾ ಸಮಾವೇಶ ಆಯೋಜಿಸಲಾಗುವುದು. ಸಮಾವೇಶದಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 5 ಲಕ್ಷಕ್ಕೂ ಅಧಿಕ ಜನರನ್ನು ಸಂಘಟಿಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಸಮಾವೇಶ ಸಮಿತಿಯ ಅಧ್ಯಕ್ಷರೂ ಆದ ಮಾಜಿ ಉಪಮುಖ್ಯಮಂತ್ರಿ, ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟರ ಐಕ್ಯತಾ ಸಮಾವೇಶ ನಡೆಸುವ ಸಂಬಂಧ ಈಗಾಗಲೇ ಬೆಂಗಳೂರಿನಲ್ಲಿ ಪೂರ್ವಭಾವಿ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗಿದೆ. ಬಹಳ ವರ್ಷಗಳ ನಂತರ ಇಂತಹ ಸಮಾವೇಶ ನಡೆಸಲಾಗುತ್ತಿದೆ. ಸಮಾವೇಶಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಂದೀಪ್ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಪಕ್ಷದ ಹಿರಿಯರಾದ ಬಿ.ಕೆ.ಹರಿಪ್ರಸಾದ್, ಎಂ.ಬಿ. ಪಾಟೀಲ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಅಲ್ಲದೆ ಪಕ್ಷದ ರಾಷ್ಟ್ರೀಯ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಗಾಂಧಿ ಅವರನ್ನು ಸಹ ಆಹ್ವಾನಿಸಲಾಗಿದ್ದು, ಈ ಮೂವರಲ್ಲಿ ಯಾರಾದರೂ ಒಬ್ಬರು ಸಮಾವೇಶದಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ▸ 6ನೇ ಪುಟಕ್ಕೆ



ಬಿಜೆಪಿಯ ಹಿಟ್ಲರ್ ಆಡಳಿತ

ಐಕ್ಯತಾ ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಇಂದು ದೇಶದಲ್ಲಿ ಹಿಟ್ಲರ್ ಆಡಳಿತವಿದೆ. ಶೋಷಿತ ಸಮುದಾಯದ ಪಾಲಿಗೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ನೇಣುಗಂಬವಾಗಿದೆ. ಭಾರತದ ಮೂಲನಿವಾಸಿಗಳಾದ ಪರಿಶಿಷ್ಟರು ಶತ ಶತಮಾನಗಳಿಂದ ಶೋಷಿತರಾಗಿ, ದೇಶವನ್ನು ಕಟ್ಟಿದವರು. ಇನ್ನೂ ಅವರ ಬದುಕು ಹಸನಾಗಿಲ್ಲ. ಈ ನಿಟ್ಟಿನಲ್ಲಿ ಐಕ್ಯತಾ ಸಮಾವೇಶ ಐತಿಹಾಸಿಕ ಸಮಾವೇಶವಾಗಿ ದಾಖಲಾಗಲಿದೆ. ಈ ಎಲ್ಲಾ ವಿಚಾರಗಳನ್ನೂ ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದರು.

ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಸ್ಥಗಿತಗೊಳಿಸಿದ ಬಿಜೆಪಿ ಸರ್ಕಾರ

ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ನಿಲ್ಲಿಸಿದ್ದಾರೆ. ಪರಿಶಿಷ್ಟ 60 ಲಕ್ಷ ಶಾಲಾ ಮಕ್ಕಳಿಗೆ 14 ರಾಜ್ಯಗಳಲ್ಲಿ ಸ್ಕಾಲರ್‌ಶಿಪ್ ಸ್ಥಗಿತಗೊಳಿಸಿದ್ದಾರೆ. ಮುಖ್ಯಮಂತ್ರಿ, ಇತ್ತೀಚೆಗೆ ಮೀಸಲಾತಿಗೆ ಸೇರ್ಪಡೆಯಾದ ಸಮುದಾಯಗಳಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಆದರೆ ಸಂವಿಧಾನಾತ್ಮಕವಾಗಿ ನೀಡಬೇಕಾದ ಪರಿಶಿಷ್ಟರಿಗೆ ನೀಡದೇ ವಂಚಿಸುತ್ತಿದ್ದಾರೆ ಎಂದು ದೂರಿದರು. ಈ ಎಲ್ಲಾ ವಿಚಾರಗಳನ್ನು ಚಿತ್ರದುರ್ಗದಲ್ಲಿ ನಡೆಯುವ ಐಕ್ಯತಾ ಸಮಾವೇಶದಲ್ಲಿ ಸುದೀರ್ಘವಾಗಿ ಚರ್ಚಿಸಿ, ಬಿಜೆಪಿ ಸರ್ಕಾರದಿಂದ ಪರಿಶಿಷ್ಟರು ಹೇಗೆ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬ ಸಂದೇಶ ರವಾನಿಸಲಾಗುವುದು.

–ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್

ಮ್ಯೂಸಿಯಂ ಆಗಿಸಲು ವರ್ಷ ಬೇಕು

ಮಣ್ಣು-ಸುಣ್ಣದ ಗಾರೆಯಲ್ಲಿ ನಿರ್ಮಾಣಗೊಂಡಿರುವ ಕಟ್ಟಡ



ಮೈಸೂರು,ಡಿ.14(ಪಿಎಂ)– ತ್ರಿವೇಣಿಯವರ ಮನೆಯನ್ನು ಮ್ಯೂಸಿಯಂ ಆಗಿ ಪರಿವರ್ತಿಸುವ ಪ್ರಕ್ರಿಯೆ ಸುಮಾರು ವರ್ಷ ಕಾಲ ಹಿಡಿಯಬಹುದು ಎಂದು ತ್ರಿವೇಣಿಯವರ ಮನೆ ಜೀರ್ಣೋದ್ಧಾರ ಕಾರ್ಯದ ನೇತೃತ್ವ ವಹಿಸಿರುವ ಪಾರಂಪರಿಕ ಕಟ್ಟಡ ಸಂರಕ್ಷಣಾ ವಾಸ್ತುಶಿಲ್ಪಿ ಪಂಕಜ್ ಮೋದಿ ತಿಳಿಸಿದರು.

ಮೊದಲು ಕಟ್ಟಡ ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಬಳಿಕ ಮ್ಯೂಸಿಯಂ ಆಗಿ ಪರಿವರ್ತಿಸಲು ಕಾರ್ಯಾರಂಭ ಮಾಡಲಾಗುವುದು. ಇದು ವರ್ಷದ ಯೋಜನೆಯಾಗಿದ್ದು, ಇದೊಂದು ಪರ್ಸನಾಲಿಟಿ ಮ್ಯೂಸಿಯಂ ಆಗಲಿದೆ. ತ್ರಿವೇಣಿಯವರು ಹೇಗೆ ಇಲ್ಲಿ ವಾಸವಾಗಿದ್ದರು ಎಂಬುದನ್ನು ಇಲ್ಲಿ ಮರುಸೃಷ್ಟಿಸಲಾಗುವುದು ಎಂದರು.

ಇಲ್ಲಿರುವ ಎರಡು ಕಟ್ಟಡಗಳಿಗೂ ಭಿನ್ನವಾದ ನಿರ್ಮಾಣ ವಿಧಾನ ಬಳಸಲಾಗಿದೆ. ಇದರಿಂದಲೇ ಎರಡು ಹಂತದಲ್ಲಿ ನಿರ್ಮಾಣಗೊಂಡ ಬೇರೆ ಬೇರೆ ಕಟ್ಟಡಗಳಿವು ಎಂದು ಸುಲಭವಾಗಿ ಹೇಳಬಹುದು. 12 ಮೀ. X 6 ಮೀ. ವಿಸ್ತೀರ್ಣದಲ್ಲಿ 120 ವರ್ಷಗಳ ಮೂಲ ಕಟ್ಟಡ ನಿರ್ಮಿಸಲಾಗಿದೆ. ಜಾಕರ್ಚ್ ಮಾದರಿ ಮೇಲ್ಛಾವಣಿ ಇದಕ್ಕಿದ್ದು, ಇಟ್ಟಿಗೆಯ ಅಡಿಪಾಯ ಹೊಂದಿದೆ. ಗೋಡೆಗಳನ್ನು ಇಟ್ಟಿಗೆ ಮತ್ತು ಮಣ್ಣಿನಲ್ಲಿ ನಿರ್ಮಿಸಲಾಗಿದೆ. ಸುಣ್ಣದ ಗಾರೆಯಲ್ಲಿ ಗೋಡೆಗಳ ಪ್ಲಾಸ್ಟರಿಂಗ್ ಮಾಡಲಾಗಿದೆ ಎಂದು ಹೇಳಿದರು.

ಇದರ ಪಕ್ಕದಲ್ಲಿ ನಿರ್ಮಿಸಿರುವ ವಿಸ್ತೃತ ಕಟ್ಟಡವು 10 ಮೀ. X 5 ಮೀ. ವಿಸ್ತೀರ್ಣವಿದ್ದು, ಕಲ್ಲಿನ ಅಡಿಪಾಯ ಹೊಂದಿದೆ. ಇದರ ಗೋಡೆಗಳ ನಿರ್ಮಾಣಕ್ಕೆ ಇಟ್ಟಿಗೆ ಮತ್ತು ಸುಣ್ಣದ ಗಾರೆ ಬಳಸಲಾಗಿದ್ದು, ಮದ್ರಾಸ್ ತಾರಸಿಯಲ್ಲಿ ಮೇಲ್ಛಾವಣಿ ನಿರ್ಮಾಣಗೊಂಡಿದೆ. ಎರಡೂ ಒಂದು ಅಂತಸ್ತು ಹೊಂದಿವೆ ಎಂದರು.

ಮೂಲ ಕಟ್ಟಡದಲ್ಲಿ ಯಾವುದೇ ಕೊಠಡಿ ಇಲ್ಲ. ಹಲಗೆ ಬಳಸಿ ಒಂದು ಕೊಠಡಿಯಾಗಿ ವಿಭಾಗಿಸಲಾಗಿದೆ. ಮೆಟ್ಟಿಲು ಸಂಪೂರ್ಣ ಮರದಲ್ಲಿದೆ. 2020ರಲ್ಲಿ ಕಟ್ಟಡಗಳ ಬಿರುಕು ಸಂಬಂಧ ಪರಿಶೀಲಿಸಿದ್ದೆವು. ಇದೀಗ ಮತ್ತೆ ಸಂಪೂರ್ಣ ಪರಿಶೀಲಿಸಲಾಗುವುದು. ಇದರ ಆಧಾರದಲ್ಲಿ ಸ್ಟ್ರಚರ್ ಇಂಜಿನಿಯರ್ ರೆಸ್ಟೋರೇಷನ್ ಸ್ಟ್ರಾಟಜಿ ನೀಡಲಿದ್ದಾರೆ. ಆ ಬಳಿಕ ನಿರ್ದಿಷ್ಟ ವೆಚ್ಚದ ಅಂದಾಜು ಲಭ್ಯವಾಗಲಿದೆ ಎಂದು ವಿವರಿಸಿದರು.

ಮ್ಯೂಸಿಯಂ ಆಗಲಿದೆ 'ಬೆಳ್ಳಿಮೋಡ'ದ ತ್ರಿವೇಣಿ ಮೈಸೂರು ನಿವಾಸ

ಸಾಂಸ್ಕೃತಿಕ ನಗರಿಯಲ್ಲಿ ಇನ್ನು ಮುಂದೆ ಖ್ಯಾತ ಕಾದಂಬರಿಕಾರ್ತಿ ಚಿರಸ್ಥಾಯಿ

- ಅವರು ವಾಸವಿದ್ದ ಶತಮಾನದ ಕಟ್ಟಡದ ಜೀರ್ಣೋದ್ಧಾರಕ್ಕೆ ಚಾಲನೆ
- ಇದಕ್ಕೆ ಲಂಡನ್‌ನ ಷೇಕ್ಸ್‌ಪಿಯರ್ ಮ್ಯೂಸಿಯಂ ಸ್ಫೂರ್ತಿ; ಪುತ್ರಿ ಮೀರಾ ಶಂಕರ್ ಕಾರ್ಯಾರಂಭ



ಕಾದಂಬರಿಕಾರ್ತಿ ತ್ರಿವೇಣಿ

ಮೈಸೂರು,ಡಿ.14(ಪಿಎಂ)– 'ತ್ರಿವೇಣಿ' ಕಾವ್ಯನಾಮದಿಂದ ಪ್ರಖ್ಯಾತಗೊಂಡ ದಿವಂಗತ ಅನುಸೂಯ ಶಂಕರ್, ಕನ್ನಡ ನವೋದಯ ಸಾಹಿತ್ಯದ ಪ್ರಮುಖ ಕಾದಂಬರಿಕಾರರು. ಅವರು ಬದುಕಿ ಬಾಳಿದ, ಅವರ ಬರವಣಿಗೆಗೆ ಸ್ಫೂರ್ತಿಯಾಗಿದ್ದ ಮೈಸೂರಿನ ಚಾಮರಾಜಪುರಂನ ನಿವಾಸದಲ್ಲಿ ಅವರು ಮರುಹುಟ್ಟು ಪಡೆಯಲಿದ್ದಾರೆ! ಅರ್ಥಾತ್ ಅವರ ನೆನೆಪು ಚಿರಸ್ಥಾಯಿಯಾಗಲಿದೆ.

120 ವರ್ಷ ಹಳೆಯದಾದ ಅವರ ಮನೆಯು ಮುಂಬರುವ ದಿನಗಳಲ್ಲಿ ವಸ್ತು ಸಂಗ್ರಹಾಲಯವಾಗಿ ರೂಪುಗೊಳ್ಳಲಿದೆ. ಇಲ್ಲಿ ತ್ರಿವೇಣಿಯವರ ಕೈಬರಹದ ಪ್ರತಿಗಳು, ಕೈಗಡಿಯಾರ ಸೇರಿದಂತೆ ಅವರು ಬಳಸುತ್ತಿದ್ದ ಅನೇಕ ವಸ್ತುಗಳ ಪ್ರದರ್ಶನದ ಜೊತೆಗೆ ಅವರ ಪುತ್ಥಳಿ ಪ್ರತಿಷ್ಠಾಪನೆಯೊಂದಿಗೆ ತ್ರಿವೇಣಿಯವರ ಮೇರು ವ್ಯಕ್ತಿತ್ವ ತೆರೆದುಕೊಳ್ಳಲಿದೆ. ವಸ್ತುಸಂಗ್ರಹಾಲಯವು 'ಬೆಳ್ಳಿಮೋಡ' ಹೆಸರಿನಲ್ಲಿ ರೂಪುಗೊಳ್ಳಲಿದ್ದು, ಬುಧವಾರ ಅವರ ಪುತ್ರಿ ಮೀರಾ ಶಂಕರ್, ತಮ್ಮ ನಿವಾಸದ ಜೀರ್ಣೋದ್ಧಾರ ಪ್ರಕ್ರಿಯೆಗೆ ಗುದ್ದಲಿ ಪೂಜೆ ನೆರವೇರಿಸಿದರು.



ಕಟ್ಟಡದ ಜೀರ್ಣೋದ್ಧಾರ ಕಾರ್ಯಕ್ಕೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಮೀರಾ ಶಂಕರ್.

2017ರಲ್ಲೇ ತಮ್ಮ ತಾಯಿ ಬದುಕಿ ಬಾಳಿದ ಮನೆಯನ್ನು ವಸ್ತುಸಂಗ್ರಹಾಲಯವಾಗಿ ಪರಿವರ್ತಿಸುವ ನಿರ್ಧಾರ ಪ್ರಕಟಿಸಿದ್ದ ಮೀರಾ ಶಂಕರ್ ಅದಕ್ಕೆ ಎಲ್ಲಾ ಸಿದ್ಧತೆ ಕೈಗೊಂಡು, ಇದೀಗ ಆ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಚಾಮರಾಜಪುರಂ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ (ಪಾಲಿಕೆ ವಾರ್ಡ್ ನಂ.49/ಮನೆ ನಂ.1152) ತ್ರಿವೇಣಿಯವರ ಮನೆ ಆವರಣದಲ್ಲಿ ಸಂಗ್ರಹಾಲಯವಾಗಿ ಪರಿವರ್ತಿಸುವ ಜೀರ್ಣೋದ್ಧಾರ ಕಾರ್ಯಕ್ಕೆ ಚಾಲನೆ ನೀಡಿದ ಮೀರಾ ಶಂಕರ್, ಬಳಿಕ ಪತ್ರಿಕಾಗೋಷ್ಠಿಯಲ್ಲಿ 'ಬೆಳ್ಳಿಮೋಡ ವಸ್ತು ಸಂಗ್ರಹಾಲಯ'ದ ಯೋಜನೆ ಬಗ್ಗೆ ಮಾಹಿತಿ ನೀಡಿದರು.

ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರೂ ಆದ ಇವರು ಮಾತನಾಡಿ, ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿ ಅದಕ್ಕೆ 'ಬೆಳ್ಳಿಮೋಡ' ಎಂದು ಹೆಸರಿಡಲಾಗುವುದು. ಏಕೆಂದರೆ ನನ್ನ ತಾಯಿಯವರ ಬೆಳ್ಳಿಮೋಡ ಕಾದಂಬರಿ ಸಿನಿಮಾವಾಗುವ ಮೂಲಕ ಅವರಿಗೆ ಹೆಚ್ಚು ಹೆಸರು ತಂದುಕೊಟ್ಟಿತು. 2006ರಲ್ಲಿ ನಾನು ಲಂಡನ್‌ನ ಷೇಕ್ಸ್‌ಪಿಯರ್ ಮ್ಯೂಸಿಯಂಗೆ ಭೇಟಿ ನೀಡಿದ್ದೆ. ಅಲ್ಲಿ ಷೇಕ್ಸ್‌ಪಿಯರ್ ಬಳಸುತ್ತಿದ್ದ ವಸ್ತುಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕೆ ಇಡಲಾಗಿದೆ. ಈ ಸಂದರ್ಭದಲ್ಲಿ ನನಗೆ ನಮ್ಮ ತಾಯಿ ಬಾಳಿ ಬದುಕಿದ ನಿವಾಸವನ್ನು ಸಂಗ್ರಹಾಲಯ ಮಾಡಬೇಕೆಂಬ ಪರಿಕಲ್ಪನೆ ಮೂಡಿತು ಎಂದು ಹೇಳಿದರು.

ಇಲ್ಲಿ ಕೇವಲ ಮ್ಯೂಸಿಯಂ ಮಾತ್ರವೇ ರೂಪುಗೊಳ್ಳುವುದಿಲ್ಲ. ಅದರೊಂದಿಗೆ ಸಾಹಿತ್ಯ ಚಟುವಟಿಕೆಗಳಿಗೂ ಪೂರಕ ವಾತಾವರಣ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ಬೆಂಗಳೂರು ಮೂಲದ ತ್ರಿವೇಣಿಯವರ ಸಾಹಿತ್ಯಾಭಿಮಾನಿಯೊಬ್ಬರು ಮ್ಯೂಸಿಯಂ ನಿರ್ಮಾಣಕ್ಕೆ ಸಂಪೂರ್ಣ ಖರ್ಚು-ವೆಚ್ಚ ಭರಿಸಲಿದ್ದಾರೆ. ಅವರು ತಮ್ಮ ಹೆಸರು ಬಹಿರಂಗಗೊಳಿಸದಂತೆ ಕೋರಿರುವ ಹಿನ್ನೆಲೆಯಲ್ಲಿ ಅವರ್ಯಾರೆಂದು ಹೇಳಲು ಸಾಧ್ಯವಿಲ್ಲ ಎಂದರು.

ಈ ಹಿಂದೆ ಪುರಾತತ್ವಶಾಸ್ತ್ರ ಇಲಾಖೆಯಿಂದ ವಸ್ತು ಸಂಗ್ರಹಾಲಯ ನಿರ್ಮಾಣಕ್ಕೆ ತಾಂತ್ರಿಕ ಸಲಹೆ ಕೊಡುವುದಾಗಿ ಒಮ್ಮೆ ಹೇಳಿದ್ದರು ಅಷ್ಟೇ. ಸದ್ಯ ಸರ್ಕಾರದ ಯಾವುದೇ ನೆರವು ಪಡೆಯುತ್ತಿಲ್ಲ. ಮುಂದೆ ಅಗತ್ಯವಾಗಬಹುದು. ಇದೇ ಮನೆಯಲ್ಲಿ ನಮ್ಮ ತಂದೆ ವಾಸವಾಗಿದ್ದು 2012ರಲ್ಲಿ ನಿಧನರಾದರು. ಅವರು ನಮ್ಮ ತಾಯಿಯವರ ಹಲವು ವಸ್ತುಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಇದು ಪಾರಂಪರಿಕ ಕಟ್ಟಡವಾಗಿರುವ ಹಿನ್ನೆಲೆಯಲ್ಲಿ ಹೆಚ್ಚು ಬದಲಾವಣೆ ಮಾಡದೇ ಇರುವಂತೆಯೇ ನವೀಕರಣ ಮಾಡಲಾಗುವುದು ಎಂದರಲ್ಲದೆ, ಮೊದಲು ಮ್ಯೂಸಿಯಂಗೆ ಪ್ರವೇಶ ಶುಲ್ಕ ಬೇಡವೆಂದು ಅಂದುಕೊಂಡಿದ್ದೆವು. ನಂತರ 10 ರೂ. ನಿಗದಿ ಮಾಡಲು ಉದ್ದೇಶಿಸಲಾಗಿದೆ. ಈ ಬಗ್ಗೆ ಇನ್ನು ಅಂತಿಮ ನಿರ್ಧಾರ ಕೈಗೊಂಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಲ್ಲಿನ ಮೂಲ ಕಟ್ಟಡವೇ ನಿವಾಸವಾಗಿದ್ದು, ಅದು ನಿರ್ಮಾಣಗೊಂಡು 120 ವರ್ಷಗಳಾಗಿವೆ. ಬಳಿಕ ನಮ್ಮ ತಾಯಿಯವರು ತಮ್ಮ ಸಾಹಿತ್ಯ ಚಟುವಟಿಕೆಗಾಗಿ ಪಕ್ಕದಲ್ಲಿ ಮತ್ತೊಂದು ಕಟ್ಟಡ ಕಟ್ಟಿಸಿಕೊಂಡಿದ್ದಾರೆ. ಈ ಕಟ್ಟಡಕ್ಕೆ ಸುಮಾರು 90 ವರ್ಷಗಳು ಆಗಿರಬಹುದು. 75 ಅಡಿ X 105 ಅಡಿ ವಿಸ್ತೀರ್ಣದ ನಿವೇಶನ ಇದಾಗಿದೆ. ಮ್ಯೂಸಿಯಂ ಅಷ್ಟೇ ಅಲ್ಲದೆ, ಸಾಹಿತ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸಭಾ ಮಂಟಪಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಸದ್ಯ ಖರ್ಚು ವೆಚ್ಚದ ಅಂದಾಜು ಮಾಡಿಲ್ಲ. ಇನ್ನಷ್ಟೇ ಕಟ್ಟಡಗಳ ಹಾನಿಯ ಬಗ್ಗೆ ಪರಿಶೀಲಿಸಬೇಕಿದೆ. ಆ ನಂತರ ವೆಚ್ಚದ ಅಂದಾಜು ದೊರೆಯಲಿದೆ ಎಂದು ವಿವರಿಸಿದರು.

ಶೀಘ್ರ ಇ-ಪುಸ್ತಕ ಬಿಡುಗಡೆ: ಪ್ರಸ್ತುತದಲ್ಲಿ ನಮ್ಮ ತಾಯಿಯವರ ಬರಹಗಳ ಸಂಬಂಧ ಆಡಿಯೋ ಮತ್ತು ಇ-ಪುಸ್ತಕ ಸಿದ್ಧಪಡಿಸುವ ಕೆಲಸದಲ್ಲಿ ನಿರತವಾಗಿದ್ದೇನೆ. ಇ-ಪುಸ್ತಕಗಳು (ಡಿಜಿಟಲ್ ಪುಸ್ತಕಗಳು) ಮುಂಬರುವ ಜನವರಿಯಲ್ಲಿ ಬಿಡುಗಡೆಗೊಳ್ಳಲಿವೆ. ಬಳಿಕ ಆಡಿಯೋ ಪುಸ್ತಕಗಳು ಮಾರ್ಚ್‌ನಲ್ಲಿ ಬಿಡುಗಡೆ ಆಗಲಿವೆ. 3 ಸಣ್ಣ ಕಥೆಗಳ ಕಥಾ ಸಂಕಲನ ಮತ್ತು 21 ಕಾದಂಬರಿಗಳನ್ನು ಆಡಿಯೋ ಮತ್ತು ಇ-ಪುಸ್ತಕ ಎರಡರಲ್ಲೂ ಹೊರ ತರುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ಆಪ್ತ ಸಮಾಲೋಚನಾ ಕೇಂದ್ರ: ನಮ್ಮ ಅಮ್ಮ ಹೆಚ್ಚಾಗಿ ಮಾನಸಿಕ ಸಮಸ್ಯೆ ಬಗ್ಗೆ ಬರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಮ್ಯೂಸಿಯಂ ಜೊತೆಗೆ ಆಪ್ತ ಸಮಾಲೋಚನಾ ಕೇಂದ್ರ ತೆರೆದು, ಉಚಿತ ಸೇವೆ ನೀಡಲು ಉದ್ದೇಶಿಸಲಾಗಿದೆ. ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನದ ಖಜಾಂಚಿ ಪಾರ್ವತಿ ವಟ್ಟಂ ಹಾಗೂ ನನ್ನ ಪುತ್ರಿ ಅನುಷಾ ಕುಮಾರ್ ಮೇಲ್ವಿಚಾರಣೆಯಲ್ಲಿ ಆಪ್ತ ಸಮಾಲೋಚನ ಕೇಂದ್ರ ನಡೆಯಲಿದೆ ಎಂದರು.

ಪಾರ್ವತಿ ವಟ್ಟಂ ಮಾತನಾಡಿ, ತ್ರಿವೇಣಿಯವರು ಬೆಕ್ಕಿನ ಕಣ್ಣು, ಶರಪಂಜರ ಸೇರಿದಂತೆ ತಮ್ಮ ಅನೇಕ ಬರಹಗಳಲ್ಲಿ ಮಾನಸಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ತ್ರಿವೇಣಿಯವರ ಮೊಮ್ಮಗಳಾದ ಮೀರಾ ಶಂಕರ್ ಅವರ ಪುತ್ರಿ ಅನುಷಾ ಕುಮಾರ್ ಕ್ಲಿನಿಕಲ್ ಸೈಕಾಲಜಿ ವ್ಯಾಸಂಗ ಮಾಡುತ್ತಿದ್ದಾರೆ. ಅನುಷಾ ಅವರ ಪರಿಕಲ್ಪನೆಯಲ್ಲಿ ಇಲ್ಲೊಂದು ಕೊಠಡಿಯಲ್ಲಿ ಆಪ್ತ ಸಮಾಲೋಚನಾ ಕೇಂದ್ರ ಆರಂಭಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಮಹಿಳಾ ಲೇಖಕಿ ಮನೆ ಮ್ಯೂಸಿಯಂ ಆಗುತ್ತಿರುವುದು ರಾಜ್ಯಕ್ಕೆ ಇದೇ ಮೊಟ್ಟ ಮೊದಲು

ಈ ನಿವಾಸ ನನ್ನ ಮುತ್ತಾತನ ಕಾಲದ್ದು. ಇದೊಂದು ಪಾರಂಪರಿಕ ಕಟ್ಟಡ. ಮ್ಯೂಸಿಯಂ ನಿರ್ಮಾಣ ನನ್ನ ಹಲವು ವರ್ಷಗಳ ಕನಸು. ಮ್ಯೂಸಿಯಂನಲ್ಲಿ ಸದ್ಯಕ್ಕೆ ನನ್ನ ತಾಯಿಯ ಪುತ್ಥಳಿ ಪ್ರತಿಷ್ಠಾಪಿಸಲು ಉದ್ದೇಶಿಸಿದ್ದೇನೆ. ಇಡೀ ಕರ್ನಾಟಕಕ್ಕೆ ಒಬ್ಬ ಮಹಿಳಾ ಲೇಖಕಿಯ ಮನೆ ಜೀರ್ಣೋದ್ಧಾರದ ಮೂಲಕ ಮ್ಯೂಸಿಯಂ ಆಗುತ್ತಿರುವುದು ತ್ರಿವೇಣಿ ಅವರದ್ದೇ ಮೊಟ್ಟ ಮೊದಲನೆಯದ್ದು. ಜೊತೆಗೆ ಇಡೀ ಭಾರತದಲ್ಲಿ ಮೂರನೇಯದು. ಇದು ನನ್ನ ನಿವಾಸ ಮಾತ್ರವಲ್ಲದೇ, ಇಡೀ ಕರ್ನಾಟಕ ಜನತೆ ಮತ್ತು ತ್ರಿವೇಣಿಯವರ ಅಭಿಮಾನಿಗಳಿಗೆ ಸೇರಿದ್ದು. ಎಲ್ಲರಿಗೂ ಇಲ್ಲಿ ಸ್ವಾಗತವಿದೆ. –ಮೀರಾ ಶಂಕರ್

ನಟಿ ಅಭಿನಯಗೆ 2 ವರ್ಷ ಜೈಲು



ಬೆಂಗಳೂರು, ಡಿ.14–ಅನುಭವ ಚಿತ್ರದ ಖ್ಯಾತಿಯ ನಟಿ ಅಭಿನಯಗೆ ಎರಡು ವರ್ಷದ ಜೈಲು ಶಿಕ್ಷೆ ಪ್ರಕಟವಾಗಿದೆ. ವರದಕ್ಷಿಣೆ ನೀಡುವಂತೆ ಪೋಷಕರ ಜೊತೆ ಸೇರಿ ಅತ್ತಿಗೆಗೆ ಕಿರುಕುಳ ನೀಡಿದ ಆರೋಪದಲ್ಲಿ ಹೈಕೋರ್ಟ್ ಜೈಲು ಶಿಕ್ಷೆ ವಿಧಿಸಿದೆ. ಅಭಿನಯ ಅವರ ಅಣ್ಣ ಶ್ರೀನಿವಾಸ್ ಅವರ ಪತ್ನಿ ಲಕ್ಷ್ಮೀದೇವಿಗೆ ಕಿರುಕುಳ ನೀಡಿದ ಆರೋಪದಲ್ಲಿ ವಿಚಾರಣೆ ನಡೆಸಿದ ಹೈಕೋರ್ಟ್ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. 2002ರಲ್ಲಿ ಲಕ್ಷ್ಮೀದೇವಿ ಎಂಬುವವರು ಅಭಿನಯ ಕುಟುಂಬದ ವಿರುದ್ಧ ದೂರು ದಾಖಲಿಸಿದ್ದರು. 1998ರಲ್ಲಿ ಅಭಿನಯ ಅಣ್ಣ ಶ್ರೀನಿವಾಸ್ ಅವರನ್ನು ಲಕ್ಷ್ಮೀದೇವಿ ಮದುವೆಯಾಗಿದ್ದರು. ವಿವಾಹದ ಸಮಯದಲ್ಲಿ 80 ಸಾವಿರ ರೂ. ಹಾಗೂ 250 ಗ್ರಾಂ ಚಿನ್ನಾಭರಣ ಪಡೆದಿದ್ದರು. ಇದಾದ ನಂತರವೂ 1 ಲಕ್ಷ ರೂ.ಗೆ ಬೇಡಿಕೆ ಇಟ್ಟು 20 ಸಾವಿರ ಪಡೆದ ನಂತರವೂ ಕಿರುಕುಳ ಕೊಡುತ್ತಿದ್ದರು. ಹಣ ಕೊಟ್ಟರೂ ಸಹ ನನ್ನನ್ನು ಪಾಲಕರ ಮನೆಯಲ್ಲಿ ಬಿಟ್ಟಿದ್ದರು ಎಂದು ದೂರಿನಲ್ಲಿ ಲಕ್ಷ್ಮೀದೇವಿ ಆರೋಪಗಳ ಸುರಿಮಳೆಗೈದಿದ್ದರು. ಹೆರಿಗೆಗೆ ತವರು ಮನೆಗೆ ಹೋದ ಲಕ್ಷ್ಮೀದೇವಿಯನ್ನು ಮನೆಗೆ ಕರೆತರದ ಅಭಿನಯಾ ಫ್ಯಾಮಿಲಿ, ಗಂಡನ ಮನೆಗೆ ಬಂದ ಲಕ್ಷ್ಮೀ ಹಾಗು ಆಕೆಯ ಪಾಲಕರಿಗೆ ಅವಮಾನ ಮಾಡಿರುವ ಆರೋಪವು ಇದೆ. ಅಭಿನಯ ಸೇರಿ ಇಡೀ ಕುಟುಂಬದ ವಿರುದ್ಧ 2002ರಲ್ಲಿ ಚಂದ್ರಾಲೇಔಟ್ ಠಾಣೆಗೆ ಲಕ್ಷ್ಮೀದೇವಿ ದೂರು ದಾಖಲಿಸಿದ್ದರು.

'ನಮ್ಮ ಕ್ಲಿನಿಕ್' ಮೇಲ್ದರ್ಜೆಗೆ ಬಜೆಟ್‌ನಲ್ಲಿ ಅನುದಾನ

- ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾಹಿತಿ
- ಬಡವರಿಗೆ ಪ್ರಾಥಮಿಕ ಚಿಕಿತ್ಸೆ ಕಲ್ಪಿಸಲು ನಮ್ಮ ಕ್ಲಿನಿಕ್




ಬೆಂಗಳೂರು, ಡಿ.14(ಕೆಎಂಶಿ)–ನಮ್ಮ ಕ್ಲಿನಿಕ್‌ಗಳನ್ನು ಮೇಲ್ದರ್ಜೆ ಗೇರಿಸಲು ಮುಂದಿನ ಬಜೆಟ್‌ನಲ್ಲಿ ಅನುದಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಡಿಸ್ಪೆನ್ಸರಿಗಳಿದ್ದವು. ವೈದ್ಯರು ನೆಗಡಿ, ಜ್ವರ ಇತ್ಯಾದಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ನೀಡುತ್ತಿದ್ದರು. ಬಡವರಿಗೆ ಪ್ರಾಥಮಿಕ ಚಿಕಿತ್ಸೆ ನೀಡುವ ದೃಷ್ಟಿಯಿಂದ ನಮ್ಮ ಕ್ಲಿನಿಕ್ ಸ್ಥಾಪಿಸಲಾಗುತ್ತಿದೆ. ರಾಜ್ಯಾದ್ಯಂತ 437 ನಮ್ಮ ಕ್ಲಿನಿಕ್ ಸ್ಥಾಪನೆ ಯಾಗುತ್ತಿವೆ. ಪ್ರಥಮ ಹಂತದಲ್ಲಿ ನೂರು ಕ್ಲಿನಿಕ್‌ಗಳು ಪ್ರಾರಂಭವಾಗುತ್ತವೆ. ನಮ್ಮ ಕ್ಲಿನಿಕ್‌ಗಳ ಕಾರ್ಯ ವೈಖರಿ ನೋಡಿ ಕೊಂಡು ತಪಾಸಣೆ ಮಾಡಿ ಔಷಧ ನೀಡುವುದಲ್ಲದೆ, ರಕ್ತ ಪರೀಕ್ಷೆ ಮುಂತಾದ ಪೂರ್ವಭಾವಿ ಪರೀಕ್ಷೆಗಳನ್ನು ಕೈಗೊಳ್ಳಲು ವ್ಯವಸ್ಥೆ ಕಲ್ಪಿಸಲಾಗುವುದು. ಟೆಲಿಮೆಡಿಸಿನ್ ವ್ಯವಸ್ಥೆಯನ್ನೂ ಇದಕ್ಕೇ ಜೋಡಿಸಲಾಗುವುದು ಎಂದರು. ಕೇಂದ್ರ ಗೃಹ ಸಚಿವರು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಕರೆದು ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಹೋಗುವಂತೆ ಸಲಹೆ ನೀಡಲು ಸಭೆ ಕರೆದಿದ್ದಾರೆ. ಅಲ್ಲಿ ಕರ್ನಾಟಕದ ನಿಲುವನ್ನು ಕಾನೂನಾತ್ಮಕ, ಆಡಳಿತಾತ್ಮಕ ಹಾಗೂ ರಾಜಕೀಯವಾಗಿ ತಿಳಿಸಲಾಗುವುದು. ಕರ್ನಾಟಕದ ನಿಲುವು ಸ್ಪಷ್ಟವಿದೆ ಎಂದು ಮನವರಿಕೆ ಮಾಡಲು ಸಿದ್ಧವಾಗಿ ಹೋಗುತ್ತಿರುವುದಾಗಿ ತಿಳಿಸಿದರು.

ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆಗೂ ಮುನ್ನ ಹಲವಾರು ವರದಿಗಳು ಬಂದಿವೆ. ಕಾಯ್ದೆ ಆಗಿ ಅಂತಿಮಗೊಂಡಿದೆ. ಇದು ಈಗಿನ ಕಾನೂನಿನ ವಸ್ತುಸ್ಥಿತಿ. ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆಯ ನಿರ್ಣಯಗಳನ್ನು ಅವರು ಪ್ರಶ್ನಿಸಿದ್ದಾರೆ. ಇದನ್ನು ನಿರ್ವಹಿಸಬೇಕೋ, ಬೇಡವೋ ಎಂದೇ ಸರ್ವೋಚ್ಚ ನ್ಯಾಯಾಲಯ ತೀರ್ಮಾನ ಮಾಡಿಲ್ಲ. ಸಂವಿಧಾನಬದ್ಧವಾಗಿ ಯೋಚನೆ ಮಾಡಿದಾಗ ಅದು ಮೆಂಟೇನಬಲ್ ಆಗೋಲ್ಲ ಈಗಾಗಲೇ ಅದರ ಬಗ್ಗೆ ಸಾಕಷ್ಟು ವಾದಗಳಾಗಿವೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವಿರುವಾಗ ಯಾವುದೇ ವ್ಯಾಖ್ಯಾನ ಮಾಡುವುದಿಲ್ಲ. ಪ್ರಕರಣದ ಮೇಲೆ ಯಾವುದೇ ಪ್ರಭಾವ ಬೀರಬಾರದು ಎನ್ನುವ ಕಾರಣದಿಂದ ನಾನು ವ್ಯಾಖ್ಯಾನ ಮಾಡುವುದಿಲ್ಲ ಎಂದರು.

ನಿಧನ

ದಾಕ್ಷಾಯಣಿ



ಮೈಸೂರು, ಡಿ.14– ಮೈಸೂರಿನ ಚಾಮರಾಜಪುರಂನ ಬಾಲಕೃಷ್ಣರಾವ್ ರಸ್ತೆಯ ನಿವಾಸಿ ಲೇಟ್ ಎಲ್.ಬಾಲಕೃಷ್ಣ ಅವರ ಪತ್ನಿ ದಾಕ್ಷಾಯಣಿ (62) ಅವರು ಬುಧವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪುತ್ರಿಯರಾದ ಸುಶ್ಮಧ್ರುವ, ಚೆನ್ನಮ್ಮ, ಅಳಿಯ ಧ್ರುವ ಅರಸ್ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರು ಎಂಡಿಎ ಮಾಜಿ ಅಧ್ಯಕ್ಷ ಡಿ.ಲಿಂಗಯ್ಯ ಅವರ ಸೊಸೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹೇಶ್



ಮೈಸೂರು ತಾಲೂಕಿನ ಕಾಳಿಸಿದ್ದನಹುಂಡಿ ಗ್ರಾಮದ ನಿವಾಸಿ ಮಹೇಶ್ (35) ಡಿ.14ರಂದು ಸಂಜೆ ನಿಧನರಾದರು. ಮೃತರು ಪತ್ನಿ, ಮಕ್ಕಳು, ಸ್ನೇಹಿತರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಡಿ.15)ಗುರುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕಾಳಿಸಿದ್ದನಹುಂಡಿಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಇತ್ತೀಚೆಗೆ ಬೆಂಗಳೂರಿನ ಅನಿಲ್ ಮಾರ್ಷಲ್ ಆರ್ಟ್ಸ್ ಅಕಾಡೆಮಿಯಲ್ಲಿ ನಡೆದ 2ನೇ ರಾಜ್ಯಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ಬಿ.ಎಂ.ಶ್ರೀನಗರದ ಮನಸು ಕಲಾಮಂಡಲದ ಕರಾಟೆ ಪಟುಗಳು ಬಹುಮಾನ ಪಡೆದಿದ್ದಾರೆ. ಸೂಯಿ ಶಂಕರ್ ತರಬೇತಿ ನೀಡಿದ್ದಾರೆ. ಈ ಕರಾಟೆ ಪಂದ್ಯಾ ವಳಿಯಲ್ಲಿ ಸುಮಾರು 600 ಮಕ್ಕಳು ಭಾಗವಹಿಸಿದ್ದರು.

ಯಶಸ್ವಿನಿ ಸೋಮಶೇಖರ್ ಮುಡಾಗೆ ನೂತನ ಅಧ್ಯಕ್ಷ?



ಮೈಸೂರು,ಡಿ.14(ಎಂಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಧ್ಯಕ್ಷಗಾದಿಗೆ ಬಿಜೆಪಿ ಹಿರಿಯ ಮುಖಂಡ ಯಶಸ್ವಿನಿ ಸೋಮಶೇಖರ್ ಅವರನ್ನು ನೇಮಕ ಮಾಡಲು ಸರ್ಕಾರ ಉದ್ದೇಶಿಸಿದೆ ಎಂದು ಮೂಲಗಳು ತಿಳಿಸಿವೆ. ಕಳೆದ 5 ತಿಂಗಳಿಂದ ಖಾಲಿ ಇರುವ ಮುಡಾ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಿರಿಯ ಮುಖಂಡ ಯಶಸ್ವಿನಿ ಸೋಮಶೇಖರ್ ನೇಮಿಸಿ ಸದ್ಯದಲ್ಲಿಯೇ ಆದೇಶ ಹೊರಬೀಳಲಿದೆ ಎನ್ನಲಾಗುತ್ತಿದೆ. ಮುಡಾ ಅಧ್ಯಕ್ಷ ಗಾದಿಗೆ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈ.ವಿ.ರವಿಶಂಕರ್, ಟಿ.ಎಸ್.ಶ್ರೀವತ್ಸ, ಯಶಸ್ವಿನಿ ಸೋಮಶೇಖರ್ ಹೆಸರು ಕೇಳಿಬಂದಿತ್ತು. ಆದರೆ ಸೋಮಶೇಖರ್ ಅಧ್ಯಕ್ಷರಾಗುವುದು ಖಚಿತವೆಂದು ತಿಳಿದುಬಂದಿದೆ. 5 ತಿಂಗಳಿಂದ ಮುಡಾದಲ್ಲಿ ಅಧ್ಯಕ್ಷರಿಲ್ಲದೆ ಜನರ ಕೆಲಸಗಳು ನನೆಗುದಿಗೆ ಬಿದ್ದಿವೆ. ಯಾವುದೇ ಸಭೆಗಳು ನಡೆದಿಲ್ಲ. ನಗರದ ಸಮಗ್ರ ಅಭಿವೃದ್ಧಿಗೆ ಚಿಂತನೆ ನಡೆಸುವ ದೂರದೃಷ್ಟಿಯ ಅಧ್ಯಕ್ಷನ ಅಗತ್ಯವಿದೆ. ಅಧ್ಯಕ್ಷರಿಲ್ಲದೆ ಪ್ರಮುಖ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬರೀ ಅಧಿಕಾರಿಗಳ ದರ್ಬಾರ್ ನಡೆಯುತ್ತಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.12.2022 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಸಪ್ತಮೀ, ನಕ್ಷತ್ರ: ಪೂಘ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ದಕ್ಷಿಣ ಭಾರತ ಮಾನವ ಹಕ್ಕುಗಳ ಶಿಕ್ಷಣ ಮತ್ತು ಸಂರಕ್ಷಣಾ ಘಟಕ :** ವಿಶ್ವ ಮಾನವ ಹಕ್ಕುಗಳ ದಿನಾಚರಣೆ, ಉದ್ಘಾಟನೆ : ಜನ ಶಿಕ್ಷಣ ಸಂಸ್ಥೆ ನಿವೃತ್ತ ನಿರ್ದೇಶಕ ರಮೇಶ್, ಅಧ್ಯಕ್ಷತೆ : ಜಿಲ್ಲಾ ಮಾನವ ಹಕ್ಕುಗಳ ಕೇಂದ್ರದ ಪ್ರಮೀಳ ಆರ್., ಮುಖ್ಯ ಅತಿಥಿಗಳು : ಗಂಗಪ್ಪ, ಭೀಮಪ್ಪ, ಚಂದ್ರಶೇಖರ್, ಸ್ಥಳ: ಸಮುದಾಯ ಭವನ, ಅಂಬೇಡ್ಕರ್ ನಗರ, ಬೆಳಗ್ಗೆ 11ಕ್ಕೆ.

■ **ಅಭ್ಯುದಯ ಮಹಿಳಾ ಸಮಾಜ :** ವಿವಿಧ ಜಾನಪದ ಮತ್ತು ಸಂಗೀತ ವಿದ್ವಾಂಸರಿಂದ ಜನಪದ ಗೀತೆ ಮತ್ತು ಸುಗಮ ಸಂಗೀತ ಕಾರ್ಯಾಗಾರ, ಸ್ಥಳ: ಅಭ್ಯುದಯ ಮಹಿಳಾ ಸಮಾಜ, ಜೆ.ಪಿ.ನಗರ, ಸಂಜೆ 4ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಸಂಗೀತ ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜೆ. ಶಶಿಧರ ಪ್ರಸಾದ್, ಸನ್ಮಾನಿಸುವವರು : ಸಂಗೀತ ವಿವಿ ಉಪಕುಲಪತಿ ಬಿ. ನಾಗೇಶ್ ಬೆಟ್ಟಕೋಟೆ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದನಾ ನುಡಿ : ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಮುಖ್ಯ ಅತಿಥಿಗಳು : ಪ್ರಕಾಶಕ ಬೆಟ್ಟೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಶ್ರೀಮಾತೆ ಶಾರದಾದೇವಿಯವರ 170ನೇ ಜನ್ಮದಿನದ ಅಂಗವಾಗಿ ಬೆಳಗ್ಗೆ 5.15 ರಿಂದ ವೇದಮಂತ್ರ ಪಠಣ, ಮಂಗಳಾರತಿ, ಭಜನೆ, ವಿಶೇಷ ಪೂಜೆ, ಲಲಿತಾಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾದನ, ಆರತಿ, ಹೋಮ, ಪ್ರಸಾದ ವಿನಿಯೋಗ, ಸಂಜೆ 4.30 ರಿಂದ ಶ್ರೀಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6ರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ರಾತ್ರಿ 7 ರಿಂದ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಡಾ. ಬೆ.ನಾ. ವಿಜಯೇಂದ್ರಾಚಾರ್ ಅವರಿಂದ 'ಮಹಾಭಾರತದ ಉದ್ಯೋಗ ಪರ್ವ' ಕುರಿತು ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಮಠದ ಆವರಣ, ಸಂಜೆ 5 ಗಂಟೆಯಿಂದ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಉಪನ್ಯಾಸ, ಸ್ಥಳ: ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದುಷಿ ವೃಂದಾ ಆಚಾರ್ಯ ಅವರಿಂದ ಗಾಯನ, ವಿದ್ವಾನ್ ಎನ್.ಎನ್.ಗಣೇಶ್‌ಕುಮಾರ್–ಪಿಟೀಲು, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟ, ಸ್ಥಳ: ಮೈಸೂರು ಕೆ.ವಾಸುದೇವಾಚಾರ್ಯ ಭವನ, ಸಂಜೆ 6ರಿಂದ.

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.15 ರಿಂದ.

ಬಿಳುಗಲಿ ಗ್ರಾಮದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಬೆಳಗ್ಗೆ 11ಕ್ಕೆ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಪಂ ಸದಸ್ಯ ಜಿ.ಕೆ. ಬಸವೇಗೌಡ ಅವರಿಂದ ಧ್ವಜಾರೋಹಣ, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಬಾಲರಾಜು ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ. ಜಿ.ಆರ್. ಮಂಜುನಾಥ್, ಮುಖ್ಯ ಅತಿಥಿಗಳು : ಜಿ.ಎಸ್. ಬಸವರಾಜು, ಎಸ್. ಸುರೇಶ್, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಗಾಯನ –ಜಯಂತಿ ವಿ.ಭಟ್, ಮತ್ತೂರು ಕುಮಾರಸ್ವಾಮಿ, ಜಿ.ಪುಷ್ಪಲತಾ, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಎಸ್.ವಿ.ಸತ್ಯನಾರಾಯಣ–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಆರ್.ಮಹೇಶ್, 4.00 ಜನಪದ ಸಂಗೀತ–ಶಂಕರೇಗೌಡ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ–ಭತ್ತದ ಕೃಷಿಯಲ್ಲಿನ ಅನುಭವ ಕುರಿತು ರಾಮಕೃಷ್ಣ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಹಲೋ ಯುವವಾಣಿ–ಸ್ವಾತಂತ್ರ್ಯ ಅಮೃತ ಮಹೋತ್ಸವದ ವೇಳೆ ವಿಶೇಷ ರಸಪ್ರಶ್ನೆ, ಪ್ರಸ್ತುತಿ–ನಿವೇದಿತಾ, 10.00 ನಾಟಕ, 10.30 ಸವಿನೆನಪು

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ವನರಂಗ:** ಮೈಸೂರಿನ ಕೆ.ಎನ್.ಮಹೇಶ್ ಅವರಿಂದ ವೀರಗಾಸೆ, ಕೊಡಗಿನ ಸೂರಜ್ ಮತ್ತು ತಂಡದಿಂದ ಬೊಳಕಾಟ್, ಸಂಜೆ 5ಕ್ಕೆ

■ **ಶ್ರೀರಂಗ ಮಂದಿರ (ಚಲನಚಿತ್ರೋತ್ಸವ):** ಬೆಳಗ್ಗೆ 10.30ರಿಂದ ಕೊರಲ್ ವುಮೆನ್ (ಇ), ನಿರ್ದೇಶನ: ಪ್ರಿಯಾ ತುವಾಸ್ಸೆರಿ, ದಿ ಸ್ಪಾರ್ಕ್ ಸೇವಿಯರ್ಸ್ (ಇ), ನಿರ್ದೇಶನ: ವಿಜಯ್ ಬೇಡಿ ಮತ್ತು ಅಜಯ್ ಬೇಡಿ, ಮಧ್ಯಾಹ್ನ 12ರಿಂದ ಟಿಂಬಕ್ಟು (ಇ), ನಿರ್ದೇಶನ: ರಿಂಟು ಥಾಮಸ್ ಮತ್ತು ಸುಷ್ಮಿತ್ ಘೋಷ್, ಸೌಹೃದ (ಮ), ನಿರ್ದೇಶನ: ಉಮಾ ಸನ್ಯಾಸಿ, ಮಧ್ಯಾಹ್ನ 2ರಿಂದ ಗಂಧದ ಗುಡಿ (ಕ), ನಿರ್ದೇಶನ: ವಿಜಯ್.

■ **ಭೂಮಿಗೀತ :** ಎರ್ನಾಕುಲಂನ ಲೋಕಧರ್ಮಿ ಕಲಾ ತಂಡದಿಂದ ಛಾಯಾಚಿತ್ರಂ ಮಾಯಾಚಿತ್ರಂ (ಮ) ನಾಟಕ ಪ್ರದರ್ಶನ, ರಚನೆ : ಡಾ. ಜೆಬಿನ್ ಜೆಸ್‌ಮಸ್, ನಿರ್ದೇಶನ : ಡಾ. ಚಂದ್ರದಾಸನ್, ಸಂಜೆ 6.30ಕ್ಕೆ

■ **ಸಂಪತ್ ರಂಗ ಮಂದಿರ :** ಬೆಂಗಳೂರಿನ ಸಮನ್ವಿತ ಕಲಾ ತಂಡದಿಂದ ಅವನಿ (ಕ) ನಾಟಕ ಪ್ರದರ್ಶನ, ರಚನೆ : ಕೆ.ವಿ. ರಾಧಾಕೃಷ್ಣ, ನಿರ್ದೇಶನ : ಅಕ್ಷತಾ ಮಾಯಸಂದ್ರ, ಸಂಜೆ 7ಕ್ಕೆ.

■ **ಕಲಾಮಂದಿರ :** ತೆಲಂಗಾಣದ ಶ್ರೀ ವೆಂಕಟೇಶ್ವರ ಸುರಭಿ ಥಿಯೇಟರ್ ತಂಡದಿಂದ ಮಾಯಾಬಜಾರ್ (ತೆ) ನಾಟಕ ಪ್ರದರ್ಶನ, ರಚನೆ : ಮಲ್ಲಾಡಿ ವೆಂಕಟಕೃಷ್ಣ ಶರ್ಮ, ನಿರ್ದೇಶನ : ಸುರಭಿ ಜಯಚಂದ್ರ ವರ್ಮ, ಸಂಜೆ 7.30ಕ್ಕೆ.

■ **ಬಿ.ವಿ.ಕಾರಂತ ರಂಗಚಾವಡಿ:** ಮೈಸೂರಿನ ನಿತ್ಯನಿರಂತರ ಟ್ರಸ್ಟ್–ವಿಶೇಷ ಚೇತನ ಕಲಾವಿದರಿಂದ ಜಾನಪದ ನೃತ್ಯ, ಮೈಸೂರಿನ ದಿವಾಕರ ಹೆಗಡೆ ಅವರಿಂದ ತಾಳಮದ್ದಳೆ, ಸಂಜೆ 4 ರಿಂದ.

ಜನೌಷಧಿ ತೆರೆಯಲು ಆನ್‌ಲೈನ್ ಒಪ್ಪಂದದ ಮೂಲಕ ವರ್ತಕರಿಗೆ 1.61 ಲಕ್ಷ ವಂಚನೆ

ಮೈಸೂರು,ಡಿ.14–ಜನೌಷಧಿ ಕೇಂದ್ರ ತೆರೆಯಲು ಆನ್‌ಲೈನ್ ಮೂಲಕ ಒಪ್ಪಂದ ಮಾಡಿಕೊಂಡು ವರ್ತಕರೊಬ್ಬರಿಗೆ 1.61 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಸರಸ್ವತಿಪುರಂ ನಿವಾಸಿ ಸಿ.ನೀಲಕಂಠ(64) ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ 7699522896 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಜನೌಷಧಿ ಕೇಂದ್ರ ತೆರೆಯಲು ಅರ್ಜಿ ಭರ್ತಿ ಮಾಡಿ 11,400 ರೂ. ಜಮೆ ಮಾಡುವಂತೆ ತಿಳಿಸಿದ್ದಾನೆ. ನಂತರ ನೀಲಕಂಠ ಅವರಿಂದ ಡಿ–ಫಾರ್ಮಾ ಸರ್ಟಿಫಿಕೇಟ್, ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಅನ್ನು ವಾಟ್ಸಾಪ್ ಮೂಲಕ ತರಿಸಿಕೊಳ್ಳುವುದರ ಜೊತೆಗೆ ಒಪ್ಪಂದ ಪತ್ರದೊಂದಿಗೆ 1,61,300 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ಕುವೆಂಪುನಗರದ ಬಿ.ಜಯಂತಿ ಪೈ(74) ಎಂಬುವರು ಡಿಟಿಡಿಸಿ ಕೊರಿಯರ್ ಹೆಲ್ಪ್‌ಲೈನ್ ನಂಬರ್ ಅನ್ನು ಗೂಗಲ್‌ನಲ್ಲಿ ಹುಡುಕಿದಾಗ ದೊರೆತ 7305770577 ಸಂಖ್ಯೆಗೆ ಕರೆ ಮಾಡಿದ್ದಾರೆ. ಆಗ ಮಾತನಾಡಿದ ವ್ಯಕ್ತಿ ಕೊರಿಯರ್ ಬಗ್ಗೆ ಮಾಹಿತಿ ಬೇಕಾದರೆ ಆನ್‌ಲೈನ್ ಮೂಲಕ 5 ರೂ. ಪಾವತಿಸಬೇಕೆಂದು ತಿಳಿಸಿದ್ದಾನೆ. ಆತ ಹೇಳಿದಂತೆ ಕ್ವಿಕ್ ಸಪೋರ್ಟ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡ ಜಯಂತಿ ಅವರು ತಮ್ಮ ಡೆಬಿಟ್ ಕಾರ್ಡ್ ಮತ್ತು ಸಿವಿವಿ ಸಂಖ್ಯೆ ನಮೂದಿಸುತ್ತಿದ್ದಂತೆಯೇ ಅವರ ಖಾತೆಯಲ್ಲಿದ್ದ 39,173 ರೂ. ವರ್ಗಾವಣೆಯಾಗಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಹಳೇ ಚಿನ್ನದ ನಾಣ್ಯದ ಆಮಿಷ ತೋರಿಸಿ ಮೆಡಿಕಲ್ ಶಾಪ್ ಮಾಲಕಿಗೆ 9.5 ಲಕ್ಷ ವಂಚನೆ

ಮದ್ದೂರು,ಡಿ.14–ಹಳೇ ಕಾಲದ ಚಿನ್ನದ ನಾಣ್ಯಗಳನ್ನು ಕಡಿಮೆ ಬೆಲೆಗೆ ಕೊಡಿಸುವುದಾಗಿ ನಂಬಿಸಿ ಮೆಡಿಕಲ್ ಶಾಪ್ ಮಾಲೀಕರಿಂದ 9.5 ಲಕ್ಷ ನಗದು ಹಾಗೂ 100 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮದ್ದೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹಿಂಭಾಗ ಮೆಡಿಕಲ್ ಸ್ಟೋರ್ ಹೊಂದಿರುವ ವಿ.ಎನ್.ಪವಿತ್ರಾ(37) ವಂಚನೆಗೊಳಗಾದವರಾಗಿದ್ದು, ಇವರಿಗೆ 9606781866 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ, ತಾನು ನಿಧನ ಹೊಂದಿರುವ ಪವಿತ್ರಾ ಅವರ ತಂಗಿಯ ಗಂಡ ಕುಮಾರ್ ಅವರ ಆಪ್ತ ಸ್ನೇಹಿತ ಎಂದು ಪರಿಚಯ ಮಾಡಿಕೊಂಡಿದ್ದಾನೆ. ನಂತರ ಕುಮಾರ್ ಇದ್ದಿದ್ದರೆ ಒಂದು ಮುಖ್ಯವಾದ ವಿಷಯ ಮಾತನಾಡಬಹುದಿತ್ತು. ಈಗ ಅವರಿಲ್ಲವಲ್ಲಾ. ನಿಮ್ಮ ಬಳಿ ಮಾತನಾಡುವುದು ಬೇಡ ಎಂದಿದ್ದಾನೆ. ಕುತೂಹಲದಿಂದ ಏನು ವಿಷಯ ಎಂದು ಪವಿತ್ರಾ ಕೇಳಿದ್ದಾರೆ.

ಆಗ ಯಾರಿಗೂ ಹೇಳಬೇಡಿ ಎಂದು ಹೇಳುತ್ತಾ, ನಮ್ಮ ಮನೆ ಪಕ್ಕದಲ್ಲಿ ವಯಸ್ಸಾದ ಮುದುಕನಿದ್ದು, ಆತನ ಬಳಿ ಹಳೆಯ ಚಿನ್ನದ ನಾಣ್ಯಗಳಿವೆ. ಅವರು ಮಗಳ ಮದುವೆ ಮಾಡುತ್ತಿದ್ದು, ಅದಕ್ಕಾಗಿ ನಾಣ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಈಗಿನ ಬೆಲೆಯಲ್ಲಿ ಗ್ರಾಂವೊಂದಕ್ಕೆ 1 ಸಾವಿರ ರೂ. ಕಡಿಮೆ ಮಾಡಿ ನಿಮಗೆ ಕೊಡಿಸುತ್ತೇನೆ ಎಂದು ನಂಬಿಸಿದ್ದಾನೆ. ಕಳೆದ ನ.19ರಂದು ಮದ್ದೂರಿಗೆ ಬಂದ ಆತ, 2 ನಾಣ್ಯಗಳನ್ನು ಕೊಟ್ಟು ಪರೀಕ್ಷಿಸಿಕೊಳ್ಳುವಂತೆ ತಿಳಿಸಿದ್ದು, ಅವು ಅಸಲಿ ಚಿನ್ನದ ನಾಣ್ಯಗಳಾಗಿದ್ದವು. 400 ಗ್ರಾಂ ಚಿನ್ನದ ನಾಣ್ಯ ಕೊಡಿಸುವುದಾಗಿ ತಿಳಿಸಿದ ಆತ 9.5 ಲಕ್ಷ ರೂ. ನೀಡುವಂತೆ ಕೇಳಿ 4.5 ಲಕ್ಷ ರೂ. ಮುಂಗಡ ಹಣ ತೆಗೆದುಕೊಂಡು ಹೋಗಿದ್ದಾನೆ.

ಮರು ದಿನವೇ ಪವಿತ್ರಾ ಅವರಿಗೆ ಕರೆ ಮಾಡಿದ ಆತ, ನ.26ರಂದು ಚಿತ್ರದುರ್ಗ ಜಿಲ್ಲೆ ನಾಯಕನ ಹಟ್ಟಿಯ ತಿಪ್ಪೇಸ್ವಾಮಿ ದೇವಸ್ಥಾನದ ಬಳಿಗೆ ಉಳಿದ 5 ಲಕ್ಷ ರೂ. ಹಾಗೂ 100 ಗ್ರಾಂ ಚಿನ್ನಾಭರಣ ತೆಗೆದುಕೊಂಡು ಬರುವಂತೆ ತಿಳಿಸಿದ್ದಾನೆ. ಮುದುಕ ಮಗಳ ಮದುವೆಗೆ ಚಿನ್ನಾಭರಣ ಮಾಡಿಸಬೇಕಾಗಿದ್ದು, ನೀವು ಕೊಡುವ 100 ಗ್ರಾಂ ಚಿನ್ನಾಭರಣ ಅವನಿಗೆ ಕೊಟ್ಟು, ಅಷ್ಟೇ ತೂಕದ ನಾಣ್ಯಗಳನ್ನು ಕೊಡಿಸುವುದಾಗಿ ತಿಳಿಸಿದ್ದಾನೆ. ಅದರಂತೆ ಪವಿತ್ರಾ ತಮ್ಮ ಸಹೋದರ ಶ್ರೀಕಾಂತ್ ಜೊತೆ ನಾಯಕನ ಹಟ್ಟಿಗೆ ಹೋದಾಗ ಅವರಿಂದ ಹಣ ಹಾಗೂ ಚಿನ್ನಾಭರಣ ಪಡೆದು 500 ಗ್ರಾಂ ತೂಕದಷ್ಟು ನಾಣ್ಯಗಳಿದ್ದ ಒಂದು ಗಂಟನ್ನು ನೀಡಿದ್ದಾನೆ. ಅದನ್ನು ತಂದು ಪರೀಕ್ಷಿಸಿದಾಗ ಅವು ನಕಲಿ ಎಂದು ಗೊತ್ತಾಗಿದೆ. ಈ ಸಂಬಂಧ ಪವಿತ್ರಾ ಅವರು ಡಿ.12ರಂದು ರಾತ್ರಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮದ್ದೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿರ್ಮಾಣ ಸಾಮಗ್ರಿ ಪೂರೈಕೆ ಮಾಡದೇ ಗುತ್ತಿಗೆದಾರರಿಗೆ 67.91 ಲಕ್ಷ ವಂಚನೆ

ಲಲಿತಾದ್ರಿಪುರದ ಕುಶಾಲ್ ಟ್ರೇಡರ್ಸ್ ಮಾಲೀಕ ಕುಶಾಲ್ ವಿರುದ್ಧ ಪ್ರಕರಣ ದಾಖಲು

ಮಂಡ್ಯ, ಡಿ.14–ಕಬ್ಬಿಣ, ಸಿಮೆಂಟ್ ಸೇರಿದಂತೆ ನಿರ್ಮಾಣ ಸಾಮಗ್ರಿಗಳನ್ನು ಪೂರೈಸುವುದಾಗಿ ತಿಳಿಸಿ ಗುತ್ತಿಗೆದಾರರೊಬ್ಬರಿಗೆ 67.91 ಲಕ್ಷ ರೂ. ವಂಚಿಸಲಾಗಿದೆ ಎಂದು ಮೈಸೂರಿನ ಲಲಿತಾದ್ರಿಪುರಂನಲ್ಲಿ ಇರುವ ಕುಶಾಲ್ ಟ್ರೇಡರ್ಸ್ ಮಾಲೀಕ ಕುಶಾಲ್ ವಿರುದ್ಧ ಪ್ರಕರಣ ದಾಖಲಾಗಿದೆ. ಮೈಸೂರಿನ ಕುವೆಂಪುನಗರದಲ್ಲಿ ಕೆ.ಟಿ.ಆರ್. ಕನ್‌ಸ್ಟ್ರಕ್ಷನ್ ಎಂಬ ಸಂಸ್ಥೆ ಹೊಂದಿರುವ ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಟಿ.ರವಿ(56) ದೂರು ದಾಖಲಿಸಿದವರಾಗಿದ್ದು, ಇವರು ಬೆಂಗಳೂರಿನ ದಾಸನಹಳ್ಳಿ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರದಲ್ಲಿ ಸರ್ಕಾರಿ ಕಾಮಗಾರಿ ನಡೆಸಲು ಗುತ್ತಿಗೆ ಪಡೆದಿದ್ದಾರೆ. ಅದಕ್ಕೆ ಬೇಕಾಗುವ ಸಿಮೆಂಟ್ ಮತ್ತು ಕಬ್ಬಿಣ ಪೂರೈಕೆಗಾಗಿ ಕುಶಾಲ್ ಅವರಿಗೆ ಒಟ್ಟು 75,77,892 ರೂ. ತಮ್ಮ ಬ್ಯಾಂಕ್ ಖಾತೆ ಮೂಲಕ ವರ್ಗಾವಣೆ ಮಾಡಿದ್ದು, ಕುಶಾಲ್ ಅವರು ಕೇವಲ 7,86,435 ರೂ. ಮೌಲ್ಯದ ಸಾಮಗ್ರಿಯನ್ನು ಸರಬರಾಜು ಮಾಡಿ 67,91,457 ರೂ. ವಂಚಿಸಿದ್ದಾರೆ ಎಂದು ಮಂಡ್ಯ ಪಶ್ಚಿಮ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಬಂಡೀಪುರದ ಕೊಂಡಯ್ಯನಪಾಲ ಬಳಿ ಲಾರಿ ಡಿಕ್ಕಿಯಾಗಿ ಹೆಣ್ಣಾನೆ ಸಾವು ಪ್ರಕರಣ

ತಮಿಳ್ನಾಡು ಮೂಲದ ಚಾಲಕ, ಕ್ಲೀನರ್ ಬಂಧನ

ಗುಂಡ್ಲುಪೇಟೆ,ಡಿ.14(ಎಂಟಿವೈ)– ಲಾರಿ ಡಿಕ್ಕಿಯಾಗಿ ಕಾಡಾನೆ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮೂಲದ ಲಾರಿ ಚಾಲಕ ಹಾಗೂ ಕ್ಲೀನರ್‌ನನ್ನು ಬಂಧಿಸಲಾಗಿದೆ. ಈ ಮಧ್ಯೆ ಬುಧವಾರ ಬೆಳಗ್ಗೆ ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಕೇರಳದ ವೈಯ್ನಾಡು ಕಡೆಯಿಂದ ರಾಷ್ಟ್ರೀಯ ಹೆದ್ದಾರಿ 766(212)ಯಲ್ಲಿ ಮೂಲೆಹೊಳೆ ಚೆಕ್‌ಪೋಸ್ಟ್ ದಾಟಿ ಮದ್ದೂರು ವಲಯದ ಐರನ್ ಬ್ರಿಡ್ಜ್ ಗಸ್ತು ವ್ಯಾಪ್ತಿಗೆ ಸೇರಿದ ಕೊಂಡಯ್ಯನಪಾಲ ತಿರುವಿನ ಬಳಿ ಮಂಗಳವಾರ ರಾತ್ರಿ 7.50ರಲ್ಲಿ ವೇಗವಾಗಿ ಚಲಿಸುತ್ತಿದ್ದ ತಮಿಳುನಾಡಿನ(ಟಿಎನ್ 99, ಸಿ.7677) ಲಾರಿ ರಸ್ತೆ ದಾಟುತ್ತಿದ್ದ 35 ವರ್ಷದ ಹೆಣ್ಣಾನೆಗೆ ಡಿಕ್ಕಿ ಹೊಡೆದಿತ್ತು. ನೆಲಕ್ಕುರುಳಿದ ಹೆಣ್ಣಾನೆಯ ತಲೆಗೆ ಗಂಭೀರ ಗಾಯವಾಗಿ, ಸ್ಥಳದಲ್ಲೇ ಮೃತಪಟ್ಟಿತ್ತು.

ಆನೆ ಸಾವಿಗೆ ಕಾರಣರಾದ ಲಾರಿ ಚಾಲಕ ಕೊಯಮತ್ತೂರು ಜಿಲ್ಲೆ ಮದುಕರಿ ಸಮೀಪದ ಚನ್ನಯ್ಯಗೌಂಡಮುಡರ್ ನಿವಾಸಿ ಅಯ್ಯಪ್ಪಸ್ವಾಮಿ ಹಾಗೂ ಕ್ಲೀನರ್ ಕಂಬಾರ ಸ್ಟ್ರೀಟ್ ನಿವಾಸಿ ಎಸ್.ಆನಂದಕುಮಾರ್‌ನನ್ನು ಬಂಧಿಸಿ, ಲಾರಿಯನ್ನು ವಶಪಡಿಸಿಕೊಳ್ಳಲಾಗಿದೆ. ಈ ಇಬ್ಬರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.



ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡಿದ ಅಪಘಾತ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ತಮಿಳುನಾಡು ಮೂಲದ ಲಾರಿ ಡಿಕ್ಕಿಯಾಗಿ ಕಾಡಾನೆ ಮೃತಪಟ್ಟ ಚಿತ್ರಣವನ್ನು ಕರ್ನಾಟಕ, ಕೇರಳ ಹಾಗೂ ತಮಿಳುನಾಡಲ್ಲಿ ವನ್ಯಜೀವಿ ಪ್ರೇಮಿಗಳು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮೂಲಕ ವನ್ಯಜೀವಿಗಳ ಸಂರಕ್ಷಣೆಗೆ ಸಹಕರಿಸುವಂತೆ ಕೋರಿದ್ದಾರೆ.

ಮರಣೋತ್ತರ ಪರೀಕ್ಷೆ: ಮಂಗಳವಾರ ರಾತ್ರಿಯಿಂದ ರಸ್ತೆಯಲ್ಲೇ ಬಿದ್ದಿದ್ದ ಆನೆ ಕಳೇಬರವನ್ನು ಬುಧವಾರ ಬೆಳಗ್ಗೆ ಸ್ಥಳ ಮಹಜರು ನಂತರ, ಕ್ರೇನ್ ತಂದು ಘಟನಾ ಸ್ಥಳದಿಂದ ಪಕ್ಕದಲ್ಲೇ ಇರುವ ಗಸ್ತು ರಸ್ತೆಗೆ ಸಾಗಿಸಿ, ಅಧಿಕಾರಿಗಳ ಸಮ್ಮುಖದಲ್ಲಿ ಬಂಡೀಪುರದ ಪಶುವೈದ್ಯ ಡಾ.ವಾಸಿಮ್ ಮಿರ್ಜಾ ಮರಣೋತ್ತರ ಪರೀಕ್ಷೆ ನಡೆಸಿದರು.

ತಲೆಗೆ ಗಂಭೀರ ಗಾಯ: ಅಪಘಾತದಿಂದ ಮೃತಪಟ್ಟ ಆನೆ ತಲೆಗೆ ಮಾತ್ರ ಗಂಭೀರವಾದ ಗಾಯಗಳಾಗಿ ತೀವ್ರ ರಕ್ತಸ್ರಾವವಾಗಿತ್ತು. ವೇಗವಾಗಿ ಬಂದ ಲಾರಿ ಆನೆ ತಲೆಗೆ ಅಪ್ಪಳಿಸಿದೆ. ಅಲ್ಲದೆ, ಆನೆ ನೆಲಕ್ಕುರುಳಿದ ರಭಸಕ್ಕೆ ತಲೆಗೆ ಭಾರೀ ಪೆಟ್ಟು ಬಿದ್ದಿದೆ. ಆನೆಯ ಕಳೇಬರವನ್ನು ಕ್ರೇನ್‌ನಿಂದ ಮೇಲೆತ್ತಿದಾಗ ಅದರ ತಲೆಯಿಂದ ರಕ್ತ ಸೋರುತ್ತಿತ್ತು. ಅಲ್ಲದೇ, ರಾತ್ರಿಯಿಡೀ ರಸ್ತೆ ಮೇಲೆ ರಕ್ತ ಸೋರಿದ್ದ ಕಲೆ ಕಂಡು ಬಂದಿದೆ ಮರಣೋತ್ತರ ಪರೀಕ್ಷೆ ವೇಳೆಯೂ ದೇಹದ ಯಾವುದೇ ಭಾಗಕ್ಕೂ ಗಾಯವಾಗಿರುವುದು ಕಂಡು ಬಂದಿಲ್ಲ. ಆದರೆ ತಲೆಗೆ ಗಂಭೀರ ಸ್ವರೂಪದ ಗಾಯವಾಗಿದೆ.

ಅರ್ಧ ಗಂಟೆ ವಾಹನ ಸಂಚಾರಕ್ಕೆ ನಿರ್ಬಂಧ: ಕಾಡಾನೆಯ ದೇಹ ರಸ್ತೆ ಮಧ್ಯೆ ಬಿದ್ದಿದ್ದರಿಂದ ಬೆಳಗ್ಗೆ 6 ಗಂಟೆಗೆ ತೆರೆಯಬೇಕಾಗಿದ್ದ ಗಡಿ ಗೇಟ್ ಅನ್ನು ಅರ್ಧ ಗಂಟೆ ತಡವಾಗಿ ತೆರೆಯಲಾಯಿತು. ಇದರಿಂದ ಗುಂಡ್ಲುಪೇಟೆಯಿಂದ ಕೇರಳಕ್ಕೆ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ತೆರಳಬೇಕಾಗಿದ್ದ ವಾಹನಗಳು ಅರ್ಧ ಗಂಟೆ ಕಾಯಬೇಕಾಯಿತು. ವಾಹನ ಸಂಚಾರಕ್ಕೆ ಹೆಚ್ಚಿನ ಅಡಚಣೆಯಾಗದಂತೆ ಆನೆಯ ದೇಹವನ್ನು ಮುಖ್ಯರಸ್ತೆಯಿಂದ ಅರಣ್ಯ ಪ್ರದೇಶದ ಗಸ್ತು ರಸ್ತೆಗೆ ಕ್ರೇನ್‌ನಲ್ಲಿ ಸಾಗಿಸಿದ ಬಳಿಕವಷ್ಟೇ ವಾಹನ ಸಂಚಾರಕ್ಕೆ ಅವಕಾಶ ನೀಡಲಾಯಿತು. ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಗುಂಡ್ಲುಪೇಟೆ ಉಪವಿಭಾಗದ ಎಸಿಎಫ್ ಜಿ.ರವೀಂದ್ರ, ಮದ್ದೂರು ವಲಯದ ಆರ್‌ಎಫ್‌ಓ ಎಂ.ಮಲ್ಲೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೇರಳಕ್ಕೆ ಹಿನ್ನಡೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಹಾದು ಹೋಗಿರುವ ಎರಡು ಹೆದ್ದಾರಿಯಲ್ಲೂ ರಾತ್ರಿ 9ರಿಂದ ಮುಂಜಾನೆ 6 ಗಂಟೆವರೆಗೂ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ಆದರೆ, ಕೇರಳ ಸರ್ಕಾರ ಕಳೆದ ಕೆಲ ವರ್ಷಗಳಿಂದ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಹಾಕಿರುವ ನಿರ್ಬಂಧ ಹಿಂಪಡೆಯುವಂತೆ ಒತ್ತಾಯಿಸುತ್ತಲೇ ಬಂದಿದೆ. ಆದರೆ, ರಾಜ್ಯ ಸರ್ಕಾರ ರಾತ್ರಿ ಸಂಚಾರ ನಿಷೇಧದಿಂದ ಹಿಂದೆ ಸರಿಯಲು ನಿರಾಕರಿಸುತ್ತಿದೆ. ಈಗ ಅಪಘಾತದಲ್ಲಿ ಆನೆ ಬಲಿಯಾಗಿರುವುದರಿಂದ ವನ್ಯಜೀವಿಗಳ ಸಂರಕ್ಷಣೆ ಅನಿವಾರ್ಯತೆ ಮತ್ತೊಮ್ಮೆ ಸರ್ಕಾರಕ್ಕೆ ಮನವರಿಕೆ ಆದಂತಾಗಿದೆ. ಇದೇ ವೇಳೆ ಕೇರಳದ ಬೇಡಿಕೆಗೆ ಕಾನೂನಾತ್ಮಕ ಮಾತ್ರವಲ್ಲ, ನೈತಿಕ ಬಲವೂ ಇಲ್ಲದಂತಾಗಿದೆ.

ಸ್ಪೀಡ್ ಬ್ರೇಕರ್ ಅಳವಡಿಕೆಗೆ ಆಗ್ರಹ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಕೇರಳ ಹಾಗೂ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 766 ಹಾಗೂ 67ರಲ್ಲಿ ರಸ್ತೆ ಡುಬ್ಬ ನಿರ್ಮಿಸಿದ್ದರೂ ಕೆಲವೆಡೆ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಈ ಹಿನ್ನೆಲೆಯಲ್ಲಿ ರಸ್ತೆ ಡುಬ್ಬ ಇಲ್ಲದ ಸ್ಥಳದಲ್ಲಿ ಸ್ಪೀಡ್ ಬ್ರೇಕರ್ ಅಳವಡಿಸುವಂತೆ ವನ್ಯಜೀವಿ ಪ್ರೇಮಿಗಳು ಆಗ್ರಹಿಸಿದ್ದಾರೆ.



ಇತ್ತೀಚೆಗೆ ಪತ್ರಿಕ ವಿತರಕ ಎಸ್.ಶಂಕರ್ ಅವರಿಗೆ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ವಿಕಾಸ ಸಾಹಿತಿ ರತ್ನ ಪ್ರಶಸ್ತಿ ನೀಡಿ, ಗೌರವಿಸಿದೆ.

ಸ್ಪಾ ದಲ್ಲಿ ವೇಶ್ಯಾವಾಟಿಕೆ: ಇಬ್ಬರು ಪೊಲೀಸರ ವಶಕ್ಕೆ

ಮೈಸೂರು, ಡಿ.14(ಆರ್‌ಕೆ)– ವೇಶ್ಯಾವಾಟಿಕೆ ನಡೆಯುತ್ತಿದ್ದ ಸ್ಪಾ ಮೇಲೆ ದಾಳಿ ನಡೆಸಿದ ವಿಜಯನಗರ ಠಾಣೆ ಪೊಲೀಸರು ಮಹಿಳೆ ಸೇರಿದಂತೆ ಇಬ್ಬರನ್ನು ಬಂಧಿಸಿ, ಇಬ್ಬರು ಯುವತಿಯರನ್ನು ರಕ್ಷಿಸಿದ್ದಾರೆ.

ಸ್ಪಾ ಹೆಸರಿನಲ್ಲಿ ಆನ್‌ಲೈನ್ ಮೂಲಕ ಗ್ರಾಹಕರನ್ನು ಸೆಳೆದು ಯುವತಿಯರನ್ನಿಟ್ಟುಕೊಂಡು ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಬುಧವಾರ ಸಂಜೆ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ನೇತೃತ್ವದ ತಂಡ, ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಬಳಿ ಹನಿವೆಲ್ ಸ್ಪಾ ಮೇಲೆ ದಾಳಿ ನಡೆಸಿತು.

ಈ ವೇಳೆ ಇಬ್ಬರು ಯುವತಿರೊಂದಿಗೆ ಗ್ರಾಹಕರೂ ಕೂಡ ಇದ್ದರೆಂದು ಹೇಳಲಾಗಿದ್ದು, ಮೈಸೂರಿನವರೇ ಆದ ಇಬ್ಬರೂ ಯುವತಿಯರನ್ನು ರಕ್ಷಿಸಿದ ಪೊಲೀಸರು, ಸಿದ್ಧಾರ್ಥನಗರದಲ್ಲಿ ವಾಸವಿದ್ದು, ಇಲ್ಲಿ ಸ್ಪಾ ನಡೆಸುತ್ತಿರುವ ಸವಿತಾ ಮತ್ತು ಅಲ್ಲಿನ ಸಿಬ್ಬಂದಿ ಸಾಗರ್‌ನನ್ನು ಬಂಧಿಸಿ, 10 ಸಾವಿರ ನಗದು ಹಾಗೂ ಕಾಂಡೋಮ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಇಬ್ಬರೂ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದೆ

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಾಮದಾಸ್ ಚಾಲನೆ

ಮೈಸೂರು,ಡಿ.14(ಪಿಎಂ)– ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಲೋಕೋಪಯೋಗಿ ಇಲಾಖೆ ಅನುದಾನದಡಿ ಒಟ್ಟು 5.70 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಬುಧವಾರ ಚಾಲನೆ ನೀಡಿದರು.



ವಾರ್ಡ್ 51ರ ಅಗ್ರಹಾರ, ವಾರ್ಡ್ 55ರ ಚಾಮುಂಡಿಪುರಂ, ವಾರ್ಡ್ 60ರ ಅಶೋಕಪುರಂ ಮತ್ತು ವಾರ್ಡ್ 61ರ ವಿದ್ಯಾರಣ್ಯಪುರಂ ಭಾಗಗಳಲ್ಲಿ ವಿವಿಧ ರಸ್ತೆಗಳ ಅಭಿವೃದ್ಧಿಗೆ ಶಾಸಕರು ಗುದ್ದಲಿಪೂಜೆ ನೆರವೇರಿಸಿದರು. ಕಂಸಾಳೆ ಮಹದೇವಯ್ಯ (ಸೆಂಟ್ ಮೇರಿಸ್ ಸರ್ಕಲ್) ವೃತ್ತದಿಂದ ರಾಮಾನುಜ ರಸ್ತೆಯ 12ನೇ ಕ್ರಾಸ್‌ವರೆಗೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು. ಅಲ್ಲದೆ, ವಿದ್ಯಾರಣ್ಯಪುರಂನ ಭೂತಾಳೆ ಮೈದಾನದಿಂದ 2ನೇ ಮುಖ್ಯರಸ್ತೆ ಮಾರ್ಗವಾಗಿ ಚಾಮುಂಡಿಪುರಂ ವೃತ್ತದಿಂದ ನಂಜುಮಳಿಗೆ ವೃತ್ತದವರೆಗೆ, ನಂಜುಮಳಿಗೆ ವೃತ್ತದಿಂದ ವಿದ್ಯಾರಣ್ಯಪುರಂ 4ನೇ ಮುಖ್ಯರಸ್ತೆ ಮಾರ್ಗವಾಗಿ 25ನೇ ಕ್ರಾಸ್ ರಸ್ತೆವರೆಗಿನ ಮುಖ್ಯ ರಸ್ತೆ, ಸಿಲ್ಕ್ ಫ್ಯಾಕ್ಟರಿ ವೃತ್ತದಿಂದ ಸಾರ್ವಜನಿಕ ಹಾಸ್ಟೆಲ್ ಮುಖ್ಯ ರಸ್ತೆ ಮಾರ್ಗವಾಗಿ ಸಿವೇಜ್ ಫಾರಂ ಮುಖ್ಯರಸ್ತೆವರೆಗೆ ಹಾಗೂ ವಿದ್ಯಾರಣ್ಯಪುರಂನ 4ನೇ ಮುಖ್ಯರಸ್ತೆಯ 16ನೇ ಅಡ್ಡರಸ್ತೆಯಿಂದ ಶಿವ ಗ್ಯಾಸ್ ಮಾರ್ಗವಾಗಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಶಾಲೆವರೆಗೆ ಮತ್ತು 3ನೇ ಮೇನ್ ಎಸ್‌ಜೆಹೆಚ್ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಯಿತು.

ಇದೇ ವೇಳೆ ಮಾತನಾಡಿದ ಶಾಸಕರು, ಕ್ಷೇತ್ರದಲ್ಲಿರುವ 482 ಕಿಲೋ ಮೀಟರ್ ರಸ್ತೆಗಳಿಗೆ ಪೂರ್ಣ ಪ್ರಮಾಣದಲ್ಲಿ ಡಾಂಬರೀಕರಣ ಕಾಮಗಾರಿಯನ್ನು ಇನ್ನೆರಡು ತಿಂಗಳೊಳಗೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಎಲ್ಲಾ ವಾರ್ಡ್‌ಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು. ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮಾ.ವಿ.ರಾಮ್‌ಪ್ರಸಾದ್, ಶೋಭಾ ಸುನಿಲ್, ಮಾಜಿ ಸದಸ್ಯ ಸುನಿಲ್, ವಕೀಲ ಶಿವರಾಜ್ ಸೇರಿದಂತೆ ಸ್ಥಳೀಯ ಮುಖಂಡರು ಹಾಜರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಮೈಸೂರಲ್ಲಿ ದಸಂಸ ಪ್ರತಿಭಟನೆ

ಮೈಸೂರು,ಡಿ.14(ಪಿಎಂ)–ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನ್ಯಾ.ಎ.ಜೆ.ಸದಾಶಿವ ಆಯೋಗದ ಒಳಮೀಸಲಾತಿ ಶಿಫಾರಸ್ಸು ಜಾರಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದು, ಇದು ರಾಜ್ಯ ಸರ್ಕಾರ ಸರ್ವಾಧಿಕಾರಿ ಧೋರಣೆಯಾಗಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.




ಮೈಸೂರಿನ ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ನ್ಯಾಯಕ್ಕೆ ಹೋರಾಟ ನಡೆಸುವ ಹಕ್ಕನ್ನು ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೆ ಕಲ್ಪಿಸಿದೆ. ಆದರೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಡಿ.11ರಂದು ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದು, ಇದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಣ್ಣಪುಟ್ಟ ಸಮುದಾಯಗಳು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿರುವ ಹಿನ್ನೆಲೆಯಲ್ಲಿ ಸಂವಿಧಾನದ ಆಶಯದಂತೆ ಅತ್ಯಂತ ಕೆಳಮಟ್ಟದಲ್ಲಿರುವ ಶೋಷಿತ ಸಮುದಾಯಗಳಿಗೆ ಸಮಾನ ಅವಕಾಶ ಮತ್ತು ಸವಲತ್ತು ಕಲ್ಪಿಸಲು ಒಳಮೀಸಲಾತಿ ಜಾರಿಗೆ ಹತ್ತಾರು ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಅಂತೆಯೇ ಮೊನ್ನೆ ಹೋರಾಟ ನಡೆಸಲಾಗುತ್ತಿತ್ತು. ಆದರೆ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆಯು ಸಂವಿಧಾನದ ಆಶಯವನ್ನು ಗಾಳಿ ತೂರಿ ಪ್ರತಿಭಟನೆ ಹತ್ತಿಕ್ಕಿ ಜನಸಾಮಾನ್ಯರ ಧ್ವನಿ ಅಡಗಿಸಿದೆ ಎಂದು ಆರೋಪಿಸಿದರು.

ಶಾಂತಿಯುತ ಹೋರಾಟಗಾರರ ಮೇಲೆ ಹಲ್ಲೆ ನಡೆಸಲು ಕಾರಣವಾದ ಜನವಿರೋಧಿ ಕರ್ನಾಟಕ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು. ಹೋರಾಟಗಾರರ ವಿರುದ್ಧ ದಾಖಲಿಸಿರುವ ಕೇಸನ್ನು ವಜಾಗೊಳಿಸಿ, ಹಲ್ಲೆ ನಡೆಸಿದ ಪೊಲೀಸರ ವಿರುದ್ಧ ಕ್ರಮ ಜರುಗಿಸಬೇಕು. ಸಂಸತ್ತಿನಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸಂವಿಧಾನ ಪರಿಚ್ಛೇದ 341ಕ್ಕೆ ತಿದ್ದುಪಡಿ ತಂದು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ದಲಿತ ಸಂಘರ್ಷ ಸಮಿತಿ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಮುಖಂಡರಾದ ಚಿಕ್ಕಲಿಂಗಯ್ಯ, ವರುಣಾ ಮಹೇಶ್, ಪ್ರಸನ್ನ, ರಫತ್ ಉಲ್ಲಾಖಾನ್, ಡಾ.ಚನ್ನಕೇಶವ ಮೂರ್ತಿ, ಸ್ವಾಮಿ, ಪುಟ್ಟಣ್ಣ, ಪ್ರಭುಸ್ವಾಮಿ, ಶಿವಮೂರ್ತಿ, ನಟರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿದ್ಯಾ ಸುಂದರಿಯ ತ್ಯಾಗ, ಪಂಚ ಪತಿವ್ರತೆಯರ ಅಳಲು, ವೃದ್ಧ ದಂಪತಿಯ ವೈರುಧ್ಯದ ಮನ ಕರಗಿಸುವ ದೃಶ್ಯ ಸಾರ...!

ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ನಾಟಕಗಳ ವೈಭವ



‘ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ’ ನಾಟಕ.



‘ಪಂಚಕನ್ಯಾಸ್ಮರೇನಿತ್ಯಂ’ ನಾಟಕ ಪ್ರದರ್ಶನ.



ಭೂಮಿಗೀತದಲ್ಲಿ ‘ಬೆಟರ್ ಹಾಫ್’ ನಾಟಕ ಪ್ರದರ್ಶನ.

ಮೈಸೂರು,ಡಿ.14(ಎಂಕೆ)–ತ್ಯಾಗರಾಜರ ಆರಾಧಕಿ ವಿದ್ಯಾಸುಂದರಿ ನಾಗರತ್ನಮ್ಮನ ತ್ಯಾಗದ ಅನಾವರಣದೊಂದಿಗೆ ಪಂಚ ಪತಿವ್ರತೆಯರ ಮನದ ಅಳಲು, ವೃದ್ಧ ಸತಿ–ಪತಿಗಳ ಪ್ರೇಮಾನುರಾಗ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ರಂಗು ಹೆಚ್ಚಿಸಿತು.

ಮೈಸೂರು ರಂಗಾಯಣದಲ್ಲಿನ ‘ಬಹುರೂಪಿ ರಾಷ್ಟ್ರೀಯ ರಂಗೋತ್ಸವ’ದಲ್ಲಿ ಬುಧವಾರ ಪ್ರದರ್ಶನಗೊಂಡ ಸುಪ್ರಸಿದ್ಧ ನಾಟಕಗಳು ತ್ಯಾಗ, ಪ್ರೀತಿ, ಮಾನಸಿಕ ಲೈಂಗಿಕ ಶೋಷಣೆಗಳ ಮೇಲೆ ಬೆಳಕು ಚೆಲ್ಲಿದವು. ಕಲಾಮಂದಿರದಲ್ಲಿ ‘ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ’(ಕನ್ನಡ), ಸಂಪತ್‌ರಂಗಮಂದಿರ (ಕಿರುರಂಗಮಂದಿರ)ದಲ್ಲಿ ‘ಪಂಚಕನ್ಯಾಸ್ಮರೇನಿತ್ಯಂ’(ಕನ್ನಡ) ಹಾಗೂ ಭೂಮಿಗೀತದಲ್ಲಿ ‘ಬೆಟರ್ ಹಾಫ್’(ಹಿಂದಿ) ನಾಟಕಗಳು ರಂಗ ಪ್ರೇಮಿಗಳ ಮನಗೆದ್ದವು.

ಕಲಾಮಂದಿರ: ಹಿರಿಯ ರಂಗಕರ್ಮಿ ಟಿ.ಎಸ್.ನಾಗಾಭರಣ ನಿರ್ದೇಶನದಲ್ಲಿ ಯಶಸ್ವಿ 25ನೇ ಪ್ರದರ್ಶನ ನೀಡಿದ ‘ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ’ ನಾಟಕ ನೃತ್ಯ–ಸಂಗೀತದೊಂದಿಗೆ ವೈಭವದ ಮೆರಗು ನೀಡಿತು. ಕಿಕ್ಕಿರಿದು ತುಂಬಿದ ಕಲಾಮಂದಿರ ವೇದಿಕೆಯಲ್ಲಿ ಬೆಂಗಳೂರಿನ ಬೆನಕ ತಂಡದ ಕಲಾವಿದರ ಅಮೋಘ ನೃತ್ಯಾಭಿನಯ ಭಾರೀ ಪ್ರಶಂಸೆ ಪಡೆಯಿತು.

ದೇವದಾಸಿ ಸಮುದಾಯದ ಕೊನೆಯ ಕೊಂಡಿ, ಬ್ರಿಟಿಷರ ಕಾಲದಲ್ಲಿ ತೆರಿಗೆ ಕಟ್ಟಿದ ಮೊದಲ ಕಲಾವಿದೆ, ವಿದೇಶದಲ್ಲಿ ಪ್ರದರ್ಶನ ನೀಡಿದ ಮೊದಲ ಕಲಾವಿದೆ ಎಂದೆಲ್ಲಾ ಪ್ರಖ್ಯಾತಿ ಪಡೆದು ತ್ಯಾಗರಾಜರಗುಡಿ ನಿರ್ಮಿಸಲು ತ್ಯಾಗ ಮಾಡಿದ ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮರ ಚರಿತ್ರೆ ನೋಡುಗರ ಮನದಲ್ಲಿ ಅಚ್ಚೊತ್ತಿತು.

ಸಂಪತ್ ರಂಗಮಂದಿರ(ಕಿರುರಂಗಮಂದಿರ): ಪಂಚ ಪತಿವ್ರತೆಯರಾದ ಅಹಲ್ಯಾ, ತಾರಾ, ಮಂಡೋದರಿ, ಕುಂತಿ ಮತ್ತು ದ್ರೌಪದಿಯರು ತಮ್ಮ ಜೀವನದಲ್ಲಿ ಪಡೆದುದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚೆಂದು ದುಃಖಿಸುವ ಕತೆಯನ್ನೊಳಗೊಂಡ ‘ಪಂಚಕನ್ಯಾಸ್ಮ ರೇನಿತ್ಯಂ’ ನಾಟಕ ಸಂಪತ್‌ರಂಗಮಂದಿರ (ಕಿರುರಂಗಮಂದಿರ)ದಲ್ಲಿ ಪ್ರದರ್ಶನಗೊಂಡಿತು. ಡಾ.ಅರವಿಂದ ಕುಲಕರ್ಣಿ ರಂಗ ರೂಪ ಮತ್ತು ಸಂಗೀತ ನಿರ್ದೇಶನ, ವಿನುತಾ ಹಂಚಿನಮನಿ ರಚನೆ, ಬೆಳಗಾವಿಯ ರಂಗ ಸಂಪದ ಕಲಾವಿದರ ಅಭಿನಯ ಮೋಡಿ ಮಾಡಿತು.

ಭೂಮಿಗೀತ: ವೃದ್ಧ ಸತಿ–ಪತಿಗಳ ಪ್ರೇಮಾನುರಾಗ, ವೈದ್ಯರ ನಿರ್ಲಕ್ಷ್ಯದಿಂದ ಸತಿಯನ್ನು ಕಳೆದುಕೊಂಡು ಒಬ್ಬಂಟಿಯಾಗಿ ನರಳುವ ಪತಿ ಕಡೆಗೆ ಪತ್ನಿಯ ಅಕಾಲಿಕ ಮರಣಕ್ಕೆ ನ್ಯಾಯ ದೊರಕಿಸಿಕೊಡಲು ಕೋರ್ಟ್ ಮೆಟ್ಟಿಲೇರುವ ಕಥಾ ಹಂದರವುಳ್ಳ ‘ಬೆಟರ್ ಹಾಫ್’ ಹಿಂದಿ ನಾಟಕ ನೋಡುಗರ ಕಣ್ಣಲ್ಲಿ ನೀರು ಜಿನುಗುವಂತೆ ಮಾಡಿತು.

ಸತಿ–ಪತಿಗಳ ಹಾಸ್ಯಭರಿತ ಶೃಂಗಾರಮಯ ಸಂಭಾಷಣೆಯಿಂದ ಆರಂಭಗೊಳ್ಳುವ ‘ಬೆಟರ್ ಹಾಫ್’ ಕಲಾಭಿಮಾನಿಗಳನ್ನು ನಗಿಸುತ್ತಲೇ ದುಃಖ ಆವರಿಸುವಂತೆ ಮಾಡುತ್ತದೆ. ಆಶಿಷ್ ಶ್ರೀವಾಸ್ತವ್ ರಚನೆ ಮತ್ತು ನಿರ್ದೇಶನದಲ್ಲಿ ಭೋಪಾಲ್‌ನ ಚೇತ ರಂಗ್ ಸಮೂಹದ ಕಲಾವಿದರ ಅಭಿನಯ ನೆನಪಿನಲ್ಲಿ ಉಳಿಯುವಂತಿತ್ತು.

ಬಹುರೂಪಿಗೆ ಇಂದು ತೆರೆ...

ಡಿ.8ರಿಂದ ಆರಂಭಗೊಂಡು ಹತ್ತು–ಹಲವು ಜನಪ್ರಿಯ ನಾಟಕಗಳು, ಜಾನಪದ ಕಲಾಪ್ರಕಾರಗಳು, ಚಿತ್ರಕಲೆ, ಸಂವಾದ ಸೇರಿದಂತೆ ವಿವಿಧತೆಯಲ್ಲಿ ಭಾರತೀಯತೆಯನ್ನು ಪ್ರತಿಬಿಂಬಿಸಿದ ‘ಬಹುರೂಪಿ ರಾಷ್ಟ್ರೀಯ ರಂಗೋತ್ಸವ–2022’ಕ್ಕೆ ನಾಳೆ(ಡಿ.15) ತೆರೆ ಬೀಳಲಿದೆ. ಜಡಿ ಮಳೆ, ಮೈ ಕೊರೆಯುವ ಚಳಿಯ ನಡುವೆಯೂ ರಸದೌತಣವನ್ನೇ ಉಣಬಡಿಸಿರುವ ರಂಗೋತ್ಸವಕ್ಕೆ ತನ್ನ ವಿಶೇಷತೆಯನ್ನು ಅನಾವರಣಗೊಳಿಸಿದೆ. ಸಾವಿರಾರು ಮಂದಿ ಕಲಾಭಿಮಾನಿಗಳು ರಂಗಾಯಣಕ್ಕೆ ಭೇಟಿ ನೀಡಿ ನಾಟಕಗಳನ್ನು ನೋಡಿ ಸಂಭ್ರಮಿಸಿದ್ದಾರೆ.

ಜಾನಪದ ಗಟ್ಟಿಮೇಳ...



ರಂಗಾಯಣದ ವನರಂಗದಲ್ಲಿ ಜಾನಪದ ಗಾಯಕಿ ಮೈಸೂರಿನ ಶುಭ ರಾಘವೇಂದ್ರ ಮತ್ತು ತಂಡದ ಸುಮಧುರ ಜಾನಪದ ಹಾಡುಗಳ ಗಾಯನ ಹಾಗೂ ಹಾಸನದ ಓಂಕಾರ ಮೂರ್ತಿ ಮತ್ತು ತಂಡ ಕಂಗೀಲು ಗಟ್ಟಿಮೇಳ ವಾದನ ಕೇಳುಗರ ಕಿವಿಗೆ ಇಂಪು ನೀಡಿತು. ‘ಶರಣು ಶರಣುವಯ್ಯ ಗಣನಾಯಕ’ ಹಾಡಿನೊಂದಿಗೆ ಜಾನಪದದ ರಂಗು ಪಸರಿಸಿದ ಗಾಯಕಿ ಶುಭ ರಾಘವೇಂದ್ರ, ‘ಬನ್ನಿ ಮುಡಿಯೋಣ ಬಾರಾ ಕೋಲು’, ‘ಹಾವಾದ್ರು ಕಚ್ಚಾಬಾರ್ದ’ ಮತ್ತಿತರ ಹಾಡುಗಳ ಮೂಲಕ ರಂಜಿಸಿದರೆ, ಸಹ ಗಾಯಕಿ ತನುಶ್ರೀ ‘ಅಂಗಳದೊಳಗಾ ಹಾಡೋಳೆ ಸರಸ್ವತಿ’, ಎಂತಾ ಮೋಜಿನ ಕುದುರಿ’ ಮತ್ತಿತರ ಹಾಡುಗಳನ್ನು ಸುಮಧುರವಾಗಿ ಹಾಡಿ ಶಿಳ್ಳೆ–ಚಪ್ಪಾಳೆಗಳನ್ನು ಗಿಟ್ಟಿಸಿದರು. ಹಾಡಿನಲ್ಲಿ ವೈಷ್ಣವಿ, ವಿದ್ಯಾ ಮತ್ತು ಸುಪ್ರಿಯಾ, ಕೀಬೋರ್ಡ್‌ನಲ್ಲಿ ಗಣೇಶ್ ಈಶ್ವರ್, ತಬಲ ವಾದನದಲ್ಲಿ ರಘುನಾಥ್ ಹಾಗೂ ರಿದಂಪ್ಯಾಡ್‌ನಲ್ಲಿ ವಿನಯ್ ರಂಗದೊಳ್ ಉತ್ತಮ ಸಹಕಾರ ನೀಡಿದರು.

ಮಾಜಿ ಐಪಿಎಸ್ ಭಾಸ್ಕರ್ ರಾವ್ ಸ್ವಯಂ ನಿವೃತ್ತಿಗೆ ಒಪ್ಪಿಗೆ

ಬೆಂಗಳೂರು, ಡಿ.14– ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಅವರ ಸ್ವಯಂ ನಿವೃತ್ತಿಗೆ ಕೊನೆಗೂ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಡಿ.13ರ ದಿನಾಂಕದ ಸರ್ಕಾರಿ ಅಧಿಸೂಚನೆಯಲ್ಲಿ, ಸಕ್ಷಮ ಪ್ರಾಧಿಕಾರವು ಅಖಿಲ ಭಾರತ ಸೇವೆಗಳ 9 (ಡಿಸಿಆರ್‌ಬಿ) ನಿಯಮಗಳು, ಐಪಿಎಸ್ 1958ರ ನಿಯಮ 16(2)ರ ಅಡಿಯಲ್ಲಿ ರಾವ್ ಅವರ ಸ್ವಯಂ ನಿವೃತ್ತಿ ನಿರ್ಧಾರವನ್ನು ಏಪ್ರಿಲ್ 2, 2022ರಿಂದ ಜಾರಿಗೆ ಬರುವಂತೆ ಸ್ವೀಕರಿಸಲಾಗಿದೆ ಎಂದು ಹೇಳಿದೆ.



ಕರ್ನಾಟಕದಲ್ಲಿ ಎಎಪಿ ಹಾಲಿ ಉಪಾಧ್ಯಕ್ಷರಾಗಿದ್ದಾರೆ. 3 ದಶಕಗಳಿಗೂ ಹೆಚ್ಚು ಕಾಲ ಸರ್ಕಾರದಲ್ಲಿ ಸೇವೆ ಸಲ್ಲಿಸಿ, ನಂತರ ಈ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಎಎಪಿ ಸೇರಿದ್ದರು. ರಾವ್ ಅವರನ್ನು ಜೂನ್‌ನಲ್ಲಿ ಎಎಪಿ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ, ನಿಮ್ಮ ಮಗಳು ದೊಡ್ಡವಳಾದ ಮೇಲೆ ಡಾಕ್ಟರ್ ಆಗ್ತಾಳೆ
ಪತಿ : ಹೇಗೆ ಅಷ್ಟು ಕರೆಕ್ಟ್ ಆಗಿ ಹೇಳ್ತೀಯಾ?
ಪತ್ನಿ : ಹೇಗೆ ಅಂದರೆ ಅವಳು ಬರೆದ ಅಕ್ಷರ ಅವಳಿಗೇ ಅರ್ಥ ಆಗಲ್ಲ!

ಮೈಸೂರು ಮಿತ್ರ

ಗುರುವಾರ, 15 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........
ತಾಳ್ಮೆಯಿಂದ ಕಾಯುವುದಾದರೆ ಬಂಚುಸಿದ್ದೇ ದೊರೆಯುತ್ತದೆ.– ಡಿಸ್ರೇಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜನಕ್ಕಂಜದಿದ್ದರೂ ಮನಕ್ಕಂಜು

ನಿಮ್ಮ ಪತ್ರಗಳು

ರಾಷ್ಟ್ರೀಯ ಕಾಂಗ್ರೆಸ್‌ಗೆ ಪ್ರಾಣವಾಯು

ಮಾನ್ಯರೆ,

ಇತ್ತೀಚೆಗೆ ಜರುಗಿದ ಗುಜರಾತ್ ಮತ್ತು ಹಿಮಾಚಲ ಪ್ರದೇಶಗಳ ವಿಧಾನಸಭಾ ಚುನಾವಣಾ ಫಲಿತಾಂಶ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಬಿಜೆಪಿಗೆ 50:50 ಪಂದ್ಯಾವಳಿಯಂತಾಗಿದೆ. ಗುಜರಾತ್‌ನಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಈ ಚುನಾವಣೆಯಲ್ಲಿ ಒಟ್ಟು 182 ಸ್ಥಾನಗಳ ಪೈಕಿ 156 ಸ್ಥಾನಗಳಲ್ಲಿ ಜಯಭೇರಿ ಬಾರಿಸುವ ಮೂಲಕ ಗಾಂಧಿ ಹುಟ್ಟಿದ ಈ ನಾಡಿನಲ್ಲಿ ಸತತವಾಗಿ ಏಳನೇ ಬಾರಿಗೆ ಅಧಿಕಾರಕ್ಕೆ ಬಂದಿದೆ. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಎರಡನೇ ಬಾರಿಗೆ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ತವರು ರಾಜ್ಯದಲ್ಲಿ ಇಂತಹ ಅಭೂತಪೂರ್ವ ಗೆಲುವಿನ ಸಾಧನೆ ಮೋದಿಯವರ ಜನಪ್ರಿಯತೆಗೆ ಸಾಕ್ಷಿ ಎನ್ನಬಹುದು. ಈ ಹಿಂದೆಂದೂ ಕಂಡರಿಯದ ಅಭೂತಪೂರ್ವ ಜಯ ಈ ರಾಜ್ಯದಲ್ಲಿ ಬಿಜೆಪಿಗೆ ದೊರಕಿದೆ. ಪ್ರಮುಖ ಪ್ರತಿಪಕ್ಷವಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಕೇವಲ 16 ಸ್ಥಾನಗಳನ್ನು ಗಳಿಸಿ ವಿರೋಧ ಪಕ್ಷದ ಸ್ಥಾನವನ್ನು ಸಹ ಉಳಿಸಿಕೊಳ್ಳಲು ವಿಫಲವಾಗಿದೆ. 1985ರ ವಿಧಾನಸಭಾ ಚುನಾವಣೆಯಲ್ಲಿ ಆ ಪಕ್ಷ ಅಂದಿನ ಮುಖ್ಯಮಂತ್ರಿ ಮಾಧವ ಸಿಂಹ ಸೋಲಂಕಿಯವರ ನೇತೃತ್ವದಲ್ಲಿ 149 ಸ್ಥಾನಗಳನ್ನು ಗೆಲ್ಲುವ ಮೂಲಕ ದಾಖಲೆ ಸ್ಥಾಪಿಸಿತ್ತು. ದಾಮ್ ದೂಮ್ ರೀತಿಯಲ್ಲಿ ಚುನಾವಣಾ ಕಣಾ ಪ್ರವೇಶಿಸಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ "ಆಮ್ ಆದ್ಮಿ" ಪಕ್ಷ ಕೇವಲ 05 ಸ್ಥಾನಗಳನ್ನು ಗಳಿಸಿದೆ. ಚುನಾವಣಾ ಕಣದಲ್ಲಿ ಇತರ ನಾಲ್ವರು ಜಯ ಗಳಿಸಿದ್ದಾರೆ. ಇವಿಷ್ಟು ಗುಜರಾತ್ ಚುನಾವಣೆಯ ಹೈಲೈಟ್ಸ್.

ಇನ್ನು ಪುಟ್ಟ ರಾಜ್ಯವಾದ ಹಿಮಾಚಲ ಪ್ರದೇಶದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಜಯ ಗಳಿಸಿದೆ. ರಾಜ್ಯ ವಿಧಾನಸಭೆಯ ಒಟ್ಟು ಸ್ಥಾನಗಳ ಪೈಕಿ 40 ಸ್ಥಾನಗಳನ್ನು ಗಳಿಸಿರುವ ಕಾಂಗ್ರೆಸ್, ಆಡಳಿತಾರೂಢ ಬಿಜೆಪಿಯಿಂದ ಈ ರಾಜ್ಯವನ್ನು ಕಸಿದು ಕೊಳ್ಳುವ ಮೂಲಕ ವಿಜಯದ ಪತಾಕೆ ಹಾರಿಸಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಇಂತಹದೊಂದು ಗೆಲುವು ತೀರಾ ಅನಿವಾರ್ಯವಾಗಿತ್ತು ಎನ್ನಬಹುದು. ಆ ಪಕ್ಷಕ್ಕೆ ಇದೊಂದು ರೀತಿಯಲ್ಲಿ ಪ್ರಾಣವಾಯು ಒದಗಿಸಿದಂತಾಗಿದೆ. ಏಕೆಂದರೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಅದು ಯಾವುದೇ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರಲಿಲ್ಲ. ಬದಲಾಗಿ, ಪಂಜಾಬ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತ್ತು. ಇಡೀ ದೇಶದಲ್ಲಿ, ಕಾಂಗ್ರೆಸ್ ಪಕ್ಷವು ರಾಜಸ್ಥಾನ, ಛತ್ತೀಸ್‌ಗಢದಲ್ಲಿ ಮಾತ್ರ ಅಧಿಕಾರದಲ್ಲಿತ್ತು. ಈಗ ಹಿಮಾಚಲ ಪ್ರದೇಶ ಕೂಡ ಆ ಪಟ್ಟಿಗೆ ಸೇರಿರುವುದು ಕಾಂಗ್ರೆಸ್ ಪಾಳಯದಲ್ಲಿ ಸ್ವಲ್ಪ ನೆಮ್ಮದಿ ಉಂಟು ಮಾಡಿರಬಹುದು. ಇತ್ತೀಚೆಗೆ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಹ ಈ ಫಲಿತಾಂಶ ಸ್ವಲ್ಪ ಸಮಾಧಾನ ನೀಡಬಹುದು.

ಹಿಮಾಚಲ ಪ್ರದೇಶದ ಪ್ರಜ್ಞಾವಂತ ಮತದಾರರು ಒಮ್ಮೆ ಬಿಜೆಪಿಗೆ ಮತ್ತೊಮ್ಮೆ ಕಾಂಗ್ರೆಸ್‌ಗೆ ಅಧಿಕಾರ ನೀಡುತ್ತಾ ಬಂದಿದ್ದಾರೆ. ಇದು ಕೇರಳ ಮಾದರಿಯನ್ನು ನೆನಪಿಸುತ್ತದೆ. ಕೇರಳದಲ್ಲಿ ಒಮ್ಮೆ ಎಡಪಕ್ಷಗಳ ಒಕ್ಕೂಟ ಎಲ್‌ಡಿಎಫ್ ಅಧಿಕಾರಕ್ಕೆ ಬಂದರೆ, ಅದರ ಮುಂದಿನ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬರುತ್ತದೆ. ಆದರೆ ಕಳೆದ ಬಾರಿಯ ಚುನಾವಣೆಯಲ್ಲಿ ಎಲ್‌ಡಿಎಫ್ ಎರಡನೇ ಬಾರಿಗೆ ಅಧಿಕಾರಕ್ಕೆ ಬರುವ ಮೂಲಕ ಈ ಸಂಪ್ರದಾಯವನ್ನು ಸಹ ಮುರಿಯಿತು. ಅದೇನೇ ಇರಲಿ, ಈ ಎರಡು ರಾಜ್ಯ ವಿಧಾನಸಭಾ ಚುನಾವಣಾ ಫಲಿತಾಂಶಗಳು ಎರಡು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಒಂದು ಪಾಠವನ್ನು ಕಲಿಸಿದೆ. ಅಧಿಕಾರದಲ್ಲಿದ್ದ ಬಿಜೆಪಿ ಹಿಮಾಚಲದಲ್ಲಿ ಮುಗ್ಗರಿಸಿದೆ. ಅದೇ ರೀತಿ ಗುಜರಾತ್‌ನಲ್ಲಿ ಇಲ್ಲದ ಬದಲಾವಣೆ ಕೊಟ್ಟುಕೊಳ್ಳುತ್ತಿದ್ದ ಕಾಂಗ್ರೆಸ್ 'ಇದ್ದಿದ್ದರಲ್ಲೂ' ನೆಲ ಕಚ್ಚಿದೆ. ಇದೇ ಈ ಚುನಾವಣಾ ಫಲಿತಾಂಶ ಕಲಿಸಿದ ಪಾಠ. ಸಂಬಂಧಪಟ್ಟವರು ಅರ್ಥ ಮಾಡಿಕೊಂಡರೆ ಒಳ್ಳೆಯದು.

–ಕೆ.ವಿ.ವಾಸು, ವೇಕಲೂರು ಮತ್ತು ನೋಟದಿ, ಮೈಸೂರು

ಹೀನಾಯ ಸ್ಥಿತಿಗೆ ತಲುಪಿರುವ ರೈಲ್ವೆ ಅಂಡರ್‌ಬ್ರಿಡ್ಜ್ ರಸ್ತೆಗಳು

ಮಾನ್ಯರೆ,

ಮೈಸೂರಿನ ಅನೇಕ ರಸ್ತೆಗಳು ಇದೀಗ ಮರು ಡಾಂಬರೀಕರಣವಾಗುತ್ತಿದೆ. ಸುಸಜ್ಜಿತ ಪ್ರತಾಪ ಸಿಂಹ ಅವರ ಸಾಮಾಜಿಕ ಜಾಲತಾಣಗಳಲ್ಲಿ ಮೈಸೂರು–ಬೆಂಗಳೂರು ದಶಪಥ ರಸ್ತೆಯ ಬಗ್ಗೆ ಹೇಳುತ್ತಲೇ ಇರುತ್ತಾರೆ. ನಿಜ, ಕಾರ್ಯ ವೈಖರಿ ಮೆಚ್ಚುವಂತಹುದೇ. ಆದರೆ, ಇಲ್ಲೇ ಇರುವ ಕೆಲವು ರೈಲ್ವೆ ಅಂಡರ್‌ಬ್ರಿಡ್ಜ್ ರಸ್ತೆಗಳನ್ನು ಒಮ್ಮೆ ಅವರು ನೋಡಲೇಬೇಕು. ಏಕೆಂದರೆ, ಅಂಡರ್‌ಬ್ರಿಡ್ಜ್ ರಸ್ತೆಗಳು ಕೇಂದ್ರ ಕಾಮಗಾರಿಗೆ ಒಳಪಡುತ್ತವೆ. ಯಾದವಗಿರಿಯ ಮೇದರಕೇರಿ ಬಳಿಯ ಜಾವಾ ಅಂಡರ್‌ಬ್ರಿಡ್ಜ್ ರಸ್ತೆಯಲ್ಲಿ ಬರೀ ಹಳ್ಳ ಕೊಳ್ಳಗಳೇ. ಎರಡು ಚಕ್ರದ ವಾಹನಗಳು ಇಲ್ಲಿ ತಿರುಗಿದರೆ ಒಮ್ಮೆಲೆ ಜೋಲಿ ಹೊಡೆಯುತ್ತವೆ. ಕತ್ತಲಿನಲ್ಲಿ ಹಳ್ಳಕ್ಕೆ ಬಿದ್ದ ದ್ವಿಚಕ್ರ ವಾಹನ ಸವಾರರು ತಮಗೇನೂ ಆಗಿಲ್ಲವೆಂದು ಹಾಗೆಯೇ ಹೋಗಿಯೂ ಇದ್ದಾರೆ. ಇದರ ಜೊತೆಗೆ ಬನ್ನಿಮಂಟಪದ ಎನ್‌ಎಚ್‌ಟಿ ಅಂಡರ್‌ಬ್ರಿಡ್ಜ್ ರಸ್ತೆಯಂತೂ ಅಲ್ಲಿಗೆ ಹೋಗಲು ಪಡಬಾರದ ಪಾಡು. ಈ ರೀತಿಯ ಹಳ್ಳಕೊಳ್ಳಗಳು ಕೇವಲ ಅರ್ಧ ಕಿಲೋಮೀಟರ್‌ಗಳಷ್ಟು ಮಾತ್ರವಿದ್ದು, ಇಲ್ಲಿ ವಾಹನ ಸವಾರರು ಸಂಚರಿಸುವುದೇ ಅತ್ಯಂತ ಕಷ್ಟಸಾಧ್ಯ. ಒಮ್ಮೆ ಮಾನ್ಯ ಸಂಸದರೋ, ಶಾಸಕರೋ ಅಥವಾ ಸಂಬಂಧಿಸಿದವರು ನೋಡಿ ಏನು ಕಷ್ಟ ಎಂದು ಅರಿಯಲಿ. ದುರಸ್ತಿ ಇಲ್ಲದಿದ್ದರೆ ಬೇಡ, ಕಡೇ ಪಕ್ಷ ಇಲ್ಲಿ ಪ್ರತಿ ದಿನ ಸಂಚರಿಸುವವರ ಕಷ್ಟ ಮತ್ತು ಧೈರ್ಯ ಏನೆಂದು ಅರಿತು ಹೋಗಲಿ.

–ವಿಜಯ್ ಹೆಮ್ಮಿಗೆ, ಮೈಸೂರು

ಕಾಡುಪ್ರಾಣಿಗಳಿಂದ ಜನರಿಗೆ ಆಪತ್ತು!!

ಮಾನ್ಯರೆ,

ನಂಜನಗೂಡು ತಾಲೂಕಿನ ಕಾಡಂಚಿನ ಗ್ರಾಮವಾದ ಬಳ್ಳೂರುಹುಂಡಿ ಗ್ರಾಮದ ಜನರು ಪ್ರತಿ ದಿನ, ಪ್ರತಿ ಕ್ಷಣ ಭಯದಿಂದ ಬದುಕಬೇಕಿದೆ. ಇತ್ತೀಚೆಗೆ ಗ್ರಾಮದ ನಾಗೇಶ್ ರಾಜ್ ಎಂಬ ರೈತ ಸುಮಾರು ನಾಲ್ಕು ವರ್ಷದಿಂದ ಬೆಳೆದಿದ್ದ ತೆಂಗಿನ ಗಿಡಗಳನ್ನು ಒಂದೇ ರಾತ್ರಿಯಲ್ಲಿ ಆನೆಗಳು ನಾಶಮಾಡಿವೆ. ಹಾಗೂ ಮೊನ್ನೆ ಗ್ರಾಮದ ಇನ್ನೊಬ್ಬ ಸ್ವಾಮಿ ಎಂಬ ರೈತನು ಕಾಡಿನ ಪಕ್ಕದಲ್ಲಿರುವ ಜಮೀನಿನಲ್ಲಿ ತನ್ನ ದನಗಳನ್ನು ಮೇಯಿಸುತ್ತಿರುವಾಗ ಹುಲಿಯೊಂದು ಹಸುವಿನ ಮೇಲೆ ದಾಳಿ ಮಾಡಿದೆ. ಭಯಗೊಂಡ ರೈತ ತನ್ನ ಹಸುವನ್ನು ಕಾಪಾಡಿಕೊಳ್ಳಲು ಹೋದಾಗ ಅವನ ಮೇಲೆ ಕೂಡ ದಾಳಿ ಮಾಡಿದಾಗ ಪಕ್ಕದಲ್ಲೇ ಇದ್ದ ಸಹಚರರು ಬಿಡಿಸಿದ್ದಾರೆ. ಒಂದು ಹಸುವನ್ನು ಬಲಿ ಪಡೆದಿದೆ ಮತ್ತು ರೈತ ಸ್ವಾಮಿಗೆ ಹಲವಾರು ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕೆಲ ಗ್ರಾಮಸ್ಥರು ಆನೆಗಳಿಂದ ರಕ್ಷಿಸಿಕೊಳ್ಳಲು ರಾತ್ರಿ ಹೊತ್ತು ಕಾವಲು ಕಾಯಲು ಹೋಗುತ್ತಿದ್ದರು. ಆದರೆ ಈಗ ಹುಲಿಯ ಭಯದಿಂದ ಹೋಗಲು ಹೆದರುತ್ತಿದ್ದಾರೆ. ಗ್ರಾಮದಲ್ಲಿ ಕಾಡುಪ್ರಾಣಿಗಳಿಂದ ಅಪಾಯವಾಗುತ್ತಿದ್ದು, ದಯವಿಟ್ಟು ಅರಣ್ಯಾಧಿಕಾರಿಗಳು ಹುಲಿಯನ್ನು ಸೆರೆ ಹಿಡಿಯಬೇಕೆಂದು ಮನವಿ ಮಾಡುತ್ತೇವೆ.

– ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ದಿಕ್ಕುದೆಸೆ



ಕಾರ್ಕಳ ಆನಂದಭಟ್
ಮೊ.7676554198

ಹಿಜಾಬ್ ವಿವಾದ: ಮಣಿಯುವುದೇ ಇರಾನ್ ಸರಕಾರ

ಇರಾನ್‌ನಲ್ಲಿ ಅದು ದಶಕಗಳಿಂದ ಅದುಮಿಟ್ಟ ಆಕ್ರೋಶವಾಗಿತ್ತು. ಸ್ಫೋಟಗೊಳ್ಳಲು ಕೇವಲ ಒಂದು ಕಿಡಿ ಬೇಕಿತ್ತು. ಹಿಜಾಬ್ ಸರಿಯಾದ ರೀತಿಯಲ್ಲಿ ಧರಿಸಿಲ್ಲವೆಂಬ ಆರೋಪದಲ್ಲಿ ರಾಜಧಾನಿ ಟೆಹರಾನ್‌ನಲ್ಲಿ ಕುರ್ದಿಶ್ ಮೂಲದ ಇರಾನಿ ಪ್ರಜೆ 22ರ ಹರೆಯದ ಮಹ್ಸಾ ಅಮಿನಿ ಎಂಬಾಕೆಯನ್ನು ಇರಾನಿನ ನೈತಿಕ ಪೊಲೀಸ್ ಪಡೆ ಗಬ್–ಎ–ಇರ್ಷಾದ್‌ನ ಪೊಲೀಸರು ಬಂಧಿಸಿ ಹಿಂಸೆ ನೀಡಿದ್ದರು. ಪರಿಣಾಮ ಸೆಪ್ಟೆಂಬರ್ 16 ರಂದು ಪೊಲೀಸ್ ಕಸ್ಟಡಿಯಲ್ಲಿ ಅಮಿನಿ ನಿಗೂಢ ಸಾವನ್ನಪ್ಪಿದ್ದರು. ಈಕೆಯ ಅನ್ಯಾಯದ ಸಾವಿನ ವಿರುದ್ಧ ಇರಾನ್‌ನ ಮಹಿಳಾ ಸಮುದಾಯ ಬೀದಿಗಿಳಿದಿದೆ. ಪ್ರತಿಭಟನಾನಿರತರು ತಮ್ಮ ಕೂದಲನ್ನು ಕತ್ತರಿಸುವ ಮೂಲಕ ಹಿಜಾಬ್‌ಗೆ ಬೆಂಕಿಯಿಕ್ಕುವ ಮುಖೇನ ಪ್ರತಿಭಟನೆ ನಡೆಸುತ್ತಿದ್ದಾರೆ. ಎರಡು ತಿಂಗಳ ನಂತರವೂ ಪ್ರತಿಭಟನೆಯ ಕಾವು ಕಡಿಮೆಯಾಗಿಲ್ಲ. ಅಯಾತುಲ್ಲಾಗಳ ದಮನಕಾರಿ ಕ್ರಮಕ್ಕೆ ಇದು ವರೆಗೆ 400ಕ್ಕೂ ಹೆಚ್ಚು ಜನರು ಕೊಲ್ಲಲ್ಪಟ್ಟಿದ್ದಾರೆ. ಮಾನವ ಹಕ್ಕು ಕಾರ್ಯಕರ್ತರ ಪ್ರಕಾರ ಐವತ್ತಕ್ಕಿಂತ ಹೆಚ್ಚು ಅಪ್ರಾಪ್ತರು ಸರಕಾರದ ಕ್ರೌರ್ಯಕ್ಕೆ ಬಲಿಯಾಗಿದ್ದಾರೆ. ಪ್ರತಿಭಟನಾಕಾರರನ್ನು ಚದುರಿಸಲು ಭದ್ರತಾ ಪಡೆಗಳು ಮಹಿಳೆ–ಪುರುಷರೆನ್ನದೇ ಗುಂಡಿನ ದಾಳಿ ನಡೆಸುತ್ತಿದ್ದಾರೆಂದು ವರದಿಯಾಗಿದೆ. ಮಹಿಳೆಯರ ಖಾಸಗಿ ಅಂಗಗಳಿಗೂ ಗುಂಡು ಹಾರಿಸಿ ಭದ್ರತಾ ಪಡೆಗಳು ತಮ್ಮ ಕ್ರೌರ್ಯ ಮೆರೆದಿವೆ. ಇದುವರೆಗೆ 20 ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ. ಆದರೂ ಜನರು ಬೀದಿಬೀದಿಗಳಲ್ಲಿ "ಜೀವ–ಜೀವನ–ಸ್ವಾತಂತ್ರ್ಯ" ಎಂಬ ಘೋಷಣೆಯೊಂದಿಗೆ ಪ್ರತಿಭಟನೆ ಮುಂದುವರಿಸಿದ್ದಾರೆ. ಈ ಘೋಷಣೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕುರ್ದಿಶ್ ಮಹಿಳೆಯರದಾಗಿದೆ.

ರಾಜಕೀಯ ಮತ್ತು ಹಿಜಾಬ್

ಇರಾನ್‌ನ ರಾಜಕೀಯ ಮತ್ತು ಸಮಾಜದಲ್ಲಿ ಹಿಜಾಬ್ ನಿರಂತರವಾಗಿ ಒಂದು ಮಹತ್ವಪೂರ್ಣ ವಿಷಯವಾಗಿದೆ. ಹಿಜಾಬ್ ಪಶ್ಚಿಮದತ್ತ ಮುಖ ಮಾಡಿರುವ ಉದಾರವಾದಿ ಇರಾನಿಗಳು ಮತ್ತು ಶಿಯಾ ಮೂಲಭೂತವಾದಿಗಳ ಮಧ್ಯ ಸಂಘರ್ಷದ ಕೇಂದ್ರ ಬಿಂದುವಾಗಿದೆ. 1936ರಲ್ಲಿ ಇರಾನಿನ ಷಾ ರಜಾ ಪಹ್ಲವಿಯವರು ದೇಶವನ್ನು ಪಶ್ಚಿಮೀಕರಣಗೊಳಿಸುವುದಕ್ಕಾಗಿ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿದರು. ಪರಿಣಾಮ ಸಂಪ್ರದಾಯವಾದಿ ಪರಿವಾರದ ಹೆಣ್ಣು ಮಕ್ಕಳು ಮನೆಯೊಳಗೆ ಬಂಧಿಯಂತಾದರು. ಈ ಕ್ರಮದಿಂದಾದ ವ್ಯಾಪಕ ಅಸಂತೋಷವನ್ನು ಗಮನಿಸಿ ಕೆಲ ವರ್ಷಗಳ ನಂತರ ಈ ಆದೇಶ ಹಿಂದಕ್ಕೆ ಪಡೆಯಲಾಯಿತು. ಆದರೆ ಈ ಅವಧಿಯಲ್ಲಿ ಹಿಜಾಬ್ ಇರಾನ್‌ನ ರಾಷ್ಟ್ರೀಯ ಹೆಗ್ಗುರುತಾಯಿತು.

ಷಾ ಪತನ ಹಿಜಾಬ್ ಕಡ್ಡಾಯ

1979ರಲ್ಲಾದ ಇಸ್ಲಾಮಿಕ್ ಕ್ರಾಂತಿಯಲ್ಲಿ ಅಮೇರಿಕ ಬೆಂಬಲಿತ ಷಾ (ಅರಸ) ಮಹ್ಮದ್ ರೆಜಾ ಪಹ್ಲವಿ ಸರಕಾರವನ್ನು ಪದಚ್ಯುತಗೊಳಿಸಿ ಅಯತುಲ್ಲಾ ಖೊಮೈನಿ ನೇತೃತ್ವದಲ್ಲಿ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಸರಕಾರ ಸ್ಥಾಪನೆಯಾಯಿತು. ಖೊಮೈನಿಯವರು ಯೂರೋಪಿಯನ್ ಉದಾರವಾದಿ ಸಮಾಜ ಇಸ್ಲಾಂ ವಿರೋಧಿ ಎನ್ನುತ್ತಿದ್ದರು. 1983ರಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಿಜಾಬ್ ಧರಿಸುವುದು ಕಡ್ಡಾಯಗೊಳಿಸಲಾಯಿತು. ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಹೊಣೆಯನ್ನು ಗಶ್ತ್–ಎ–ಇರ್ಷಾದ್ ಹೆಸರಿನ ನೈತಿಕ ಪೊಲೀಸ್ ಪಡೆಗಳಿಗೆ ವಹಿಸಲಾಯಿತು. ಹಿಜಾಬ್ ಸರಿಯಾಗಿ ಧರಿಸದ ಹೆಣ್ಣು ಮಕ್ಕಳಿಗೆ ಕಿರುಕುಳ ನೀಡುತ್ತಿದ್ದ ಈ ಪಡೆಯ ಗಂಡಸರು ಹಸಿರು ಸಮವಸ್ತ್ರ ಧರಿಸುತ್ತಿದ್ದರು.

ದಮನ ಧಿಕ್ಕರಿಸಿದ ಜನತೆ

1983ರಿಂದ ಹಿಜಾಬ್ ವಿರುದ್ಧ ಧ್ವನಿ ಎತ್ತದ ಇರಾನಿಯನ್‌ರು ಈಗ ತಿರುಗಿ ಬಿದ್ದಿರುವುದರ ಹಿಂದೆ ಬೇರೆಯೇ ಕಾರಣವಿದೆ. ಇರಾನ್ ಜನತೆ ಮತ್ತು ಆಳುವ ಅಯತುಲ್ಲಾಗಳ ಮಧ್ಯೆ ಸುದೀರ್ಘ ಕಾಲದಿಂದ ಒಂದು ಅಲಿಖಿತ ಒಪ್ಪಂದವಿತ್ತು. ಇದರಂತೆ ಜನಸಾಮಾನ್ಯರು ರಾಜನೀತಿಯಿಂದ ದೂರವಿರಬೇಕು. ಪ್ರತಿಯಾಗಿ ಅಯತುಲ್ಲಾಗಳು ಜನರ ವೈಯಕ್ತಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು. ಆದರೆ ರಾಷ್ಟ್ರಪತಿ ಇಬ್ರಾಹಿಂ ರಯೀಸ್‌ರು ಒರಟುತನದಿಂದ ಇಸ್ಲಾಮೀಕರಣದ ನಿಯಮಗಳ ಅನುಷ್ಠಾನ ತೀವ್ರಗೊಳಿಸುತ್ತಿದ್ದಂತೆ ದೇಶದಲ್ಲಿ ಸಮೀಕರಣಗಳು ಬದಲಾಗತೊಡಗಿದವು. ಆ್ಯಮ್ನೆಸ್ಟಿ ಅನುಸಾರ ಕಟ್ಟರ್‌ಪಂಥಿ ರಯಿಸ್‌ರು 1980ರ ಅವಧಿಯಲ್ಲಿ ಸಾವಿರಾರು ರಾಜಕೀಯ ವಿರೋಧಿಗಳ ಹತ್ಯೆ ಮಾಡಿಸಿದ್ದರು. ರಹಿಸ್‌ರು ರಾಷ್ಟ್ರಪತಿಯಾಗುತ್ತಿದ್ದಂತೆ ದೇಶದ ಬ್ಯಾಂಕುಗಳು, ಕೈಗಾರಿಕಾ ಹಾಗೂ ಇತರ ಪ್ರದೇಶಗಳಲ್ಲಿ ಹಿಜಾಬ್ ಧರಿಸಿರುವುದನ್ನು ಗಮನಿಸಲು ಮುಲ್ಲಾಗಳ, ನೈತಿಕ ಪೊಲೀಸರ ಕಾವಲು ಪಡೆ ನಿಯೋಜಿಸಲಾಯಿತು. ಹಿಜಾಬ್ ಸರಿಯಾಗಿ ಧರಿಸದ ಅಥವಾ ಧರಿಸದೇ ಇದ್ದ ಹೆಣ್ಣು ಮಕ್ಕಳಿಗೆ ಇಸ್ಲಾಂ ಸರಿಯಾಗಿ ತಿಳಿಸಲು ಮರು ಶಿಕ್ಷಣ ಕೇಂದ್ರಗಳಿಗೆ ಕಳುಹಿಸಲಾಯಿತು. ಅಯತುಲ್ಲಾಗಳ ಧಾರ್ಮಿಕ ಕಟ್ಟರ್‌ಪಂಥಿ ನಿಯಮಗಳು ಮತ್ತು ಪಶ್ಚಿಮ ದೇಶಗಳು ವಿಧಿಸಿರುವ ಆರ್ಥಿಕ ನಿರ್ಬಂಧಗಳಿಂದ ಇರಾನಿಗಳು ಸಂಕಷ್ಟದಿಂದ ಹೈರಾಣಾಗಿದ್ದಾರೆ. ಇರಾನ್‌ನಲ್ಲಿ 2012 ರಿಂದ ಪ್ರತಿ ವ್ಯಕ್ತಿಯ ತಲಾ ಆದಾಯದಲ್ಲಿ ಸ್ವಲ್ಪವೂ ಏರಿಕೆಯಾಗದೇ ಕಂಗಾಲಾಗಿದ್ದಾರೆ. ಆರ್ಥಿಕ ವ್ಯವಸ್ಥೆಯಲ್ಲಿನ ದೊಡ್ಡ ಭಾಗ ರಿವ್ಯೊಲ್ಯೂಷನರಿ ಗಾರ್ಡ್‌ಗಳ ಹಿಡಿತದಲ್ಲಿದೆ. ಇದರೊಂದಿಗೆ ಪ್ರಾಕೃತಿಕ ಸಮಸ್ಯೆಗಳಿಂದ ಇರಾನಿಗಳು ನಲುಗಿದ್ದಾರೆ. ಆದರೆ ಅಯತುಲ್ಲಾಗಳಿಗೆ ಹಿಜಾಬ್ ಧರಣೆಯೇ ಪ್ರಮುಖ ವಿಷಯವಾಗಿದೆ. ಇದೊಂದೇ ಇವರಿಗೆ ಇರಾನ್ ಸಮಾಜದ ಮೇಲೆ ತಮ್ಮ ಪ್ರಭಾವ ಎಷ್ಟಿದೆಯೆಂದು ತಿಳಿಸುವ ಮಾಧ್ಯಮವಾಗಿದೆ. ಆದರೆ ಫಲಿತಾಂಶ ವಿಪರೀತವಾಗಿದೆ.



> ಇರಾನಿನ ಕಾನೂನುಗಳು ಸಾಂವಿಧಾನಿಕವಾಗಿ ರಚನೆಯಾಗಿವೆ. ಆದರೆ ಸಂವಿಧಾನವನ್ನು ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಅನುಷ್ಠಾನಿಸುವ ಕೆಲವು ವಿಧಾನಗಳಿವೆ ಎಂದು ಅಧ್ಯಕ್ಷ ಇಬ್ರಾಹಿಂ ರೈಸಿಯವರು ಹೇಳಿಕೆ ನೀಡುವ ಮೂಲಕ ಸರಕಾರ ಸಂಧಾನಕ್ಕೆ ಬರುವ ಸಂಕೇತ ನೀಡಿದ್ದಾರೆ. ಇದೇ ವೇಳೆ ದೇಶದಲ್ಲಿ ಹಿಜಾಬ್ ವಿರೋಧಿ ಪ್ರತಿಭಟನೆ ಹಿನ್ನೆಲೆಯಲ್ಲಿ ಮಹಿಳೆಯರು ಹಿಜಾಬ್ ಧರಿಸಬೇಕೆಂಬ ದಶಕಗಳ ಹಳೆಯ ಕಾನೂನು ಪರಿಶೀಲಿಸುವುದಾಗಿ ಸರಕಾರ ತಿಳಿಸಿದೆ.

ಇಸ್ಲಾಂ ಬಗ್ಗೆ ಭ್ರಮನಿರಸನ ಮಿಷಿನರಿಗಳು ಸಕ್ರಿಯ

ಇರಾನ್‌ನಲ್ಲಿ ಸರಕಾರ ಹೊಸ ಮಸೀದಿಗಳ ನಿರ್ಮಾಣ ಮಾಡುತ್ತಲೇ ಇದೆ. ಆದರೆ ನಮಾಜ್‌ಗೆ ಹೋಗುವ ಜನರ ಪ್ರಮಾಣ ನಿರಂತರವಾಗಿ ಕುಸಿಯುತ್ತಿದೆ. ಇರಾನಿಗಳ ಮನೋಭಾವ, ವಿಶ್ಲೇಷಣೆ ಮತ್ತು ಮಾಪನ ಮಾಡುವ ಒಂದು ತಂಡ ನಡೆಸಿದ ಆನ್‌ಲೈನ್ ಸರ್ವೆಕ್ಷಣೆಯಲ್ಲಿ ಚಕಿತಗೊಳಿಸುವ ಫಲಿತಾಂಶ ಪಡೆಯಿತು. ಶೇ.50ರಷ್ಟು ಇರಾನಿಗಳು ಇಸ್ಲಾಂ ಮೇಲೆ ವಿಶ್ವಾಸವಿಲ್ಲವೆಂದರೆ, ಶೇ.60 ಮಂದಿ ತಾವು ನಮಾಜ್ ಮಾಡುವುದಿಲ್ಲವೆಂದರು. ಇನ್ನೂ ಆಶ್ಚರ್ಯವೆಂದರೆ ಶೇ.68ರಷ್ಟು ಮಂದಿ ರಾಜಕೀಯ ಮತ್ತು ಧರ್ಮ ಪ್ರತ್ಯೇಕವಾಗಿರುವ ಜಾತ್ಯತೀತ ಸರಕಾರವಿರಬೇಕೆಂದರು. ಕಳೆದ 43 ವರ್ಷಗಳಿಂದ ಇಸ್ಲಾಂ ಹೆಸರಿನಲ್ಲಿ ಸರಕಾರ ನಡೆಸುತ್ತಿರುವ ದಮನಕಾರಿ ನೀತಿಯ ವಿರುದ್ಧ ಜನರು ಜಿಗುಪ್ಸೆಗೊಂಡಿದ್ದಾರೆ. ಇದರ ಪರಿಣಾಮ ಇರಾನಿನಲ್ಲಿ ಕ್ರೈಸ್ತ ಮಿಷನರಿಗಳು ಸಕ್ರಿಯವಾಗಿದ್ದಾರೆ. ಗುಪ್ತವಾಗಿ ಮತಾಂತರ ಮಾಡುತ್ತಿದ್ದಾರೆ. ಇರಾನ್‌ನಲ್ಲಿ ಇಸ್ಲಾಂನಿಂದ ಕ್ರೈಸ್ತ ಮತಕ್ಕೆ ಮತಾಂತರವಾಗುವ ಪ್ರಮಾಣ ವಿಶ್ವದಲ್ಲೇ ಅತೀ ಹೆಚ್ಚು ಎನ್ನಲಾಗುತ್ತಿದೆ. ಅಯಾತುಲ್ಲಾಗಳೇ ಕ್ರೈಸ್ತ ಮತದ ಪ್ರಮುಖ ಪ್ರಚಾರಕರೆಂದು ಕೆಲವು ಫಾದರ್‌ಗಳು ಹೇಳುತ್ತಿದ್ದಾರೆ. ಗುರುತು ಬಹಿರಂಗಪಡಿಸಲು ಇಚ್ಛಿಸದ ಕೆಲವು ಮೌಲ್ವಿಗಳು ಜನಸಾಮಾನ್ಯರ ಮೇಲೆ ಇಸ್ಲಾಂ ಹೆಸರಲ್ಲಿ ದಬ್ಬಾಳಿಕೆಯಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೂ ಆಳುವವರು ಜನರನ್ನು ದಮನಿಸುವ ಹೊಸ ಹೊಸ ದಾರಿಗಳನ್ನು ಹುಡುಕುತ್ತಿದ್ದಾರೆ. ಸರಕಾರ ನಿರ್ದೇಶಿತ ಕಠಿಣ ಕ್ರಮ ಕೈಗೊಳ್ಳುವ ಕಾದಿಟ್ಟ ಪಡೆಗಳು ಮತ್ತೊಮ್ಮೆ ಜನಾಂದೋಲನ ಹೊಸಕಿ ಹಾಕುವ ವಿಶ್ವಾಸ ಅಯತುಲ್ಲಾಗಳಲ್ಲಿದೆ. ಅಧ್ಯಕ್ಷೀಯ ಚುನಾವಣಾ ಅಕ್ರಮದ ವಿರುದ್ಧ 2009ರಂತೆ ಈ ಬಾರಿಯ ಆಂದೋಲನವು ನೇತೃತ್ವ ಹೀನವಾಗಿ ಮುಂದುವರಿದಿದೆ. ಆದರೆ ಈ ಬಾರಿ ಒಂದು ವಿಶೇಷ ವ್ಯತ್ಯಾಸವಿದೆ. 2009ರ ಆಂದೋಲನದಲ್ಲಿ ಭಾಗವಹಿಸದ ವ್ಯಾಪಾರಿಗಳು ಕಾರ್ಮಿಕರು ಈ ಬಾರಿ ನಿಧಾನವಾಗಿ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದಾರೆ. ಇರಾನ್‌ನಾದ್ಯಂತ ಬಂದ್‌ಗಳ ಮೂಲಕ ಹೊಸ ರೀತಿಯ ಪ್ರತಿಭಟನೆ ಆರಂಭವಾಗಿದೆ. 2009ರಂತೆ ಈ ಬಾರಿಯ ಅಭಿಯಾನ ನಿಲ್ಲದು ಎಂಬ ಅಭಿಪ್ರಾಯವಿದೆ. ಪ್ರದರ್ಶನಕಾರರು ಹಾಗೂ ಪೊಲೀಸರ ನಡುವಿನ ಘರ್ಷಣೆಯಲ್ಲಿ ಇದುವರೆಗೆ 24 ಪೊಲೀಸರು ಮೃತರಾಗಿದ್ದು, ಎರಡು ಸಾವಿರಕ್ಕಿಂತ ಹೆಚ್ಚು ಭದ್ರತಾ ಸಿಬ್ಬಂದಿಗಳು ಗಾಯಗೊಂಡಿದ್ದಾರೆ. ಇರಾನಿನ ಯಾವುದೇ ರಸ್ತೆ, ವೃತ್ತ ಅಥವಾ ಬೀದಿಗಳಲ್ಲಿ ನೈತಿಕ ಪೊಲೀಸರು ಹಿಜಾಬ್, ಇಸ್ಲಾಮಿಕ್ ನಿಯಮಗಳನ್ನು ಜಾರಿಗೊಳಿಸಲು ಯತ್ನಿಸಿದಲ್ಲಿ ಜನರಿಂದ ಹಿಂಸಾತ್ಮಕ ಪ್ರತಿಭಟನೆ ಎದುರಿಸಬೇಕಾಗಿದೆ. ಮೌಲ್ವಿಗಳ ಮೇಲೆ ದೈಹಿಕ ಹಲ್ಲೆಗಳು ಮಾಮೂಲಾಗಿದೆ. ಹಿಜಾಬ್ ಒಂದು ಹೋರಾಟ ಆರಂಭದ ಸಂಕೇತವಾಗಿದೆ. ನಿಮಿತ್ತವಾಗಿದೆ. ನಿಜವಾದ ಸಂಘರ್ಷ ಇಸ್ಲಾಂ ಮತ್ತು ಇರಾನಿನ ಜನತೆಯ ನಡುವೆ ಪ್ರಾರಂಭವಾಗಿದೆ. ತಾರ್ಕಿಕ ಅಂತ್ಯದ ಸಂಕೇತಗಳನ್ನು ಸರಕಾರ ನೀಡಲಾರಂಭಿಸಿದೆ.

ಪ್ರತಿಭಟನೆಗೆ ಮಣಿದ ಇರಾನ್ ಸರಕಾರ

ಇರಾನ್ ಮಹಿಳೆಯರ ಎರಡು ತಿಂಗಳ ಹೋರಾಟಕ್ಕೆ ಸರಕಾರ ಕೊನೆಗೂ ಮಣಿದು ಇರಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದ ನೈತಿಕ ಪೊಲೀಸ್ ಪಡೆ ವಿಸರ್ಜಿಸಿದೆ. ಅಟಾರ್ನಿ ಜನರಲ್ ಮೊಹಮದ್ ಜಾಫರ್ ಮೊಂಟಝೇರಿಯವರು ನ್ಯಾಯಾಂಗ ವ್ಯವಸ್ಥೆಯಲ್ಲಿ ನೈತಿಕ ಪೊಲೀಸರಿಗೆ ಯಾವುದೇ ಸ್ಥಾನವಿಲ್ಲ ಎಂಬ ಹೇಳಿಕೆ ಆಧರಿಸಿ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಇರಾನಿನ ಕಾನೂನುಗಳು ಸಾಂವಿಧಾನಿಕವಾಗಿ ರಚನೆಯಾಗಿವೆ. ಆದರೆ ಸಂವಿಧಾನವನ್ನು ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಅನುಷ್ಠಾನಿಸುವ ಕೆಲವು ವಿಧಾನಗಳಿವೆ ಎಂದು ಅಧ್ಯಕ್ಷ ಇಬ್ರಾಹಿಂ ರೈಸಿಯವರು ಹೇಳಿಕೆ ನೀಡುವ ಮೂಲಕ ಸರಕಾರ ಸಂಧಾನಕ್ಕೆ ಬರುವ ಸಂಕೇತ ನೀಡಿದ್ದಾರೆ. ಇದೇ ವೇಳೆ ದೇಶದಲ್ಲಿ ಹಿಜಾಬ್ ವಿರೋಧಿ ಪ್ರತಿಭಟನೆ ಹಿನ್ನೆಲೆಯಲ್ಲಿ ಮಹಿಳೆಯರು ಹಿಜಾಬ್ ಧರಿಸಬೇಕೆಂಬ ದಶಕಗಳ ಹಳೆಯ ಕಾನೂನು ಪರಿಶೀಲಿಸುವುದಾಗಿ ಸರಕಾರ ತಿಳಿಸಿದೆ.

ಮಹಿಳೆಯರು ತಲೆಯನ್ನು ಕಡ್ಡಾಯವಾಗಿ ವಸ್ತ್ರದಿಂದ ಮುಚ್ಚಬೇಕೆಂಬ ಕಾನೂನಿಗೆ ತಿದ್ದುಪಡಿ ತರುವ ಬಗ್ಗೆ ಸಂಸತ್ತು ಮತ್ತು ಇರಾನಿನ ನ್ಯಾಯಾಂಗ ವ್ಯವಸ್ಥೆ ಜಂಟಿಯಾಗಿ ಪರಿಶೀಲಿಸುತ್ತಿವೆ ಎಂದು ಮೊಂಟಝುರಿ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಗಳು ಇರಾನ್ ಸರಕಾರ ಜನರ ಭಾವನೆಗಳಿಗೆ ಸ್ಪಂದಿಸುವ ಸಂಕೇತಗಳನ್ನು ನೀಡಿದೆ.

ವಿಪರ್ಯಾಸವೆಂದರೆ ಇಸ್ಲಾಮಿಕ್ ರಾಷ್ಟ್ರ ಇರಾನ್‌ನಲ್ಲಿ ಮಹಿಳೆಯರು ಹಿಜಾಬ್ ಕಿತ್ತೆಸೆದು ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದರೆ ನಮ್ಮಲ್ಲಿ ಹಿಜಾಬ್ ವಿವಾದವಾಗಿ ಪರಿಣಮಿಸಿದೆ.

ಅಶೋಕಪುರಂ ರೈಲ್ವೇ ನಿಲ್ದಾಣದ ಅಂಗಳ ಮರು ರೂಪಿಸುವ ಕಾಮಗಾರಿ ಆರಂಭ

● 30.42 ಕೋಟಿ ಅಂದಾಜು ವೆಚ್ಚದ ಯೋಜನೆ ● 2023ರ ಏಪ್ರಿಲ್‌ನಲ್ಲಿ ಪೂರ್ಣ



ಮೈಸೂರು,ಡಿ.14(ಆರ್‌ಕೆ)–ಪ್ರಯಾಣಿಕರಿಗೆ ಮತ್ತಷ್ಟು ಅನುಕೂಲ ಕಲ್ಪಿಸಲು ನೈರುತ್ಯ ರೈಲ್ವೆಯು ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದ ಆವರಣ ಮರು ರೂಪಿಸುವ ಯಾರ್ಡ್ (ರೀಮಾಡೆಲಿಂಗ್) ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ.

ದಿನದಿಂದ ದಿನಕ್ಕೆ ರೈಲು ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ರೈಲು ನಿಲ್ದಾಣದ ಒತ್ತಡ ಕಡಿಮೆ ಮಾಡಲೆಂದು ಅಶೋಕಪುರಂ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಸ್ಟೇಬಲಿಂಗ್ ಮಾರ್ಗ, ಪ್ಲಾಟ್‌ಫಾರಂ ಹಾಗೂ ಫುಟ್ ಓವರ್ ಬ್ರಿಡ್ಜ್ ಸೌಲಭ್ಯ ಕಲ್ಪಿಸುವ 30.42 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದೆ.

ಸಂಸದ ಪ್ರತಾಪ್ ಸಿಂಹ ಅವರು ಆಸಕ್ತಿ ವಹಿಸಿ ಮಂಜೂರು ಮಾಡಿಸಿದ್ದ ಯೋಜನೆಯನ್ನು ಮೊದಲ ಹಂತದಲ್ಲಿ ಆವರಣ ಮರು ರೂಪಿಸುವುದು (15.17 ಕೋಟಿ ರೂ.), ಎರಡನೇ ಹಂತದಲ್ಲಿ 13.39 ಕೋಟಿ ರೂ., ಹಾಗೂ ಉಳಿದ ಕೆಲಸವನ್ನು 1.86 ಕೋಟಿ ರೂ.ಗಳಲ್ಲಿ ರೈಲ್ವೇ ಇಲಾಖೆ ಪೂರ್ಣಗೊಳಿಸಲಿದೆ.

ಕಳೆದ ಒಂದೂವರೆ ತಿಂಗಳ ಹಿಂದೆ ಆರಂಭವಾಗಿರುವ ಒಟ್ಟು 30.42 ಕೋಟಿ ಅಂದಾಜು ವೆಚ್ಚದ ಕಾಮಗಾರಿಗಳನ್ನು 2023ರ ಮಾರ್ಚ್ ಅಥವಾ ಏಪ್ರಿಲ್ ಮಾಹೆಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಕೆಲಸ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದು ರೈಲ್ವೇ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

1.86 ಕೋಟಿ ರೂ. ವೆಚ್ಚದಲ್ಲಿ ಫುಟ್ ಓವರ್ ಬ್ರಿಡ್ಜ್ ನಿರ್ಮಿಸಲಾಗುತ್ತಿದ್ದು, ಇದರಿಂದ ಪ್ರಯಾಣಿಕರು ರೈಲು ಹಳಿ ದಾಟಿ ಅಶೋಕಪುರಂ ರೈಲು ನಿಲ್ದಾಣದ 1 ಪ್ಲಾಟ್‌ಫಾರಂನಿಂದ ಬೇರೆ ಬೇರೆ ಪ್ಲಾಟ್‌ಫಾರಂ ತಲುಪಲು ಅನುಕೂಲವಾಗಲಿದೆ. ಜೊತೆಗೆ 2 ಹೆಚ್ಚುವರಿ ಪ್ಲಾಟ್‌ಫಾರಂ ಲೈನ್‌ಗಳು, 4 ಹೆಚ್ಚುವರಿ ಪೈಪ್‌ಲೈನ್‌ಗಳು, 4 ಹೆಚ್ಚುವರಿ ಸ್ಟೇಬಲಿಂಗ್ ಲೈನ್‌ಗಳು, 1 ಶಂಟಿಂಗ್ ನೆಕ್ ಮತ್ತು ಕೋಚ್ ಸ್ವಚ್ಛಗೊಳಿಸುವ ಸೌಲಭ್ಯವನ್ನೂ ಒದಗಿಸಲಾಗುತ್ತಿದೆ. ಅಶೋಕಪುರಂ ರೈಲು ನಿಲ್ದಾಣ ವಿಸ್ತರಣೆಗೆ ಅಗತ್ಯವಿರುವ ಭೂಮಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸ್ವಾಧೀನಪಡಿಸಿ ಕೊಡುವುದಾಗಿ ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದ್ದಾರೆ. ಅದೇ ರೀತಿ ಬೆಳಗೊಳ ಸ್ಟೇಷನ್‌ನಲ್ಲಿ 2 ಹೊಸ ಸ್ಟೇಬಲಿಂಗ್ ಲೈನ್ ನಿರ್ಮಿಸುವ ಕೆಲಸ ಪೂರ್ಣಗೊಂಡಿದ್ದು, ಇದರಿಂದ ಮೈಸೂರು–ಹಾಸನ–ಅರಸೀಕೆರೆ ಸೆಕ್ಷನ್ ರೈಲುಗಳ ಸಂಚಾರಕ್ಕೆ ಅನುಕೂಲವಾಗಿದೆ ಎಂದು ರೈಲ್ವೇ ಅಧಿಕಾರಿಗಳು ತಿಳಿಸಿದ್ದಾರೆ.

ಕೇವಲ 3 ಸ್ಟೇಬಲಿಂಗ್ ಲೈನ್ ಇದ್ದ ಬೆಳಗೊಳ ರೈಲು ನಿಲ್ದಾಣದಲ್ಲಿ ಈಗ ಹೆಚ್ಚುವರಿಯಾಗಿ 2 ಲೈನ್‌ಗಳನ್ನು ನಿರ್ಮಿಸಲಾಗಿದೆ. ಆದರೆ, 165 ಎಕರೆ ಭೂಮಿ ಅಗತ್ಯವಿರುವ ಕಾರಣ ಉದ್ದೇಶಿತ ನಾಗನಹಳ್ಳಿ ಸ್ಯಾಟಲೈಟ್ ಟರ್ಮಿನಲ್ ಯೋಜನೆ ಆರಂಭವಾಗಿಲ್ಲ. ಅದರ ಬದಲಾಗಿ ಮೈಸೂರು ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ರೈಲ್ವೇ ಕ್ವಾರ್ಟರ್ಸ್‌ಗಳನ್ನು ನೆಲಸಮಗೊಳಿಸಿ ಅಲ್ಲಿ 493 ಕೋಟಿ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ರೈಲ್ವೇ ಇಲಾಖೆ ನಿರ್ಧರಿಸಿದೆ. ಮುಂದಿನ ದಿನಗಳಲ್ಲಿ ರೈಲು ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವುದನ್ನು ಗಮನದಲ್ಲಿರಿಸಿಕೊಂಡು ದೂರದೃಷ್ಟಿಯಿಂದ ಮೈಸೂರು ರೈಲು ನಿಲ್ದಾಣದ ವಿಸ್ತರಣೆ, ಅಶೋಕಪುರಂ ರೈಲು ನಿಲ್ದಾಣದ ಮರು ರೂಪಿಸಲಾಗುತ್ತದೆ. ಬೆಳಗೊಳ ರೈಲು ನಿಲ್ದಾಣ ಸಾಮರ್ಥ್ಯ ಅಭಿವೃದ್ಧಿಗೊಳಿಸಲಾಗಿದೆ ಎಂದು ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ಪ್ರಕರಣ

ಅನಧಿಕೃತ ನಿರ್ಮಾಣ ತೆರವಿಗೆ ಕೋರ್ಟ್ ತಡೆ ಅವಧಿ ವಿಸ್ತರಣೆ



ಲಕ್ಷ್ಮೀಕಾಂತ ರೆಡ್ಡಿ

ಮೈಸೂರು, ಡಿ. 14(ಆರ್‌ಕೆ)– ಹತ್ಯೆಗೀಡಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಮನೆ ಪಕ್ಕದ ಅನಧಿಕೃತ ನಿರ್ಮಾಣ ತೆರವಿಗೆ ಕೋರ್ಟ್ ನೀಡಿದ್ದ ತಡೆ ಅವಧಿ 2023ರ ಜನವರಿ 4ರವರೆಗೆ ವಿಸ್ತರಣೆಯಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ನವೆಂಬರ್ 15ರಂದು ಪಾಲಿಕೆ ಅಧಿಕಾರಿಗಳು ಅನಧಿಕೃತ ನಿರ್ಮಾಣದ ಭಾಗವನ್ನು ತೆರವುಗೊಳಿಸಲು ಮುಂದಾಗಿದ್ದರಾದರೂ, ಅದಕ್ಕೆ ನ್ಯಾಯಾಲಯ ನೀಡಿರುವ ತಾತ್ಕಾಲಿಕ ತಡೆಯಾಜ್ಞೆ ಪ್ರತಿ ಕೈಸೇರಿದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿ ವಾಪಸಾಗಿದ್ದರು. ಇಂದು ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು, 2023ರ ಜನವರಿ 4ರವರೆಗೆ ತಡೆಯಾಜ್ಞೆ ವಿಸ್ತರಿಸಲಾಗಿದೆ ಎಂದು ಪಾಲಿಕೆ ಪರ ವಕೀಲರು ಮಾಹಿತಿ ನೀಡಿದ್ದಾರೆ ಎಂದು ಆಯುಕ್ತರು ತಿಳಿಸಿದ್ದಾರೆ.

ಆ ಅವಧಿಯನ್ನು ಮೊಟಕುಗೊಳಿಸುವಂತೆ ಕೋರಿ ಅಗತ್ಯ ದಾಖಲೆಗಳೊಂದಿಗೆ ವಕೀಲರ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಮನವಿ ಮಾಡಿಕೊಳ್ಳುತ್ತೇವೆ. ತಡೆಯಾಜ್ಞೆ ತೆರವಾಗುತ್ತಿದ್ದಂತೆಯೇ ಕಟ್ಟಡದ ಅನಧಿಕೃತ ನಿರ್ಮಾಣದ ಭಾಗವನ್ನು ತಡಮಾಡದೇ ನೆಲಸಮಗೊಳಿಸಲಾಗುವುದು ಎಂದು ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ನವೆಂಬರ್ 14ರಂದು ಪಾಲಿಕೆ ಅಧಿಕಾರಿಗಳು 24 ಗಂಟೆಗಳ ನೋಟಿಸ್ ನೀಡಿ ಅನಧಿಕೃತ ನಿರ್ಮಾಣವನ್ನು ತೆರವುಗೊಳಿಸಬೇಕೆಂದು ಮಾದಪ್ಪ ಎಂಬುವರಿಗೆ ತಿಳಿಸಲಾಗಿತ್ತು. ನೋಟಿಸ್‌ಗೆ ಸ್ಪಂದಿಸದಿದ್ದರೆ ಗಡುವು ಮುಗಿದ ಬಳಿಕ ಪಾಲಿಕೆಯಿಂದಲೇ ತೆರವುಗೊಳಿಸಲಾಗುವುದೆಂದೂ ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿತ್ತು. ಅಂದು (ನ.15) ಮಧ್ಯಾಹ್ನ 3 ಗಂಟೆಗೆ ಗಡುವು ಮುಗಿದ ಹಿನ್ನೆಲೆಯಲ್ಲಿ ಪಾಲಿಕೆ ವಲಯ ಕಚೇರಿ 3ರ ಸಹಾಯಕ ಆಯುಕ್ತ ಪ್ರಕಾಶ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ನೇತೃತ್ವದ ಅಧಿಕಾರಿಗಳು ತೆರವು ಕಾರ್ಯಾಚರಣೆಗೆ ಮುಂದಾಗಿದ್ದರಾದರೂ, ಅಷ್ಟರಲ್ಲಿ ನ್ಯಾಯಾಲಯವು ಡಿ.14ರವರೆಗೆ ತಾತ್ಕಾಲಿಕ ತಡೆ ನೀಡಿರುವ ಆದೇಶ ಪ್ರತಿ ಕೈಸೇರಿದ್ದರಿಂದ ಸ್ಥಗಿತಗೊಳಿಸಿದ್ದರು ಎಂದರು. ಈ ಸಂಬಂಧ ಮುಂದಿನ ವಿಚಾರಣೆ 2023ರ ಜನವರಿ 4ಕ್ಕೆ ಮುಂದೂಡಲಾಗಿದೆ. ತ್ವರಿತ ವಿಚಾರಣೆಗಾಗಿ ನಾಳೆ (ಡಿ.15)ಯೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ವಕೀಲರಿಗೆ ತಿಳಿಸಿದ್ದೇನೆ ಎಂದು ಆಯುಕ್ತರು ತಿಳಿಸಿದರು.

ರೌಡಿಶೀಟರ್ ಮನೆ ಮೇಲೆ ದಾಳಿ: ಮಾರಕಾಸ್ತ್ರಗಳು ವಶಕ್ಕೆ

ಮೈಸೂರು,ಡಿ.14–ರೌಡಿಶೀಟರ್‌ವೊಬ್ಬನ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡು ಆತನನ್ನು ಬಂಧಿಸಿದ್ದಾರೆ. ಮೈಸೂರಿನ ಗಾಂಧಿನಗರ ನಿವಾಸಿ ಸಲೀಂ ಪಾಷಾ(30) ಬಂಧಿತ ರೌಡಿಶೀಟರ್ ಆಗಿದ್ದು, ಈತ ತನ್ನ ವಿರೋಧಿ ಬಣದ ಜೊತೆ ಗಲಾಟೆ ಮಾಡಿ ಸಮಾಜದಲ್ಲಿ ಶಾಂತಿ ಭಂಗ ಉಂಟು ಮಾಡುವ ನಿಟ್ಟಿನಲ್ಲಿ ಮನೆಯಲ್ಲಿ ಮಾರಕಾಸ್ತ್ರಗಳನ್ನು ಹೊಂದಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಎನ್.ಆರ್.ಠಾಣೆ ಸಬ್ ಇನ್ಸ್‌ಪೆಕ್ಟರ್ ಎಂ.ಜೈಕೀರ್ತಿ ಡಿ.12ರಂದು ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದಿದ್ದರು. ಡಿ.13ರಂದು ಅವರು ಮತ್ತೊಬ್ಬ ರೌಡಿಶೀಟರ್‌ನ ಮನೆ ಶೋಧನಾ ಕಾರ್ಯದಲ್ಲಿ ನಿರತರಾಗಿದ್ದರಿಂದ ಎಸಿಪಿ ಆದೇಶದ ಮೇರೆಗೆ ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ಸಲೀಂ ಪಾಷಾ ಮನೆ ಮೇಲೆ ದಾಳಿ ನಡೆಸಿ, ಬೆಡ್ ರೂಂನಲ್ಲಿದ್ದ ಬೀರುವಿನ ಸೀಕ್ರೆಟ್ ಲಾಕರ್‌ನಲ್ಲಿ 2 ಡ್ರಾಗರ್, ಮಚ್ಚು ವಶಪಡಿಸಿಕೊಂಡ ಎನ್.ಆರ್.ಠಾಣೆ ಪೊಲೀಸರು, ಆತನನ್ನು ಬಂಧಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಮತ್ತು ಟೆಲಿಕಾಲಿಂಗ್‌ಗೆ ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ಬನ್ನಿಮಂಟಪ
7795662367
08212598024

WANTED
PE, NST and Hostel Warden for reputed institution. Send your resume through whatsapp / message.
Contact: 8971577685, 9980631121

ಮನೆ ಭೋಗ್ಯಕ್ಕಿದೆ
ಹೆಬ್ಬಾಳು, 2ನೇ ಹಂತ, 3ನೇ ಕ್ರಾಸ್
8951262136

ಮಾರಾಟಕ್ಕಿದೆ
30x40 ಸೈಟು E/S ಕಾರ್ನರ್, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ, 20x30 ಡ್ಯೂಪ್ಲೆಕ್ಸ್, ಹೊಸ ಮನೆ 70 ಲಕ್ಷ, ಎಲ್ಲಾ ಅಳತೆಯ ಮನೆ ಸೈಟು. ಸಂಪರ್ಕಿಸಿ.
9945042875

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

SMART TUITION
1st to 7th, 8th, 9th, 10th Std. CBSE - ICSE - STATE Syllabus
All Subjects individual Coaching Kannada - Hindi - Maths - Social - Science - English Notes Minding - Perfect reading.
Kuvempunagar
7019325108

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಸಮೃದ್ಧಿ ಗೋಲ್ಡ್ ಕಂಪನಿ
ನಮ್ಮ ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡಲು (ಟೆಲಿಕಾಲರ್) ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್ ಕೂಡ ಇರುತ್ತದೆ. ಸಂಪರ್ಕಿಸಿ:
6362895985
9113228207

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನಮ್ಮ ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡಲು (ಟೆಲಿಕಾಲರ್) ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್ ಕೂಡ ಇರುತ್ತದೆ. ಸಂಪರ್ಕಿಸಿ:
9880923209
8050218809

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್ Corel Draw & Photoshop ಕಲಿತಿರಬೇಕು
ಅಕೌಂಟೆಂಟ್ ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಹೆಲ್ಪರ್ಸ್ ದ್ವಿಚಕ್ರ ಹೊಂದಿರುವವರು
ಉತ್ತಮ ಸಂಬಳ
ಶ್ರೀ ನಾಗರಾಜ ಟಾಕೀಸ್ ಹತ್ತಿರ, ಮೈಸೂರು
9535335310, 9108220848

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFE — All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ. ಮೈಸೂನಲ್ಲಿ
* ಸೇಲ್ಸ್ ಎಕ್ಸಿಕ್ಯೂಟಿವ್
ಕೂಡಲೇ ಸಂಪರ್ಕಿಸಿ:
9980751999
Email ID: starmysoreresume@gmail.com

ಬೇಕಾಗಿದ್ದಾರೆ
ಸಸ್ಯಹಾರಿ ಹೋಟೆಲಿಗೆ ದೋಸೆಯವರು, ಸಪ್ಲೇಯರ್, ಸೂಪರ್‌ವೈಸರ್ ಹಾಗೂ ಕ್ಯಾಶಿಯರ್ ಬೇಕಾಗಿದ್ದಾರೆ
9916206561

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–
ಕ್ಲೀನಿಂಗ್ 1 ಕೋಳಿಗೆ ರೂ.20/–

ಗೌಡ್ರು ನಾಟಿಕೋಳಿ ಅಂಗಡಿ
ನಂ.5/1, ಎನ್.ಆರ್. ಮೊಹಲ್ಲಾ, ಉದಯಗಿರಿ ಮುಖ್ಯ ರಸ್ತೆ, ದೊಡ್ಡಮ್ಮತಾಯಿ ಕಲ್ಯಾಣ ಮಂಟಪ ಪಕ್ಕ, ಬಿ.ಬ್ಲಾಕ್, ಗಣೇಶ್‌ನಗರ, ಮೈಸೂರು
ಸಮಯ: ಬೆಳಗ್ಗೆ 6 ರಿಂದ ರಾತ್ರಿ 9ರವರೆಗೆ
9448048576 / 9632378020

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

WANTED
Receptionist, Typist, House Keeping, Accountant, Office Asst. (English Must) Cooks / Asst. Cooks, Security Guards.
Walk-in-10am to 8pm
Contact: 9739786223

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ : 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502
9108100117

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

SUPREME PUBLIC SCHOOL
Baburayana Koppalu, Srirangapatna Tq.
WANTED TEACHER
Qualification: B.Sc, B.Ed (CBZ)
Experienced / Fresher
9141564307
9740983133

ನಿವೃತ್ತ ನೌಕರರಿಗೆ ಉದ್ಯೋಗ
ವಿದ್ಯಾರ್ಹತೆ: SSLC, PUC, Degree, ವೇತನ : 10,000/–, 20,000/–, 30,000/– ಸಂದರ್ಶನಕ್ಕೆ ಹಾಜರು ಪಡಿಸಬೇಕಾದ ದಾಖಲೆಗಳು 1) ವಿದ್ಯಾರ್ಹತೆ ಅಂಕಪತ್ರ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, 5) ಪಾಸ್‌ಪೋರ್ಟ್ ಅಳತೆ ಪೋಟೋ.
ಸಂಪರ್ಕಿಸಿ:
9886647852

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥರಿಯಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

SITES FOR SALE
30x40 Sites,
Bank Loan upto 80%, Near Guru Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road
8660105902

S.B GOLD COMPANY
ಗಿರವಿ ಚಿನ್ನಾಭರಣ ಖರೀದಿ
ನಿಮ್ಮ ಚಿನ್ನಾಭರಣಕ್ಕೆ ಹಣ ಬೇಕೆ ನೀವು ಗಿರವಿ ಇಟ್ಟ ಚಿನ್ನಾಭರಣವನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ನಿವೃತ್ತರಿಗೆ ವಿಶೇಷ ಅವಕಾಶ
Free Seminar : 17-12-2022 11.30am, ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ, ಮೈಸೂರು. (ಗೋವರ್ಧನ್ Hotel ಪಕ್ಕ) Lunch Follows. VRS, ನಿವೃತ್ತರು, House wives, Business Sector ಇವರಿಗೆ Salary, PF, ESI ಇತರ Benefits ಕೂಡಲೇ ಸಂಪರ್ಕಿಸಿ:
7349052084 / 8197510102
9880115979

REQUIRED 60x40 PLOT
East / North / South facing, T K Layout, Sriram, JP, Vidyaranya, Vishweshwara, Dattagalli, Muda Layout - Near Temples and Parks.
Brokers excuse.
9019378574

ಭೋಗ್ಯ & ಬಾಡಿಗೆಗೆ
ಶಾರದದೇವಿನಗರ ಹತ್ತಿರ ಅಮೃತಾನಂದ ಮಯಿ ಶಾಲೆ ಪಕ್ಕ 40x60 ಅಳತೆಯ, 1ನೇ ಅಂತಸ್ತಿನ ಮನೆ ಬಾಡಿಗೆ & ಭೋಗ್ಯ ಎರಡಕ್ಕೂ ಇದೆ. ದೊಡ್ಡ ರೈಲ್ವೆ ಸ್ಟೇಷನ್ ಹತ್ತಿರ ಗಾಡಿ ಟೀ ಸ್ಟಾಲ್ ಬಾಡಿಗೆಗಿದೆ 10 ಸಾವಿರ ಅಡ್ವಾನ್ಸ್, ಬಾಡಿಗೆ 6 ಸಾವಿರ ಮತ್ತು ಕೆ.ಜಿ.ಕೊಪ್ಪಲಿನಲ್ಲಿ 2 ರೂಂ, ಮನೆ ಕೆಳಗಡೆ ಮನೆ ಭೋಗ್ಯಕ್ಕಿದೆ. NF - 5 1/4 ಲಕ್ಷಕ್ಕಿದೆ ಸಂಪರ್ಕಿಸಿ: ಸ್ವಾಮಿ
9845570573

Change of Name
I, Mohammed Muzamil, S/o Mohammed Wazeer, residing at #472/3, Udayagiri, Mysore-570 019, Karnataka Stage, India, have changed my name from Mohammed Muzzamil to Mohammed Muzamil, vide affidavit dated 8-11-2022 sworn in before Advocate and Notary C.R. Seetharam.
Sd/- Mohammed Muzamil

ಹೋಟೆಲ್ ಬಾಡಿಗೆಗೆ ಇದೆ
Ready to occupy, opposite to Suyog Hospital, E&F Block, Ramakrishnanagar, Near Sai Baba Temple.
Mob: 9900374603

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time - Full time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed salary / PF-ESI. Age: Above 30 years.
9008799156 / 8861611395

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ITI (Fitter, Turner, Welder, Machinist, Any Trade) (AAL).
7019380847, 7090309148

ಮಹಿಳೆಯರು ಮತ್ತು ಹುಡುಗಿಯರಿಗೆ
ಟಿ.ನರಸೀಪುರ ತಾಲ್ಲೂಕಿನಲ್ಲಿ ಸ್ಕೂಲ್ ಪ್ರಾಜೆಕ್ಟ್ ಕೆಲಸಕ್ಕೆ 25 ರಿಂದ 35 ವಯಸ್ಸುಳ್ಳ ವಿದ್ಯಾವಂತ, ಬುದ್ಧಿವಂತರು ಕೆಲಸಕ್ಕೆ ಬೇಕಾಗಿದ್ದಾರೆ. ಮಾರ್ಕೆಟಿಂಗ್ ಅಲ್ಲ.
9901080314

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

SITE FOR SALE
30x40 Site Sale
ಮೆಲ್ಲಹಳ್ಳಿ ಕ್ರಾಸ್, ಬನ್ನೂರ್ ರೋಡ್, MUDA, 15 Lakh.
3 bedroom house, commercial purpose, N.R. Mohalla.
Selvaraj, 9844446469

ಮನೆ ಭೋಗ್ಯಕ್ಕಿದೆ
* ವಿಜಯನಗರ 2ನೇ ಹಂತ, ಮೈಸೂರು. ವಿಜಯನಗರ ಪೊಲೀಸ್ ಸ್ಟೇಷನ್ ಹಿಂಭಾಗ 60x40, 4 ಬೆಡ್ ರೂಂ, ಸೌಲಭ್ಯತೆ: Car parking ವ್ಯವಸ್ಥೆ ಇರುತ್ತದೆ.
9845743950, 9483507250

SITE FOR SALE
40x67, 'W' Face, KHB Colony, Hootagalli, near Hunsur Road.
Mob: 8880787811

ಡ್ರೈವರ್‌ಗಳು ಬೇಕಾಗಿದ್ದಾರೆ
Light Motor Vehicle (Dost) Eicher.
ಸಂಪರ್ಕಿಸಿ:
Mob: 9538555511

ಕೇರಳ ಕೊಳ್ಳೇಗಾಲ ಶ್ರೀ ಜ್ಯೋತಿಷ್ಯರು
ಪಂ|| ಮೋಹನ್ ಪೊದುವಾಳ್ (ಕೇರಳ) ಮೋಡಿ ಯಲ್ಲಪ್ಪನವರ ಮಗ ವಿದ್ವಾನ್ ಜ್ಯೋತಿಷಿ ವಿಶಾರದ ಮೋಡಿ ಮಾಂತ್ರಿಕ
ಪಂ|| ಕುಮಾರ್
ಮೊ.: 9036984793
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕಳ್ಳಿಗೌಡ ಅಘೋರ ಮೋಡಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಖಾಯಂ ವಿಳಾಸ: ರಾಜ್ ಗೋಪಾಲ್ ಆಸ್ಪತ್ರೆ ಬಿಲ್ಡಿಂಗ್, ಚೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ವಿಹಾರ ಮಾರ್ಗ, ಸಿದ್ಧಾರ್ಥ ಲೇಔಟ್, ಮೈಸೂರು.

Govt. Job ಇರುವ ವಿಧುರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
Smart ಒಕ್ಕಲಿಗ ಗೌಡ age 40/5.5, B.E Engineer Well Settled ಇರುವಂತಹ ವಿಧುರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ. 2ನೇ ಸಂಬಂಧಕ್ಕೆ ವಿಧವೆ / ವಿಚ್ಛೇದಿತೆ, ನೌಕರಸ್ಥೆ ವಧು ಬೇಕಾಗಿದ್ದಾರೆ. (ಮಕ್ಕಳಿದ್ದರೂ ಪರವಾಗಿಲ್ಲ), ಮೈಸೂರು
8310546187

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಅನುಭವವುಳ್ಳ ನಾರ್ತ್ ಇಂಡಿಯನ್ ಭಟ್ಟರು, ಸೌತ್ ಇಂಡಿಯನ್ ಹೆಲ್ಪರ್‌ಗಳು, ಸಪ್ಲೇಯರ್ಸ್, ಕೌಂಟರ್ ಕೆಲಸಕ್ಕೆ ಟೀ, ಕಾಫಿ ಮಾಡುವವರು, ಚಾಟ್ಸ್ ಮಾಡುವವರು, ದೋಸೆ ಮಾಡುವವರು, ಪಾತ್ರೆ ತೊಳೆಯುವವರು ಕ್ಲೀನರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8088337564 / 9380681467

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

FOR SALE
1) 40x60 (80/60) 2 sites Brahmins Layout 'A' Block
2) 1 acre land near Hullahalli.
3) 40x45 S/W C, RK Nagar 'I' Block.
4) 30x40, 13 Lakh sites available attach Brahmins 'E' Block Layout.
5) 40x60 commercial, Yelwala to Srirangapatna Road
PRAKRUTHI PROPERTIES
90359 90359, 95386 90359

ಹೊಸ ಮನೆ ಮಾರಾಟಕ್ಕಿದೆ
ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
Mob: 8050345574

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು, 24 hrs ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ 12000–23000 ರವರೆಗೆ. (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ).
Mob: 9739292222

airtel WANTED
Sales Executive,
Salary : 10,000/- + Allowance + Incentive extra. Contact:
9591501305

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, N R Mohalla, J P Nagar, Vontikoppal ಮುಂತಾದ ಏರಿಯಾಗಳಲ್ಲಿ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ, ಸಂಬಳ: 14,000 – 36,000. ಸಂಪರ್ಕಿಸಿ:
7676939277
9980850141

ಬೇಕಾಗಿದ್ದಾರೆ
ಅನುಭವಿ ಬ್ಯೂಟಿಷಿಯನ್‌ಗಳು ಗೋಕುಲಂ ಮತ್ತು ವಾಕ್ ಮತ್ತು ಹಿಯರಿಂಗ್ ಬೋಗಾದಿಯರುವ ಲೇಡೀಸ್ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ:
7624877838, 8317474198

ಆಪ್ತ ಸಮಾಲೋಚಕರು ಬೇಕಾಗಿದ್ದಾರೆ
ಹೆಸರಾಂತ ಆಯುರ್ವೇದ ಸಂಸ್ಥೆಗೆ ಸಮಾಲೋಚಕರು ಬೇಕಾಗಿದ್ದಾರೆ. ಕನ್ನಡ ಮತ್ತು ಮರಾಠಿ ಭಾಷೆ ಮಾತನಾಡಬಲ್ಲ ಪಿಯುಸಿ ಮತ್ತು ಮೇಲ್ಪಟ್ಟು ವಿದ್ಯಾಭ್ಯಾಸ ಮಾಡಿರುವ ಮಹಿಳಾ ಟೆಲಿ ಮಾರ್ಕೆಟಿಂಗ್ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಯ್ಕೆಯಾದರೆ ಸ್ಥಳದಲ್ಲೇ ಉದ್ಯೋಗ ಖಾತ್ರಿ ದೊರೆಯುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
Mob: 9606229404

ಶ್ರೀ ಮೂರ್ತಿ ಟೂರಿಸ್ಟ್
ಒಂದೇ ದಿನದಲ್ಲಿ 3 ರಂಗನ ದರ್ಶನಕ್ಕಾಗಿ ಪ್ರವಾಸ. ಶ್ರೀರಂಗಪಟ್ಟಣ, ಮಧ್ಯರಂಗ, ಶ್ರೀರಂಗಂ. 29.12.22 ಗುರುವಾರ ಬೆಳಿಗ್ಗೆ 4.30ಕ್ಕೆ ಹೊರಟು, 30.12.22 ಬೆಳಿಗ್ಗೆ 10ಕ್ಕೆ ವಾಪಸ್ ಬರುವುದು. ಪ್ರವಾಸಕ್ಕೆ ಬೆಳಗಿನ ತಿಂಡಿ, ಕಾಫಿ, ಒಂದು ಊಟ ಸೇರಿರುತ್ತದೆ. (KSRTC ಬಸ್‌ನಲ್ಲಿ).
Mob: 9480733069
Tickets at your doorstep.

SITES FOR SALE
MUDA AND DTCP APPROVED SITE IN MYSORE
Starting from 2250 / sq.ft. 20x30, 30x40, 30x50, 40x60 & Corner site.
BANK LOANS AVAILABLE. READY TO REGISTRATION & READY TO CONSTRUCTION.
9164743059, 9945344203

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

100% ಕೆಲಸ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Billings, Front office, Telecaller ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 38,000 (ESI+PF+OT) ಸೇರಿ. ಸಂಪರ್ಕಿಸಿ:
9663704915
7892878915

WANTED ACCOUNTANT
for office work, Near Devegowda Circle, Bannur Road, (Girls Preferred)
7022336376

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Star Solar


Renewable Energy
ಕೇವಲ 19,499/- 200 Ltr Easy EMI
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸಿಂಧಿ ನರಸಿಂಹಸ್ವಾಮಿ ಚಿಟ್ (ಕ) ಪ್ರೈ.ಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಮೇಲ್ಪಟ್ಟು. ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ. ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಶೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16–12–2022, ಸಮಯ: 11.30ಕ್ಕೆ. ಸಂಪರ್ಕಿಸಿ:
7892303484 / 9483247455

WANTED SALES EXECUTIVE
Confident (Male & Female) Sales & Marketing Executives with Excellent communication skills, self Motivated persons will be offered an attractive Remuneration Package.
7624874832

SRA PACKAGE TOURS
3 ದಿನಗಳ ಗೋವಾ ಪ್ರವಾಸ ಹೊರಡುವ ದಿನಾಂಕ: 07/01/2023. ಎಲ್ಲಾ ಸೇರಿ ಒಬ್ಬರಿಗೆ ಕೇವಲ 6000/– ರೂ.
2 ದಿನಗಳ ನಿರ್ವಾಣ ಬೀಚ್ ವಾರಾಂತ್ಯ ಪ್ರವಾಸ ಹೊರಡುವ ದಿನಾಂಕ: 28/01/2023
* ಬೀಚ್ ಸೈಡ್‌ನಲ್ಲಿ ಟೆಂಟ್ ಸ್ಟೇ
* ಸಸ್ಯಹಾರಿ ತಿಂಡಿ ಊಟ
* ಕಾಫಿ, ಟೀ ಮಿನರಲ್ ವಾಟರ್
* ಕ್ಯಾಂಪ್ ಫೈರ್ ಮತ್ತು ಮ್ಯೂಸಿಕ್
ಎಲ್ಲಾ ಸೇರಿ ಒಬ್ಬರಿಗೆ 4000/– ರೂ
7022271023

Need Loan against Property at the Rate of 1.5% Rs. 5 Cr.
Contact:
8310345191

ಸುವರ್ಣಯಾತ್ರ
ಮಹಾಕಾಳೇಶ್ವರ ಓಂಕಾರೇಶ್ವರ 2 ಜ್ಯೋತಿರ್ಲಿಂಗ ಸೇರಿ ಮಧ್ಯಪ್ರದೇಶ ಪ್ರವಾಸ 4 ದಿನಗಳು 7/01/2023.
ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ ಗಯಾ ಅಯೋಧ್ಯೆ 7 ದಿನಗಳು 20/01/2023 ಪುರಿ ಜಗನ್ನಾಥ್ ಪ್ರವಾಸ 4 ದಿನಗಳು 13/01/2023
9008381022
9019462508

NEED 30X40 MUDA REGISTERED RESIDENTIAL PLOT
West North East Facing, Strictly No Broker OR Resale, Old R T Nagar, Somanath Nagar, Judicial Layout, SBM Layout, Roopanagar, Cavery Gramina Bank Layout, Niveditha Nagar. Sharadha Devinagara. Contact No:
9632387760

SITE FOR SALE
30x50
Site for Sale maple Green Layout (attach new RT Nagar, Yadahalli Village)
9880273834

ಮಾರಾಟಕ್ಕಿದೆ
ಹುಣಸೂರು ನಗರದ ಜೆ.ಎಲ್.ಬಿ ರಸ್ತೆಯ ಅಪ್ಸರೆ ಬ್ಯಾಂಗಲ್ ಸ್ಟೋರ್ ಕಟ್ಟಡ ಮಾರಾಟಕ್ಕಿದೆ. ಅಳತೆ ಅಗಲ 14 ಅಡಿ, ಉದ್ದ 30 ಅಡಿ.
ಸಂಪರ್ಕಿಸಿ:
9902637349
9632017740

ಮೈಸೂರು ಮ್ಯಾರೇಜ್ ಬ್ಯೂರೋ
ಕೂರ್ಗಿ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವಿಧವೆಗೆ ಸುಂದರ ಶ್ರೀಮಂತ ವಿದ್ಯಾವಂತ ವರ ವಿಧುರ ವಿಚ್ಛೇದಿತರು ಲೈಫ್ ಪಾರ್ಟನರ್ ಬೇಕು. ಜಾತಿ ಅಭ್ಯಂತರ ಇಲ್ಲ.
ಡಾ.ಗುರೂಜಿ ಮೈಸೂರು
9448229184
7899625268

7 ಲಕ್ಷ ಪಾವತಿಸಿ MUDA ಸೈಟ್ BOOK ಮಾಡಿ
30x40, 30x50, 40x60
22 acrs 346 Sites, Gated community, L&T & Infosys Just 1 km, Hebbal Ring Road 2 km. Bank Loan ಸೌಲಭ್ಯವಿದೆ.
7892603991

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ "ಸರ್ವೀಸ್ ಇಂಜಿನಿಯರ್" ಕೆಲಸಕ್ಕೆ ITI ಅಥವಾ Diploma ಮಾಡಿರುವ, ಕಂಪ್ಯೂಟರ್‌ನಲ್ಲಿ ಪರಿಣಿತಿ ಹೊಂದಿರುವ 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
9845111623

ಬೇಕಾಗಿದ್ದಾರೆ
ಮೈಸೂರಿನ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಹುಡುಗರು ತಕ್ಷಣ ಬೇಕಾಗಿದ್ದಾರೆ. (7th, SSLC, PUC, ITI, Any Trade) ಪಾಸ್ ಅಥವಾ ಫೇಲ್. ಸಂಪರ್ಕಿಸಿ:
8970775753 / 9901607437
8553934317

ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ ಶುದ್ಧ ಸಸ್ಯಹಾರಿ ರೆಸ್ಟೋರೆಂಟ್‌ಗೆ ನುರಿತ, ಅನುಭವವುಳ್ಳ, (1) ದೋಸಾ ಮಾಸ್ಟರ್, (2) ಸರ್ವಿಸ್ (Service) & ಸಪ್ಲೇಯರ್ (3) ಸಹಾಯಕ (Assistant), ಕುಕ್. ತರಕಾರಿ ಹೆಚ್ಚುವುದು, ಹಿಟ್ಟು ರುಬ್ಬುವುದು ಮತ್ತು ಪೂರಿ, ಚಪಾತಿ ಮಾಡಲು ಬರುವ ಕುಕ್‌ಗಳು (ಚೆಫ್) ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ. ಸಂಪರ್ಕಿಸಿ:
7899028086

SITE FOR SALE
40x60
Site for sale Suvarna Layout Bogadi (Near Rainbow School)
9880273834

ಉದ್ಯೋಗಾವಕಾಶ
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Officer ಹುದ್ದೆಗೆ ರಾಜ್ಯ / ಕೇಂದ್ರ ನಿವೃತ್ತ ನೌಕರರಿಗೆ, ಗೃಹಿಣಿಯರಿಗೆ, ಉಪನ್ಯಾಸಕರಿಗೆ, ಸಾರ್ವಜನಿಕರಿಗೆ ಸುವರ್ಣಾವಕಾಶ Fixed Salary + PF, Age 30 Years & above
8660078402

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ನಾಳೆ ಜಿಲ್ಲೆಯಲ್ಲಿ ಜನಸಂಕಲ್ಪ ಯಾತ್ರೆ

ಜಿಲ್ಲಾ ಉಸ್ತುವಾರಿ ಸಚಿವರಿಂದ ಸಿದ್ಧತೆ ಪರಿಶೀಲನೆ



ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ಜನಸಂಕಲ್ಪ ಯಾತ್ರೆ ಸಮಾವೇಶದ ವೇದಿಕೆ ಸಿದ್ಧತೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಪರಿಶೀಲಿಸಿದರು.

ಪಾಂಡವಪುರ, ಡಿ. 14– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಡಿ.16ರಂದು ನಡೆಯುವ ಬಿಜೆಪಿ ಜನಸಂಕಲ್ಪ ಯಾತ್ರೆ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರು ಪ್ರತ್ಯೇಕವಾಗಿ ಬಂದು ವೇದಿಕೆ ಸಿದ್ಧತೆಗಳನ್ನು ಪರಿಶೀಲಿಸಿದರು.

ಮುಖ್ಯಮಂತ್ರಿ ಆಗಮಿಸುವ ಹಿನ್ನೆಲೆಯಲ್ಲಿ ವ್ಯವಸ್ಥಿತವಾಗಿ ಸಿದ್ಧತೆ ಮಾಡಿಕೊಳ್ಳುವಂತೆ ಬಿಜೆಪಿ ಮುಖಂಡರಿಗೆ ಸೂಚಿಸಿದ ಸಚಿವರು, ಬಳಿಕ ಸಿಎಂ ಆಗಮಿಸುವ ಹೆಲಿಪ್ಯಾಡ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯದ ಹಲವು ಸಚಿವರು, ನಾಯಕರು ಜನಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಹೇಳಿದರು.

ಪಾಂಡವಪುರ ಕಾರ್ಯಕ್ರಮದ ಬಳಿಕ ಮಧ್ಯಾಹ್ನ ಮದ್ದೂರು ತಾಲೂಕಿನಲ್ಲಿ ಜನಸಂಕಲ್ಪ ಯಾತ್ರೆ ನಡೆಯಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದೇ ಸಂಕಲ್ಪ ಯಾತ್ರೆ ಪ್ರಮುಖ ಉದ್ದೇಶ ಎಂದು ಹೇಳಿದರು.

ಕಬ್ಬಿನ ದರ ನಿಗದಿ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು ಎಂಎಸ್‌ಪಿ ಕುರಿತು ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು. ಕಬ್ಬಿನ ದರ ನಿಗದಿ ಇಡೀ ದೇಶಕ್ಕೆ ಸಂಬಂಧಿಸಿರುವುದರಿಂದ, ಕೇಂದ್ರದ ಜತೆ ಚರ್ಚಿಸಿ ಕ್ರಮವಹಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ತಹಶೀಲ್ದಾರ್ ಎಸ್.ಎಲ್.ನಯನ, ಡಿವೈಎಸ್‌ಪಿ ಸಂದೇಶ್‌ಕುಮಾರ್, ಮೇಲುಕೋಟೆ ಕ್ಷೇತ್ರದ ಬಿಜೆಪಿ ಮುಖಂಡ ಡಾ. ಎನ್.ಎಸ್.ಇಂದ್ರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್, ಎಚ್.ಎನ್.ಮಂಜುನಾಥ್, ಬಿಜೆಪಿ ತಾಲೂಕು ಅಶೋಕ, ಕಾಂತರಾಜ್, ನವೀನ್‌ಕುಮಾರ್, ಅಶೋಕ್ ಸೇರಿದಂತೆ ಹಲವರು ಹಾಜರಿದ್ದರು.

ಮದ್ದೂರಿನಲ್ಲಿ ಜನಸಂಕಲ್ಪ ಯಾತ್ರೆ: ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಡಿ.16ರಂದು ನಡೆಯುವ ಬಿಜೆಪಿ ಜನಸಂಕಲ್ಪ ಯಾತ್ರೆ ಹಿನ್ನೆಲೆಯಲ್ಲಿ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ವೇದಿಕೆ ಸಿದ್ಧತೆಯನ್ನು ಪರಿಶೀಲಿಸಿದರು.

ನಂತರ ಬಿಜೆಪಿ ಮುಖಂಡ ಹಾಗೂ ಮನಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಮಾತನಾಡಿ, ಶುಕ್ರವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಬಿಜೆಪಿ ಜನಸ್ಪಂದನಾ ಯಾತ್ರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ ಎಂದರು.

ಕಾರ್ಯಕ್ರಮಕ್ಕೆ ಸುಮಾರು 10 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಬಿಜೆಪಿ ಕಾರ್ಯಕರ್ತರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್, ತಾಲೂಕು ಘಟಕದ ಅಧ್ಯಕ್ಷ ಪಣ್ಣೇದೊಡ್ಡಿ ರಘು, ಮುಖಂಡರುಗಳಾದ ಹನುಮಂತು, ಮನು, ಶಿವಲಿಂಗಯ್ಯ, ಹೊನ್ನಲಗೆರೆ ಸ್ವಾಮಿ, ಬುಲೆಟ್ ಬಸವರಾಜು, ಡಾಬಾ ಕಿಟ್ಟಿ, ಶಿವರಾಮು, ಅಭಿ, ಶಿವು, ಮಧು, ಸುಧಾಕರ್ ಇದ್ದರು.

ಮುಖ್ಯಮಂತ್ರಿಗೆ ಕಪ್ಪು ಬಾವುಟ: ಕೆಂಪೂಗೌಡ



ಪಾಂಡವಪುರ, ಡಿ.14– ಕಬ್ಬಿನ ಬೆಲೆ ನಿಗದಿ ಮಾಡದೆ ರೈತ ವಿರೋಧಿ ನೀತಿ ಅನುಸರಿಸುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಿ.16ರಂದು ಪಾಂಡವಪುರಕ್ಕೆ ಆಗಮಿಸುತ್ತಿದ್ದು, ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಹೇಳಿದರು. ಬುಧವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು ರೈತರಿಗೆ ಸಿಹಿ ಸುದ್ದಿ ನೀಡುವೇ ಎಂದು ಹುಸಿ ಭರವಸೆಯನ್ನು ಮುಖ್ಯಮಂತ್ರಿಗಳು ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕಳೆದ ಸೆ.19ರಂದು ಬೆಂಗಳೂರಿನಲ್ಲಿ ಕಬ್ಬು ಬೆಲೆ ನಿಗದಿಗಾಗಿ ರೈತರು ಸಮಾವೇಶ ನಡೆಸಿದಾಗ ಮಾತುಕತೆಗೆ ಕರೆದ ಮುಖ್ಯಮಂತ್ರಿಗಳು ಕಬ್ಬಿನ ಬೆಲೆ ನಿಗದಿಗೆ ಒಪ್ಪಿದ್ದರು. ಅ.5ರಂದು ಬೆಂಗಳೂರು–ಮೈಸೂರು ಹೆದ್ದಾರಿ ತಡೆ ವೇಳೆ ಭರವಸೆ ಸಹ ನೀಡಿದ್ದರು. ಬಳಿಕ ಅ.15ರಂದು ಸಕ್ಕರೆ ಸಚಿವರು ರೈತ ಸಂಘದ ಜತೆಗೆ ಮಾತುಕತೆ ನಡೆಸಿ ಭರವಸೆ ನೀಡಿದರಷ್ಟೆ. ಮತ್ತೊಮ್ಮೆ ನಂಜನಗೂಡಿನಲ್ಲಿ ರೈತರ ಪ್ರತಿಭಟನೆ ಸ್ಥಳಕ್ಕೆ ಬಂದು ಕಬ್ಬು ಬೆಳೆಗಾರರಿಗೆ ಸಿಹಿ ಸುದ್ದಿ ನೀಡುವುದಾಗಿ ತಿಳಿಸಿದ್ದರು ಸಹ ಕಬ್ಬಿನ ಬೆಲೆ ನಿಗದಿ ವಿಚಾರದಲ್ಲಿ ಮೌನವಹಿಸಿದ್ದಾರೆ ಎಂದು ಕಿಡಿಕಾರಿದರು.

ರೈತ ದಿನಾಚರಣೆ: ಡಿ.23ರಂದು 'ವಿಶ್ವ ರೈತ ದಿನಾಚರಣೆ' ಹಾಗೂ ರೈತ ನಾಯಕ 'ಕೆ.ಎಸ್.ಪುಟ್ಟಣ್ಣಯ್ಯ–75ನೇ ವರ್ಷದ ಹುಟ್ಟುಹಬ್ಬ' ಕಾರ್ಯಕ್ರಮವನ್ನು ಕ್ಯಾತನಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದೆ ಎಂದು ಸುನೀತಾ ಪುಟ್ಟಣ್ಣಯ್ಯ ತಿಳಿಸಿದರು. ಮುಂದಿನ ವಿಧಾನ ಸಭೆ ಚುನಾವಣೆಯಲ್ಲಿ ರೈತ ಯುವ ನಾಯಕ ದರ್ಶನ್ ಪುಟ್ಟಣ್ಣಯ್ಯನವರ ಸ್ಪರ್ಧೆ ಖಂಡಿತ ಎಂದು ತಿಳಿಸಿದರು.

ನಮ್ಮ ಕ್ಲಿನಿಕ್‌ಗೆ ಸಚಿವ ಚಾಲನೆ



ಕೆ.ಆರ್.ಪೇಟೆ, ಡಿ.14– ಬಡವರು, ದಿನಗೂಲಿ ಕಾರ್ಮಿಕರು ಹಾಗೂ ಸಮಾಜದ ದುರ್ಬಲ ವರ್ಗದವರು 'ನಮ್ಮ ಕ್ಲಿನಿಕ್' ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಚಿವ ನಾರಾಯಣಗೌಡ ಹೇಳಿದರು.

ರಾಜ್ಯ ಸರ್ಕಾರ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ಆರಂಭವಾಗುತ್ತಿರುವ '114 ನಮ್ಮ ಕ್ಲಿನಿಕ್'ಗೆ ಚಾಲನೆ ನೀಡಿ ಮಾತನಾಡಿದ ಅವರು, ಜನಸಾಮಾನ್ಯರಿಗೆ ಸುಲಭವಾಗಿ ವೈದ್ಯಕೀಯ ಸೇವೆ ಸಿಗಲಿ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಹೇಳಿದರು.

'ನಮ್ಮ ಕ್ಲಿನಿಕ್'ಗಳಲ್ಲಿ 12 ರೀತಿ ವೈದ್ಯಕೀಯ ಸೇವೆಗಳು ಲಭ್ಯ ಇದ್ದು, ವೈದ್ಯಕೀಯ ಅಧಿಕಾರಿ, ಶುಶ್ರೂಷಕಿ ಲ್ಯಾಬ್ ಟೆಕ್ನೀಷಿಯನ್, ಮತ್ತು ಡಿ ಗ್ರೂಪ್ ನೌಕರ ಇರುತ್ತಾರೆ. ನಂತರ ಮಾತನಾಡಿದ ಪುರಸಭಾ ಸದಸ್ಯ ಎಚ್ ಆರ್ ಲೋಕೇಶ್, ತಾಲೂಕಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಹೊಸಹೊಳಲು ಗ್ರಾಮಕ್ಕೆ ಒಂದು ಉಪಯುಕ್ತ ಆಸ್ಪತ್ರೆ ಬೇಕು ಎಂಬ ಮನವಿಗೆ ಸ್ಪಂದಿಸಿ 'ನಮ್ಮ ಕ್ಲಿನಿಕ್' ತಂದಿರುವ ಸಚಿವ ಕೆ.ಸಿ.ನಾರಾಯಣಗೌಡ ಅವರಿಗೆ ಗ್ರಾಮಸ್ಥರು ಋಣಿಯಾಗಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂದನ್, ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಿವಕುಮಾರ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶಿವಮ್ಮ, ಪುರಸಭಾ ಅಧ್ಯಕ್ಷೆ ಮಹಾದೇವಿ ನಂಜುಂಡ, ಪುರಸಭಾ ಸದಸ್ಯರಾದ ಎಚ್.ಆರ್. ಲೋಕೇಶ್, ಕಲ್ಪನಾ ದೇವರಾಜು, ಕೆ.ಆರ್.ನೀಲಕಂಠ, ಪ್ರಮೋದ್, ಕೆ.ಎನ್. ಮಹೇಶ್, ಯಶಸ್ವಿನಿ ಮಂಜುನಾಥ್, ಚಂದ್ರೇಗೌಡ, ನಿರ್ದೇಶಕರಾದ ಯೋಗೇಶ್, ಕೃಷ್ಣ, ಬಿಜೆಪಿ ಯುವ ಮುಖಂಡ ರಾಜು, ಚಿಕ್ಕೇಗೌಡ, ಬಸವೇಗೌಡ, ಸಾರಂಗಿ ನಾಗಣ್ಣ, ಡಾ.ಅನಿಲ್, ಡಾ. ಶಿವಕುಮಾರ್, ಡಾ.ಮಧುಸೂಧನ್, ಪುರಸಭಾ ಮುಖ್ಯಾಧಿಕಾರಿ ಬಸವರಾಜು, ಗೋಪಿ, ಜಯಮ್ಮ ಸೇರಿದಂತೆ ಇತರರು ಇದ್ದರು.

ಮೇಲುಕೋಟೆ: ಹುಂಡಿಯಲ್ಲಿ 42 ಲಕ್ಷ ರೂ ಸಂಗ್ರಹ



ಮೇಲುಕೋಟೆ, ಡಿ.14– ಇಲ್ಲಿನ ಚೆಲುವನಾರಾಯಣಸ್ವಾಮಿ ಸಮೂಹ ದೇವಾಲಯಗಳ ಹುಂಡಿಗಳಿಂದ 42,02,955 ರೂ ಕಾಣಿಕೆ ಹಣ ಹಾಗೂ 22 ಗ್ರಾಂ ಚಿನ್ನ, 709 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ.

ಎರಡು ದಿನಗಳ ಕಾಲ ನಡೆದ ಹುಂಡಿ ಹಣ ಎಣಿಕೆಯಲ್ಲಿ ಯೋಗನರಸಿಂಹ ಸ್ವಾಮಿ ದೇವಾಲಯದಲ್ಲಿ 10,39,076ರೂ ಮತ್ತು ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ 31,63,879 ರೂ ಸಂಗ್ರಹವಾಗಿದೆ. ಮೂರು ತಿಂಗಳ ಹುಂಡಿ ಹಣ ಎಣಿಕೆ ಉಸ್ತುವಾರಿಯನ್ನು ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ವಹಿಸಿದ್ದರು. ಹುಂಡಿ ಹಣ ಎಣಿಕೆಯಲ್ಲಿ ಸ್ಥಳೀಯ ಎಸ್‌ಬಿಐ ವ್ಯವಸ್ಥಾಪಕರು ಮತ್ತು ಸಿಬ್ಬಂದಿ, ಸ್ತ್ರೀ ಶಕ್ತಿಸಂಘದ ಕಾರ್ಯಕರ್ತೆಯರು ದೇವಾಲಯದ ಸಿಬ್ಬಂದಿ ಭಾಗವಹಿಸಿದ್ದರು.

ಕೌಶಲ್ಯ ಬೆಳಸಿಕೊಳ್ಳಲು ರೈತರಿಗೆ ಸಲಹೆ

ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್



ಮಂಡ್ಯ, ಡಿ.14– ರೈತರು ಪ್ರಮುಖವಾಗಿ ತಾವು ಬೆಳೆದಂತಹ ಕೃಷಿ ಉತ್ಪನ್ನಗಳಿಗೆ ಯಾವ ರೀತಿ ಮೌಲ್ಯವರ್ಧನೆ ಮಾಡಬೇಕು, ಅದರ ಜೀವಿತಾವಧಿಯನ್ನು ಹೇಗೆ ಹೆಚ್ಚಿಸಬೇಕು ಎಂಬುದನ್ನು ತಿಳಿದುಕೊಂಡರೆ ರೈತರು ತಾವು ಬೆಳೆದಂತಹ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಪಡೆದು ಲಾಭಂಶವನ್ನು ಪಡೆಯಬಹುದು ಎಂದು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್ ತಿಳಿಸಿದರು.

ನಗರದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಮಾರಾಟಗಾರರ –ಖರೀದಿದಾರರ ಸಮ್ಮೇಳನ ಹಾಗೂ ಆಹಾರ ಮೇಳ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು. ದಕ್ಷಿಣ ಕರ್ನಾಟಕದಲ್ಲಿ ಶೇ.70–75 ರಷ್ಟು ರೈತರು ಸಣ್ಣ ಹಾಗೂ ಅತಿ ಸಣ್ಣ ರೈತರಿದ್ದಾರೆ. 10 ರಿಂದ 20 ಎಕರೆ ಜಮೀನು ಹೊಂದಿರುವ ರೈತರ ಸಂಖ್ಯೆ ವಿರಳ. ಸರಿಯಾದ ರೀತಿಯ ಕೃಷಿಪದ್ಧತಿಯನ್ನು ಅಳವಡಿಸಿಕೊಳ್ಳದಿದ್ದರೆ, ರೈತರು ನಾನಾ ಸಮಸ್ಯೆಗಳಿಗೆ ಒಳಗಾಗುತ್ತಾರೆ ಎಂದರು.

ರೈತರು ಉದ್ದಿಮೆದಾರರಾಗಬೇಕಾದರೆ ರೈತರು ಮಾರುಕಟ್ಟೆಗಳಿಗೆ ಲಗ್ಗೆ ಇಡಬೇಕು. ಖರೀದಿದಾರರಿಗೆ ಬೇಕಿರುವ ರೂಪಗಳಲ್ಲಿ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡಬೇಕು. ಪ್ರಗತಿಪರ ರೈತರು ಹೆಚ್ಚಿನ ಲಾಭ ಪಡೆಯುತ್ತಿರುವ ಉದಾಹರಣೆಗಳು ನಮ್ಮ ಮುಂದೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜ್, ನಬಾರ್ಡ್ ಪ್ರಾದೇಶಿಕ ಕಚೇರಿ ಉಪ ಮಹಾ ಪ್ರಬಂಧಕ ದೀಪ ಎಸ್ .ಪಿಳ್ಳೈ ನಬಾರ್ಡ್ ಡಿ.ಡಿ.ಎಂ. ಹರ್ಷಿತಾ ಬಿ.ವಿ. ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಅಶೋಕ್ ವಿ.ಎಸ್, ಮಳವಳ್ಳಿಯ ಕಿರು ಮಿಲ್ಲೆಟ್ಸ್ ಮಹೇಶ್, ಕೃಷಿ ಉಪನಿರ್ದೇಶಕಿ ಮಾಲತಿ, ಸಹಾಯಕ ಕೃಷಿ ನಿರ್ದೇಶಕಿ ಸೌಮ್ಯಶ್ರೀ, ವಿಕಸನ ಸಂಸ್ಥೆಯ ನಿರ್ದೇಶಕ ಮಹೇಶ್ಚಂದ್ರ ಗುರು, ಹಾಗೂ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಡಿ.ಮಂಜುನಾಥ್ ಹಾಗೂ ಇತರರು ಇದ್ದರು.

ರಾಜ್ಯಮಟ್ಟದ ವಿವಿಧ ಸಂಸ್ಕೃತ ಸ್ಪರ್ಧೆಗಳ ಬಹುಮಾನ ವಿತರಣೆ

ಕಲ್ಯಾಣಿ ಜೀರ್ಣೋದ್ಧಾರ ಶೀಘ್ರ: ಪುಟ್ಟರಾಜು



ಮೇಲುಕೋಟೆ, ಡಿ.14– ಮೇಲುಕೋಟೆಯ ಕಲ್ಯಾಣಿ ಹಾಗೂ ಕೊಳಗಳ ಜೀರ್ಣೋದ್ಧಾರ ಕಾರ್ಯ ಶೀಘ್ರ ಆರಂಭವಾಗಲಿದೆ ಎಂದು ಶಾಸಕ ಸಿ.ಎಸ್. ಪುಟ್ಟರಾಜು ತಿಳಿಸಿದರು.

ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್‌ನಲ್ಲಿ ನಡೆದ ರಾಜ್ಯಮಟ್ಟದ ವಿವಿಧಸಂಸ್ಕೃತ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ನಾನು ಸಚಿವನಾಗಿದ್ದ ವೇಳೆ ಮೀಸಲಿರಿಸಿದ್ದ 32ಕೋಟಿ ರೂ ಅನುದಾನ ಬಿಡುಗಡೆ ಆಗಿದ್ದು, ಕಲ್ಯಾಣಿಗಳ ಜೀರ್ಣೋದ್ಧಾರ ಕಾರ್ಯ, ಎಲ್ಲಾ ಕೊಳಗಳಿಗೆ ಕಾವೇರಿ ನೀರು ತುಂಬಿಸುವ ಯೋಜನೆ, ಭಕ್ತರು ತಂಗಲು ವಸತಿಗೃಹ ನಿರ್ಮಾಣ ಸಹ ಆರಂಭವಾಗಲಿದೆ ಎಂದು ಶಾಸಕರು ಹೇಳಿದರು.

ಸನ್ಮಾನ: ಸಮಾರಂಭದಲ್ಲಿ ನಾಲ್ವರು ಗಣ್ಯರನ್ನು ಸನ್ಮಾನಿಸಲಾಯಿತು. ದಿವಂಗತ ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಮತ್ತು ಸ್ವಾಮಿ ಸನ್ನಿಧಿ ಪರಿಚಾರಕ ದಿವಂಗತ ಎಂ.ಎ ನರಸಿಂಹಯ್ಯಂಗಾರ್‌ರಿಗೆ ಮರಣೋತ್ತರ "ಕೈಂಕರ್ಯಶ್ರೀ" ಪ್ರಶಸ್ತಿ ನೀಡಲಾಯಿತು. ನಾಗರಾಜ ಅಯ್ಯಂಗಾರ್ ಪರ ಮುಖ್ಯಶಿಕ್ಷಕ ಸಂತಾನ ರಾಮನ್ ಮತ್ತು ನರಸಿಂಹಯ್ಯಂಗಾರ್ ಪರ ಪಾರ್ಥಸಾರಥಿ ಪ್ರಶಸ್ತಿ ಸ್ವೀಕರಿಸಿದರು. ಇದೇ ವೇಳೆ ಗಣನೀಯ ಸೇವೆ ಸಲ್ಲಿಸಿದ ಕರಗಂ ನಾರಾಯಣ ಅಯ್ಯಂಗಾರ್ ಮತ್ತು ವಿದ್ವಾನ್ ನಾರಾಯಣನ್‌ರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಸಚಿವ ವೀರನಾರಾಯಣ ಎನ್.ಕೆ ಪಾಂಡುರಂಗಿ, ಮೇಲುಕೋಟೆ ಗ್ರಾ.ಪಂ ಉಪಾಧ್ಯಕ್ಷ ತಿರುಮಲೈ, ಪ್ರಭಾಕರ್, ಎಸ್.ಕುಮಾರ್ ಸೇರಿ ಇತರರು ಇದ್ದರು.

ಒಂದನೇ ಪುಟದಿಂದ

ಪರಿಶಿಷ್ಟರ ಐಕ್ಯತಾ ಸಮಾವೇಶ

ಪರಿಶಿಷ್ಟ ಸಮುದಾಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಮುಂದಿನ ದಿನಗಳಲ್ಲಿ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ದೃಷ್ಟಿಯಿಂದ ಈ ಸಮಾವೇಶ ಬಹಳ ಮಹತ್ವದ್ದಾಗಿದೆ ಎಂದು ಹೇಳಿದರು. ಸಮಾವೇಶಕ್ಕೆ ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಿಂದಲೂ ಜನರನ್ನು ಆಹ್ವಾನಿಸಿದ್ದೇವೆ. ಆಯಾ ಕ್ಷೇತ್ರದ ಶಾಸಕರು, ಮಾಜಿ ಶಾಸಕರು, ಸಂಸದರು, ಮಾಜಿ ಸಂಸದರು, ಮುಖಂಡರು ಎಸ್‌ಸಿ–ಎಸ್‌ಟಿ ಸಮುದಾಯದ ಹೆಚ್ಚು ಜನರನ್ನು ಕರೆತರುವ ಮೂಲಕ ಸಮಾವೇಶದ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಲಾಗಿದೆ ಎಂದರು. ಬರೀ ಜನ ಸೇರಿಸುವುದಷ್ಟೇ ಅಲ್ಲ, ಈ ಸಮಾವೇಶದಲ್ಲಿ ಪರಿಶಿಷ್ಟರ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಿದ್ದೇವೆ. ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಪರಿಶಿಷ್ಟರಿಗೆ ಯಾವ ಸೌಲಭ್ಯ, ಯೋಜನೆಗಳನ್ನು ನೀಡಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಪರಿಶಿಷ್ಟರನ್ನು ಯಾವ ರೀತಿ ನಡೆಸಿಕೊಳ್ಳುತ್ತಿದೆ ಎಂಬ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಈ ಸಮುದಾಯಗಳಿಗೆ 2018ರಲ್ಲಿ ಕಾಂಗ್ರೆಸ್ ಸರ್ಕಾರದ ಬಜೆಟ್‌ನಲ್ಲಿ 30,000 ಕೋಟಿ ತೆಗೆದಿಟ್ಟಿತ್ತು. ಆ ಹಣವನ್ನು ಖರ್ಚು ಮಾಡಿದ್ದಲ್ಲದೆ, ಹಣ ಖರ್ಚು ಮಾಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಿದ್ದೆವು. ಅದರ ಪ್ರಕಾರ ಪರಿಶಿಷ್ಟರಿಗೆ ಮೀಸಲಿಟ್ಟಿದ್ದ ಹಣವನ್ನು ಕಾರ್ಯಕ್ರಮಗಳಿಗೆ ನೀಡಲಾಗಿತ್ತು. ಆದರೆ ಬಿಜೆಪಿ ಸರ್ಕಾರ 3 ವರ್ಷದಲ್ಲಿ ಪರಿಶಿಷ್ಟರಿಗೆ ಬಜೆಟ್‌ನಲ್ಲಿ ಕಡಿಮೆ ಮಾಡಿದ್ದಾರೆ. ಈ ಸಮುದಾಯಗಳಿಗೆ ಬಜೆಟ್‌ನಲ್ಲಿ ನೀಡಬೇಕಾದ ಶೇ.24.1 ಅನುದಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಡಿಮೆ ಮಾಡಿದ್ದಾರೆ. ಪರಿಶಿಷ್ಟರ ಯೋಜನೆ, ಕಾರ್ಯಕ್ರಮಗಳನ್ನೂ ಸ್ಥಗಿತಗೊಳಿಸಿ, 42,000 ಕೋಟಿ ಕೊಡಬೇಕಾದ ಕಡೆ 28,000 ಕೋಟಿ ಕೊಟ್ಟಿದ್ದಾರೆ. ಅಲ್ಲದೆ ಈ ಹಣವನ್ನು ಇತರೆ ಕಾರ್ಯಕ್ರಮಗಳಿಗೆ ಬದಲಾಯಿಸಿದ್ದಾರೆ ಎಂದು ಆರೋಪಿಸಿದರು.

ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಸ್ಥಗಿತಗೊಳಿಸಿದ ಬಿಜೆಪಿ ಸರ್ಕಾರ: ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ನಿಲ್ಲಿಸಿದ್ದಾರೆ. ಪರಿಶಿಷ್ಟ 60 ಲಕ್ಷ ಶಾಲಾ ಮಕ್ಕಳಿಗೆ 14 ರಾಜ್ಯಗಳಲ್ಲಿ ಸ್ಕಾಲರ್‌ಶಿಪ್ ಸ್ಥಗಿತಗೊಳಿಸಿದ್ದಾರೆ. ಮುಖ್ಯಮಂತ್ರಿ, ಇತ್ತೀಚೆಗೆ ಮೀಸಲಾತಿಗೆ ಸೇರ್ಪಡೆಯಾದ ಸಮುದಾಯಗಳಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಆದರೆ ಸಂವಿಧಾನಾತ್ಮಕವಾಗಿ ನೀಡಬೇಕಾದ ಪರಿಶಿಷ್ಟರಿಗೆ ನೀಡದೇ ವಂಚಿಸುತ್ತಿದ್ದಾರೆ ಎಂದು ದೂರಿದರು.

ಈ ಎಲ್ಲಾ ವಿಚಾರಗಳನ್ನು ಚಿತ್ರದುರ್ಗದಲ್ಲಿ ನಡೆಯುವ ಐಕ್ಯತಾ ಸಮಾವೇಶದಲ್ಲಿ ಸುದೀರ್ಘವಾಗಿ ಚರ್ಚಿಸಿ, ಬಿಜೆಪಿ ಸರ್ಕಾರದಿಂದ ಪರಿಶಿಷ್ಟರು ಹೇಗೆ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬ ಸಂದೇಶ ರವಾನಿಸಲಾಗುವುದು. ಅಲ್ಲದೆ ಮುಂಬರುವ ಚುನಾವಣೆಯಲ್ಲಿ ಎಲ್ಲಾ ಪರಿಶಿಷ್ಟರು ಒಗ್ಗಟ್ಟಾಗಬೇಕಿದೆ. ನಾವೆಲ್ಲಾ ಒಂದೆಡೆ ನಿಲ್ಲಬೇಕಿದೆ. ಕಾಂಗ್ರೆಸ್ ಪಕ್ಷಕ್ಕೆ ಸಹಕಾರ ನೀಡಬೇಕಾಗಿದೆ. ಪರಿಶಿಷ್ಟರಿಗೆ ಧೈರ್ಯ ತುಂಬುವ ಕೆಲಸ ನಾವು ಮಾಡಲಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಪರ ನಿಲ್ಲಲು ಪರಿಶಿಷ್ಟರಿಗೆ ಮುನಿಯಪ್ಪ ಮನವಿ: ಮಾಜಿ ಸಚಿವ ಹಾಗೂ ಸಮಾವೇಶದ ಉಪಾಧ್ಯಕ್ಷ ಕೆ.ಹೆಚ್.ಮುನಿಯಪ್ಪ ಮಾತನಾಡಿ, ಡಾ.ಅಂಬೇಡ್ಕರ್ ಹೇಳಿದಂತೆ ಸಂವಿಧಾನಾತ್ಮಕವಾಗಿ ಈ ಸಮುದಾಯಗಳಿಗೆ ಸಮನಾಗಿ ಅನುದಾನ ಸದ್ವಿನಿಯೋಗ ಆಗಬೇಕು. ಯಾವ ಪಕ್ಷ ಪರಿಶಿಷ್ಟರಿಗಾಗಿ ಕೆಲಸ ಮಾಡುತ್ತದೆಯೋ ಆ ಪಕ್ಷದವರಿಗೆ ಈ ಸಮುದಾಯ ಬೆಂಬಲವಾಗಿ ನಿಲ್ಲುವ ಮೂಲಕ ತಮ್ಮ ಅಭಿವೃದ್ಧಿ ಕಾಣಬೇಕಾಗಿದೆ ಎಂದರು.

ಪರಿಶಿಷ್ಟರ ದಿಕ್ಕು ತಪ್ಪಿಸುತ್ತಿರುವ ಬಿಜೆಪಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಪರಿಶಿಷ್ಟರ ಐಕ್ಯತಾ ಸಮಾವೇಶಕ್ಕೆ ಐದು ಲಕ್ಷಕ್ಕೂ ಅಧಿಕ ಜನ ಸೇರುವ ನಿರೀಕ್ಷೆ ಇದೆ. ಈ ಸಮುದಾಯಗಳ ಹೆಚ್ಚು ಜನರು ಭಾಗವಹಿಸಬೇಕು. ಕಾಂಗ್ರೆಸ್ ಪಕ್ಷ ಪರಿಶಿಷ್ಟ ಸಮುದಾಯಗಳಿಗೆ ರೂಪಿಸಿರುವ ಯೋಜನೆಗಳು ಹಾಗೂ ಬಿಜೆಪಿ ಸರ್ಕಾರ ಪರಿಶಿಷ್ಟರಿಗೆ ವಂಚಿಸುತ್ತಿರುವ ಬಗ್ಗೆ ಸಮಾವೇಶದಲ್ಲಿ ಜನರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದರು. ಬಿಜೆಪಿಯವರು ಪರಿಶಿಷ್ಟರಿಗೆ ಮೀಸಲಾತಿ ನೀಡಿದ್ದು ನಾವೇ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ನಿಜಸ್ಥಿತಿ ಎಂದರೆ ಮೀಸಲಾತಿಗೆ ಅಡಿಗಲ್ಲು ಹಾಕಿದ್ದೇ ಕಾಂಗ್ರೆಸ್. ಇದನ್ನು ಬಿಜೆಪಿ ಬರೀ ಸುಳ್ಳುಗಳನ್ನೇ ಹೇಳಿಕೊಂಡು ಪರಿಶಿಷ್ಟರ ಹಾದಿ ತಪ್ಪಿಸುವ ನಾಟಕವಾಡುತ್ತಿದೆ ಎಂದು ಆರೋಪಿಸಿದರು.

ಮಾಜಿ ಸಚಿವೆ ಮಲ್ಲಾಜಮ್ಮ, ಕಾಂಗ್ರೆಸ್ ಎಸ್‌ಸಿ ಘಟಕದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ, ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಶಾಸಕರಾದ ಹೆಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜ್, ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್ ಇನ್ನಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾನಾ ಉಚಿತ ಯೋಜನೆ ಮೂಲಕ ಜನರ ಸೋಂಬೇರಿಗಳಾಗಿ ಮಾಡಬೇಡಿ: ಅವರ ಜೀವನ ರೂಪಿಸಿ, ಸ್ವಾವಲಂಬಿಗಳಾಗಿ ಮಾಡಿ

● ಮೈಸೂರಿನ ಖ್ಯಾತ ಉದ್ಯಮಿ ಜಗನ್ನಾಥ್ ಶೆಣೈ ಅಭಿಮತ ● ಉದ್ಯಮಿ ಆರ್.ಗುರು ಅವರಿಗೆ ಜೀಯಸ್ ಸಿಎಸ್‌ಆರ್ ಪ್ರಶಸ್ತಿ ಪ್ರದಾನ ● ಸರ್ಕಾರದ ಉಚಿತ ಯೋಜನೆ ಫಲವಾಗಿ ರಾಜ್ಯದಲ್ಲಿ ಜನರೇ ಕೆಲಸಕ್ಕೆ ಲಭ್ಯವಿಲ್ಲ: ವಿಷಾದ



ರೋಟರಿ ಮೈಸೂರು ಮಿಡ್ ಟೌನ್, ಜೀಯಸ್ ಬಯೋಟೆಕ್ ವತಿಯಿಂದ ಉದ್ಯಮಿ ಆರ್.ಗುರು ಅವರಿಗೆ ಜೀಯಸ್ ಸಿಎಸ್ ಆರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಗುರು ಅವರ ಪತ್ನಿ ಸುಲೋಚನ, ರೋಟರಿ ಮೈಸೂರು ಮಿಡ್ ಟೌನ್ ಅಧ್ಯಕ್ಷ ನವೀನ್ ಚಂದ್ರ, ಕಾರ್ಯದರ್ಶಿ ಕುಮಾರಸ್ವಾಮಿ, ಜೀಯಸ್ ಬಯೋಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಅಭಿಲಾಷ್ ನಾಯರ್ ಹಾಗೂ ಗುರು ಅವರ ಕುಟುಂಬಸ್ಥರು ಸೇರಿದಂತೆ ರೋಟರಿ ಮೈಸೂರು ಮಿಡ್ ಟೌನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಡಿ.14(ಜಿಎ)– ಸರ್ಕಾರದ ಉಚಿತ ಯೋಜನೆಗಳಿಂದ ಜನರನ್ನು ಸೋಂಬೇರಿ ಮಾಡುತ್ತಿದ್ದಾರೆ. ಉಚಿತ ಯೋಜನೆಗಳ ಬದಲು ಜೀವನವನ್ನು ರೂಪಿಸುವ ಯೋಜನೆಗಳನ್ನು ಸೃಷ್ಟಿಸಿದರೆ, ಜನ ಸ್ವಾವಲಂಬಿಗಳಾಗುತ್ತಾರೆ ಎಂದು ಖ್ಯಾತ ಉದ್ಯಮಿ ಜಗನ್ನಾಥ್ ಶೆಣೈ ಅಭಿಪ್ರಾಯಪಟ್ಟರು.

ರೋಟರಿ ಮೈಸೂರು ಮಿಡ್ ಟೌನ್ ಹಾಗೂ ಜೀಯಸ್ ಬಯೋಟೆಕ್ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಮೈಸೂರಿನ ಎನ್.ಆರ್ ಫೌಂಡೇಶನ್ ಸಂಸ್ಥಾಪಕ ಹಾಗೂ ಎನ್.ಆರ್. ಗ್ರೂಪ್ ಅಧ್ಯಕ್ಷರೂ ಆದ ಆರ್. ಗುರು ಅವರಿಗೆ ಜೀಯಸ್ ಸಿಎಸ್ ಆರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಜಗನ್ನಾಥ್ ಶೆಣೈ ಮಾತನಾಡಿ, ಆರ್. ಗುರು ಅವರ ಸಮಾಜಮುಖಿ ಕೆಲಸಗಳನ್ನು ನೋಡಿದರೆ, ಅವರು ಈ ಸೇವೆಗಳ ಮೂಲಕವೇ ವಿಶೇಷ ದಾಖಲೆ ನಿರ್ಮಿಸಲಿದ್ದಾರೆ. ಅವರು ಇನ್ನೂ ನೂರು ವರ್ಷ ಆರೋಗ್ಯವಾಗಿದ್ದು, ಮತ್ತಷ್ಟು ಸಮಾಜ ಸೇವೆ ಮಾಡಲಿ ಎಂದು ಆಶಿಸಿದರು.

ಅವಶ್ಯಕತೆ ಇರುವವರಿಗೆ ನಾವು ಸಹಾಯ ಮಾಡಿದರೆ, ದೇವರು ನಮಗೆ ಹತ್ತು ಪಟ್ಟು ನೀಡುತ್ತಾನೆ. ನಮ್ಮ ತಂದೆ ಸಮಾಜಕ್ಕೆ ನೀಡಿದ ಕೊಡುಗೆಗಳ ಬಗ್ಗೆ ನನಗೆ ಆರಂಭ ದಿನಗಳಲ್ಲಿ ತಿಳಿದಿರಲಿಲ್ಲ. ಆದರೆ, ಅವರ ಪುಸ್ತಕ ಓದಿದ ನಂತರ ಅವರ ಸೇವೆಗಳ ಬಗ್ಗೆ ಅರಿವಾಯಿತು. ನಂತರ ನಾನು ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಕೊಂಡೆ. ಅದರಂತೆ ಗುರು ಅವರ ಜೊತೆಯಾಗಿದ್ದೇನೆ. ನನಗೀಗ ತೃಪ್ತಿ ಮನೋಭಾವವಿದೆ ಎಂದರು.

ಸರ್ಕಾರಗಳು ಉಚಿತ ಯೋಜನೆಗಳ ಮೂಲಕ ಆಹಾರ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡುತ್ತಿರುವುದರಿಂದ ಜನರು ಕೆಲಸಕ್ಕೆ ಬರುತ್ತಿಲ್ಲ. ಅದಕ್ಕಾಗಿ ನಾವು ಬಿಹಾರ್, ಓರಿಸಾ ಸೇರಿದಂತೆ ಹೊರ ರಾಜ್ಯಗಳಿಂದ ಜನರನ್ನು ಕರೆತರುವ ಪರಿಸ್ಥಿತಿ ನಿರ್ಮಾಣವಾಗಿದೆ. ಉಚಿತ ಯೋಜನೆ ನೀಡುವ ಬದಲು ಕಡಿಮೆ ಬೆಲೆಗೆ ನೀಡುವಂತಾಗಬೇಕು. ಜೊತೆಗೆ ಜನರನ್ನು ಸ್ವಾವಲಂಬಿಗಳಾಗುವಂತೆ ಯೋಜನೆಗಳನ್ನು ರೂಪಿಸಬೇಕಿದೆ. ಕೆಲವೇ ತಿಂಗಳಿನಲ್ಲಿ ಚುನಾವಣೆ ಇದ್ದು, ಈ ಸಂದರ್ಭದಲ್ಲಿ ಹಣ ಹಂಚುತ್ತಾರೆ. ಅದನ್ನು ಮೊದಲು ಬ್ಯಾನ್ ಮಾಡಬೇಕು. ಇದರಿಂದ ಸ್ವಾಸ್ಥ ಸಮಾಜ ಹಾಳಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ತಂಬಾಕು ಆರೋಗ್ಯಕ್ಕೆ ಹಾನಿಕಾರ ಎಂದು ಹೇಳುತ್ತಾರೆ. ನಾವು ಸರ್ಕಾರದ ನಿಯಮಗಳನ್ನು ಪಾಲಿಸುತ್ತಿದ್ದೇವೆ. ಕಳೆದ 85 ವರ್ಷಗಳಿಂದ ನಮ್ಮ ಸಂಸ್ಥೆಯಲ್ಲಿ 1.50 ಲಕ್ಷಕ್ಕೂ ಅಧಿಕ ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆಲ್ಲರಿಗೂ ಜೀವನಾಧಾರವಾಗಿದೆ. ಇಂದು ಮಿಷಿನ್‌ಗಳ ಮೂಲಕ ಸಿಗರೇಟ್ ತಯಾರಾಗುತ್ತಿದೆ. ಬೀಡಿಗಳನ್ನು ಕೈನಿಂದಲೇ ತಯಾರಿಸುತ್ತಿದ್ದಾರೆ. ದೇಶದಾದ್ಯಂತ 2 ಕೋಟಿಗೂ ಅಧಿಕ ಬೀಡಿ ಸಂಸ್ಥೆಗಳಿವೆ. 25 ಕೋಟಿ ರೂ. ವಾರ್ಷಿಕ ಆದಾಯವಿದೆ. ನಾವು ಅತೀ ಹೆಚ್ಚು ತೆರಿಗೆ ಪಾವತಿ ಮಾಡುತ್ತಿದ್ದೇವೆ, ಸಂಸ್ಥೆಯ ಮೇಲೆ ಇದುವರೆಗೂ ಒಂದು ಕಪ್ಪು ಚುಕ್ಕೆ ಇಲ್ಲ. ಸರ್ಕಾರ ನಮ್ಮ ಕೆಲಸಗಾರರಿಗೆ ಉದ್ಯೋಗ ಸೃಷ್ಟಿ ಮಾಡಿದರೆ, ಬೀಡಿ ಉತ್ಪಾದನೆಯನ್ನೇ ಸ್ಥಗಿತಗೊಳಿಸುತ್ತೇವೆ ಎಂದು ಖಚಿತವಾಗಿ ನುಡಿದರು.

ನಂತರ ಮೆರಿಟರ್ ಎಚ್‌ವಿಎಸ್ ಇಂಡಿಯಾ ಲಿಮಿಟೆಡ್ ಹಾಗೂ ಆಟೋಮೋಟಿವ್ ಲಿಮಿಟೆಡ್‌ನ ಛೇರ್ಮನ್ ಡಾ. ಮುತ್ತುಕುಮಾರ್ ಮಾತನಾಡಿ, ಗುರು ಅವರು ಮೈಸೂರು ಮಾತ್ರವಲ್ಲದೆ ಇಡೀ ಕರ್ನಾಟಕಕ್ಕೆ ಆದರ್ಶ ವ್ಯಕ್ತಿಯಾಗಿದ್ದು, ಉದ್ಯಮಕ್ಕೆ ರಾಜ ಗುರುವಾಗಿದ್ದಾರೆ. ಇವರಿಗೆ ಈ ಪ್ರಶಸ್ತಿ ನೀಡುತ್ತಿರುವುದು ಸಂತಸ ವಿಚಾರ. ಈ ಸ್ಫೂರ್ತಿಯಿಂದ ಮತ್ತಷ್ಟು ಗುರುಗಳನ್ನು ನಾವು ಕಾಣಬಹುದಾಗಿದೆ ಎಂದರು.

ಹಸಿದವರಿಗೆ ಊಟ ಹಾಕುವುದು ಉತ್ತಮ ಕೆಲಸ. ಆದರೆ, ಅದು ನಿರಂತರ ಅಭ್ಯಾಸವಾಗಬಾರದು. ಅದರ ಬದಲು ಅವರಿಗೆ ಜೀವನವನ್ನು ರೂಪಿಸಿಕೊಳ್ಳುವ ಕೌಶಲ್ಯಗಳನ್ನು ಕಲಿಸಬೇಕು. ಅದೇ ರೀತಿ ಗುರು ಅವರು ಹಸಿದವರಿಗೆ ಊಟ ಮಾತ್ರ ಹಾಕಿ ಸುಮನಾಗಲಿಲ್ಲ. ಅದರ ಬದಲು ಅವರಿಗೆ ಶಿಕ್ಷಣ, ಆರ್ಥಿಕ ಸ್ಥೈರ್ಯ, ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ಸ್ವಾಲಂಬಿಗಳಾಗಿ ಮಾಡಿ ಜೀವನವನ್ನು ರೂಪಿಸಿದ್ದಾರೆ ಎಂದರು.

ಭಾರತ ದೇಶ ಅತ್ಯುತ್ತಮ ದೇಶವಾಗಿದ್ದು, ಉದ್ಯಮಕ್ಕೆ ಸೂಕ್ತ ಸ್ಥಳವಾಗಿದೆ. ಜಿಡಿಪಿ ಅಭಿವೃದ್ಧಿಯಾಗಬೇಕು ಎಂದರೆ, ಮಹಿಳೆಯರು ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಬದಲಾವಣೆಯ ಭಾರತವನ್ನು ಕಾಣಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಮಿಡ್ ಟೌನ್ ಅಧ್ಯಕ್ಷ ನವೀನ್ ಚಂದ್ರ, ಕಾರ್ಯದರ್ಶಿ ಕುಮಾರಸ್ವಾಮಿ, ಜೀಯಸ್ ಬಯೋಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಅಭಿಲಾಷ್ ನಾಯರ್ ಸೇರಿದಂತೆ ರೋಟರಿ ಮೈಸೂರು ಮಿಡ್ ಟೌನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

> 1986ರ ಆಸುಪಾಸಿನಲ್ಲಿ ಮೈಸೂರಿನಲ್ಲಿ ಒಂದು ವಿಶೇಷ ಚೇತನರ ಶಾಲೆಯ ಅಗತ್ಯವಿದೆ ಎಂದು ಕೆಲವರು ನನನ್ನು ಕೇಳಿಕೊಂಡರು. ಆಗ ನಿರ್ಮಾಣವಾಗಿದ್ದೇ 'ರಂಗರಾವ್ ಸ್ಮಾರಕ ವಿಶೇಷ ಚೇತನರ ಶಾಲೆ'. ಅಂಥ ಮಕ್ಕಳಿಗೆ ಶಿಕ್ಷಣ ನೀಡಲು ಆರಂಭಿಸಲಾಯಿತು. ಈ ಶಾಲೆ ಆರಂಭಿಸಿದ್ದಾಗ ಕೇವಲ ಇಬ್ಬರು ಹೆಣ್ಣು ಮಕ್ಕಳಿದ್ದರು. ಗ್ರಾಮೀಣ ಪ್ರದೇಶದಿಂದ ಮಕ್ಕಳನ್ನು ಕರೆತರಲು ಬಹಳಷ್ಟು ಕಷ್ಟವಾಗಿತ್ತು. ಆದರೆ, ಈಗ 1 ರಿಂದ 10ನೇ ತರಗತಿವರೆಗೂ 88 ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಶಿಕ್ಷಣ ಪಡೆದವರಲ್ಲಿ ಅನೇಕರು ಪಿಎಚ್.ಡಿ ಮಾಡಿದ್ದಾರೆ. ಕೆಲವರು ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಇಂದಿಗೆ ಸಂಸ್ಥೆ 34 ವರ್ಷ ಪೂರೈಸಿದೆ. 2012ರಲ್ಲಿ ನಮ್ಮ ಸಂಸ್ಥೆ ಹಾಗೂ ವಿವೇಕಾನಂದ ಟ್ರಸ್ಟ್ ಜೊತೆಗೂಡಿ ಆರಂಭಿಸಿದ ಪ್ರೇರಣ ಯೋಜನೆ ಮೂಲಕ ಮೈಸೂರಿನ 7 ಸ್ಲಂಗಳಲ್ಲಿನ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲಾಯಿತು. ಹಾಗೇ ಇಲ್ಲಿನ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ ಜೀವ ರೂಪಿಸಿಕೊಳ್ಳುವಂತೆ ಮಾಡಲಾಯಿತು. ಇದರಿಂದ 12 ಸಾವಿರಕ್ಕೂ ಅಧಿಕ ಮಂದಿಯ ಜೀವನ ಬದಲಾಗಿದೆ. ಮತ್ತೊಂದೆಡೆ ಆರ್ಥಿಕತೆಯಲ್ಲಿ ಹಿಂದುಳಿದಿರುವರಿಗೆ ಕೌಶಲ್ಯ ತರಬೇತಿ ಮೂಲಕ ಉಚಿತ ಕಂಪ್ಯೂಟರ್ ತರಬೇತಿ ಪಡೆದು 1434 ವಿದ್ಯಾರ್ಥಿಗಳು ತಮ್ಮ ಕಾಲಿನ ಮೇಲೆ ತಾವು ನಿಂತಿದ್ದಾರೆ.ಯಾರೇ ಶಿಕ್ಷಣಕ್ಕಾಗಿ ಸಹಾಯ ಕೇಳಿಕೊಂಡು ಬಂದರೆ ಸಹಾಯ ಮಾಡಿ. ಇಷ್ಟು ಮಹಿಳೆಯರು, ವಿದ್ಯಾರ್ಥಿಗಳ ಜೀವನ ರೂಪಿಸಿರುವುದಕ್ಕೆ ನನ್ನಲ್ಲಿ ಆತ್ಮ ತೃಪ್ತಿ ಮನೋಭಾವವಿದೆ.
>
> –ಆರ್.ಗುರು, ಜೀಯಸ್ ಸಿಎಸ್‌ಆರ್ ಪ್ರಶಸ್ತಿ ಪುರಸ್ಕೃತರು

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ವಿರಾಜಪೇಟೆಯಲ್ಲಿ ನಮ್ಮ ಕ್ಲಿನಿಕ್ ಆರಂಭ

ಬೆಳಗ್ಗೆ 9.30 ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯ ನಿರ್ವಹಣೆ



ವಿರಾಜಪೇಟೆ, ಡಿ.14– ಬಡ ಜನರ ಅನುಕೂಲಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಉತ್ತಮ ಜನಪರ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದ್ದು, ಅದರಲ್ಲಿ ಸಾರ್ವಜನಿಕರ ಉತ್ತಮ ಆರೋಗ್ಯಕ್ಕಾಗಿ ಇಂದು ರಾಜ್ಯದಲ್ಲಿ ಏಕಕಾಲದಲ್ಲಿ 114 ನಮ್ಮ ಕ್ಲಿನಿಕ್ ಉದ್ಘಾಟನೆಗೊಂಡಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ನಗರದ ಮೊಗರ ಗಲ್ಲಿಯಲ್ಲಿ ನಮ್ಮ ಕ್ಲಿನಿಕ್ ಉದ್ಘಾಟಿಸಿದ ಬಳಿಕ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಡಜನರ ಉತ್ತಮ ಆರೋಗ್ಯಕ್ಕಾಗಿ ಈ ಕ್ಲಿನಿಕ್‌ನಲ್ಲಿ 15 ರೀತಿಯ ವಿವಿಧ ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಗುತ್ತದೆ. ಯಾವುದೇ ಕಾಯಿಲೆಗಳನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ ರೋಗ ಗುಣಪಡಿಸಲು ಸಹಕಾರಿಯಾಗಲಿದೆ ಎಂದರು.

ಸಾರ್ವಜನಿಕರು ಮತ್ತು ಅಗತ್ಯವಿರುವವರು ಈ ಕ್ಲಿನಿಕ್ ಪ್ರಯೋಜನ ಪಡೆದುಕೊಳ್ಳಲು ಮುಂದಾಗಬೇಕು. ಈ ಮೂಲಕ ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯ ಒತ್ತಡವನ್ನು ತಪ್ಪಿಸಬಹುದು ಎಂದ ಶಾಸಕ ಬೋಪಯ್ಯ ಕೇಂದ್ರ ಮತ್ತು ರಾಜ್ಯ ಸರಕಾರ ಬಡ ಜನರ ಆರೋಗ್ಯಕ್ಕಾಗಿ ಸ್ಪಂದಿಸಿ ವಿವಿಧ ಯೋಜನೆಗಳನ್ನು ರೂಪಿಸುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳುವಂತಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ್ ಮಾತನಾಡಿ, ರಾಜ್ಯದ ಮುಖ್ಯಮಂತ್ರಿ ಇಂದು ರಾಜ್ಯಾದ್ಯಂತ 114 ನಮ್ಮ ಕ್ಲಿನಿಕ್‌ಗೆ ಚಾಲನೆ ನೀಡಿದ್ದಾರೆ. ಇದರಿಂದ ಬಡ ಜನರಿಗೆ ಅನುಕೂಲವಾಗಲಿದೆ. ಇಂದು ಸಾಮಾನ್ಯ ಜನರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ದುಬಾರಿ ಹಣ ನೀಡಬೇಕಾಗುತ್ತದೆ. ಇದನ್ನು ತಪ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ರೀತಿಯ ನಮ್ಮ ಕ್ಲಿನಿಕ್ ಪ್ರಾರಂಭಿಸಿರುವುದು ಜನರಿಗೆ ತುಂಬ ಅನುಕೂಲವಾಗಿದೆ. ಆದ್ದರಿಂದ ಬಡ ಮತ್ತು ಸಾರ್ವಜನಿಕರು ನಮ್ಮ ಕ್ಲಿನಿಕ್ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಪ್ರಾಸ್ತವಿಕವಾಗಿ ಮಾತನಾಡಿ, ಬೆಳಗ್ಗೆ 9.30 ರಿಂದ ಸಂಜೆ 4 ಗಂಟೆವರೆಗೂ ಸಾರ್ವಜನಿಕರಿಗಾಗಿ ಕ್ಲಿನಿಕ್ ತೆರೆದಿರುತ್ತದೆ. ಇದರ ಪ್ರಯೋಜನ ಪಡೆದುಕೊಳ್ಳಿ ಎಂದರು. ಸಭೆಯನ್ನುದ್ದೇಶಿಸಿ ಪುರಸಭೆ ಸದಸ್ಯೆ ಎಂ.ಕೆ.ದೇಚಮ್ಮ ಕಾಳಪ್ಪ ಮತ್ತು ಎಸ್.ಹೆಚ್. ಮತ್ತೀನ್ ಮಾತನಾಡಿದರು. ವೇದಿಕೆಯಲ್ಲಿ ತಹಶೀಲ್ದಾರ್ ಅರ್ಚನ ಭಟ್, ಪುರಸಭೆ ಅಧ್ಯಕ್ಷೆ ಸುಸ್ಮಿತಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಡಾ. ಫಾತಿಮ ಕಾರ್ಯಪ್ಪ, ಜಿಲ್ಲಾ ನಗರ ಕೋಶಾಭಿವೃದ್ಧಿ ಯೋಜನಾಧಿಕಾರಿ ಬಸಪ್ಪ, ತಾಲೂಕು ವೈದ್ಯಾಧಿಕಾರಿ ಡಾ. ಯತಿರಾಜ್, ಪಪಂ ಮಾಜಿ ಸದಸ್ಯ ಅಸ್ಗರ್ ಹುಸೇನ್ ಮುಂತಾದವರು ಉಪಸ್ಥಿತರಿದ್ದರು. ಈ ಸಂದರ್ಭ ನಗರದ ಬೀದಿ ಬದಿಯ ಸಣ್ಣ ವ್ಯಾಪಾರಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಮಾಣಪತ್ರವನ್ನು ಶಾಸಕರು ವಿತರಿಸಿದರು.

ಇದಕ್ಕೂ ಮೊದಲು ಪುರಸಭೆ ವತಿಯಿಂದ ಶಿವಕೇರಿಯಲ್ಲಿನ ನೀರು ವಿತರಣಾ ಘಟಕದ ಸಿಬ್ಬಂದಿಗಳಿಗೆ 2019–20ನೇ ಸಾಲಿನ ಎಸ್‌ಎಫ್‌ಸಿ ಅನುದಾನದಲ್ಲಿ 1.10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೂತನ ವಸತಿ ಗೃಹವನ್ನು ಶಾಸಕ ಬೋಪಯ್ಯ ಉದ್ಘಾಟಿಸಿದರು. ಹಾಗೂ ಮಿನಿವಿಧಾನಸೌಧ ಬಳಿ ಪುರಸಭೆ ವತಿಯಿಂದ ಅಮೃತ ನಿರ್ಮಲ ನಗರ ಅನುದಾನದಡಿಯಲ್ಲಿ ನೂತನವಾಗಿ ನಿರ್ಮಿಸಲಾದ 11 ಲಕ್ಷ ರೂ. ವೆಚ್ಚದ ಸಾರ್ವಜನಿಕ ಶೌಚಾಲಯ ಮತ್ತು 23 ಲಕ್ಷ ವೆಚ್ಚದ ಮುಖ್ಯಾಧಿಕಾರಿಗಳ ನೂತನ ವಸತಿ ಗೃಹವನ್ನು ಶಾಸಕರು ಉದ್ಘಾಟಿಸಿದರು.

ಈ ವೇಳೆ ಪುರಸಭಾಧ್ಯಕ್ಷೆ ಸುಸ್ಮಿತಾ, ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ್, ಜಿಲ್ಲಾ ನಗರಾಭಿವೃದ್ಧಿ ಯೋಜನಾಧಿಕಾರಿ ಬಸಪ್ಪ, ತಾಲೂಕು ತಹಶೀಲ್ದಾರ್ ಅರ್ಚನ ಭಟ್, ಮುಖ್ಯಾಧಿಕಾರಿ ಚಂದ್ರಕುಮಾರ್, ಪುರಸಭ ಅಭಿಯಂತರ ಹೇಮಾಕುಮಾರ್ ಮತ್ತು ಪುರಸಭೆ ಸದಸ್ಯರುಗಳು ಉಪಸ್ಥಿತರಿದ್ದರು.

ಸೋ.ಪೇಟೆಯಲ್ಲಿ ಭಾರೀ ಮಳೆಯಿಂದ ಬೆಳೆ ಹಾನಿ



ಕೊಚ್ಚಿ ಹೋದ ಫಸಲು, ಆತಂಕದಲ್ಲಿ ರೈತರು



ಮಡಿಕೇರಿ, ಡಿ.14– ಸೋಮವಾರಪೇಟೆ ತಾಲೂಕು ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ವೇಳೆ ಭಾರೀ ಮಳೆ ಸುರಿದಿದ್ದು ಕೃಷಿ, ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ಈ ಅಕಾಲಿಕ ಮಳೆಯಿಂದ ಕೃಷಿಕರು ಮತ್ತು ಬೆಳೆಗಾರರಲ್ಲಿ ಆತಂಕ ಮೂಡಿದ್ದು, ಬೆಳೆದ ಫಸಲು ಮನೆ ಸೇರದಂತಹ ಪರಿಸ್ಥಿತಿ ತಲೆದೋರಿದೆ.

ಸೋಮವಾರಪೇಟೆ ತಾಲೂಕಿನ ಗೌಡಳ್ಳಿ ವ್ಯಾಪ್ತಿಯಲ್ಲಿ ಒಂದೇ ರಾತ್ರಿ ಗುಡುಗು ಮಿಂಚು ಸಹಿತ ಸುಮಾರು 5 ಇಂಚು ಮಳೆ ಸುರಿದಿದ್ದು, ಭತ್ತದ ಬೆಳೆಗೆ ಭಾರಿ ಹಾನಿಯಾಗಿದೆ. ಚಿಕ್ಕರ ಗ್ರಾಮದಲ್ಲಿ ಈಗಾಗಲೇ ಭತ್ತದ ಫಸಲನ್ನು ಕಟಾವು ಮಾಡಿ ಒಣಗಲು ಗದ್ದೆಯಲ್ಲಿ ಬಿಡಲಾಗಿದ್ದು, ಭಾರೀ ಮಳೆಗೆ ಭತ್ತದ ಒಣ ಪೈರುಗಳು ನೀರಿನಲ್ಲಿ ತೋಯ್ದು ಹೋಗಿದೆ.

ಕೊಚ್ಚಿ ಹೋದ ಬೆಳೆ: ಚಿಕ್ಕರ ಗ್ರಾಮದ ನಿವಾಸಿಗಳಾದ ದಿನೇಶ್ ಸುಮ ಅವರ 4 ಎಕರೆ, ಚಂದನ್ ಅವರ 1 ಎಕರೆ, ಈರಮ್ಮ, ಬೋಜಪ್ಪ ಹಾಗೂ ಶರತ್ ಎಂಬವರಿಗೆ ಸೇರಿದ ಭತ್ತದ ಗದ್ದೆಗಳಲ್ಲಿ ಭತ್ತದ ಪೈರು ಮಳೆ ನೀರಿನಿಂದ ಕೊಚ್ಚಿ ಹೋಗಿದೆ. ಭತ್ತದ ಪೈರುಗಳು ಕೆಸರು ಮಯವಾಗಿದ್ದು, ಬಳಕೆಗೆ ಅಸಾಧ್ಯವಾಗಿ ಪರಿಣಮಿಸಿದೆ. ಕಳೆದ ಹಲವು ವರ್ಷಗಳಿಂದ ಇದೇ ಪರಿಸ್ಥಿತಿ ಇದ್ದು, ತುಂಬಲಾರದ ನಷ್ಟವಾಗಿದೆ ಎಂದು ಕೃಷಿಕರು ಅಳಲು ತೋಡಿಕೊಂಡಿದ್ದಾರೆ.

ಮಾತ್ರವಲ್ಲದೇ ಗದ್ದೆಗಳಲ್ಲಿ ಭತ್ತ ಉದುರಿದ್ದು, ಶೀತ ವಾತಾವರಣದಿಂದ ಗದ್ದೆಗಳಲ್ಲಿಯೇ ಭತ್ತ ಮೊಳಕೆ ಒಡೆಯುವ ಪರಿಸ್ಥಿತಿ ತಲೆದೋರಿದೆ. ಕೆಲವು ಗದ್ದೆಗಳಲ್ಲಿ ಭತ್ತದ ಬೆಳೆ ಕಟಾವು ಮಾಡಲು ಬಾಕಿ ಉಳಿದಿದ್ದು, ಮಳೆಯಿಂದ ಮತ್ತಷ್ಟು ಹಾನಿಯಾಗುವ ಆತಂಕವನ್ನು ಕೃಷಿಕರು ವ್ಯಕ್ತಪಡಿಸಿದ್ದಾರೆ.

ಕೋಡಿ ಒಡೆದ ಕೆರೆ: ಆಲೂರುಸಿದ್ದಾಪುರ ಗ್ರಾಪಂ. ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ದೊಡ್ಡಳ್ಳಿ ಗ್ರಾಮದ ದೊಡ್ಡಳ್ಳಿ ಕೆರೆಯಲ್ಲಿ ನೀರು ಭರ್ತಿಯಾಗಿ ಕೆರೆಯ ಕೋಡಿ ಹರಿಯುವ ನಾಲೆ ಒಡೆದು ಹೋಗಿದೆ. ಪರಿಣಾಮ ನಾಲೆಯ ನೀರು ಗ್ರಾಮದ ರಸ್ತೆ ಮೇಲೆ ಹರಿದಿದ್ದು, ನೀರಿನ ರಭಸಕ್ಕೆ ಜಿ.ಪಂ.ಗೆ ಸೇರಿದ ಡಾಂಬರು ರಸ್ತೆ ಕೊಚ್ಚಿಹೋಗಿದೆ. ಕೆರೆಯ ಕೋಡಿಯಿಂದ ಹೆಚ್ಚುವರಿ ನೀರು ಹರಿಯಲು ನಾಲೆಯನ್ನು ನಿರ್ಮಿಸಲಾಗಿದ್ದು ಕಳೆದ 40 ವರ್ಷಗಳಿಂದ ಹೂಳು ತುಂಬಿದ ನಾಲೆಯನ್ನು ದುರಸ್ತಿಪಡಿಸಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ.

ವಿದ್ಯುತ್ ಕಂಬಗಳಿಗೆ ಹಾನಿ: ಭಾರಿ ಮಳೆಯಿಂದಾಗಿ ತಾಲೂಕಿನ ಆಲೂರು ಸಿದ್ದಾಪುರ ಸೆಸ್ಕ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳು ಮುರಿದು ಬಿದ್ದಿದೆ. ಹೊಸಗುತ್ತಿ, ಹೊನ್ನೆಕೊಪ್ಪಲು, ಬಡುವನಹಳ್ಳಿ, ಹೊಸಳ್ಳಿಯಲ್ಲಿ 8 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಮಾತ್ರವಲ್ಲದೇ ಟ್ರಾನ್ಸ್‌ಫಾರ್ಮರ್ ಮುರಿದು ಬಿದ್ದು ಹಾನಿಗೀಡಾಗಿದೆ.

ಡಿ.17ರಂದು ಕಸಾಪ ಪೂರ್ವಭಾವಿ ಸಭೆ

ಕುಶಾಲನಗರ, ಡಿ.14– ಕುಶಾಲನಗರ ತಾಲೂಕು ಸಾಹಿತ್ಯ ಪರಿಷತ್ತು ವತಿಯಿಂದ ಜನವರಿ ತಿಂಗಳಲ್ಲಿ ಆಯೋಜಿಸ ಬೇಕಿರುವ ಕುಶಾಲನಗರ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟಿಸುವ ಸಂಬಂಧ ಪೂರ್ವಭಾವಿ ಸಭೆ ಕುಶಾಲ ನಗರದ ಕನ್ನಿಕಾ ಹೋಟೆಲ್ ಸಭಾಂಗಣದಲ್ಲಿ ಡಿ.17ರಂದು ಮಧ್ಯಾಹ್ನ 3 ಗಂಟೆಗೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಗೌರವ ಅಧ್ಯಕ್ಷರೂ ಆದ ಮಡಿಕೇರಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರ ಅಧ್ಯಕ್ಷತೆ ಯಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್, ಪರಿಷತ್ತಿನ ಸಲಹೆಗಾರ ಟಿ.ಪಿ.ರಮೇಶ್ ಹಾಗೂ ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಅವರುಗಳ ಗೌರವ ಉಪಸ್ಥಿತಿಯಲ್ಲಿ ಸಭೆ ಏರ್ಪಡಿಸಲಾಗಿದೆ.

ರಸ್ತೆಗಳ ಅವ್ಯವಸ್ಥೆ: ಡಿ.22ರಂದು ಜೆಡಿಎಸ್‌ನಿಂದ ರಸ್ತೆ ತಡೆ



ಮಡಿಕೇರಿ, ಡಿ.14– ಕೊಡಗು ಜಿಲ್ಲೆಯ ರಸ್ತೆಗಳ ಅವ್ಯವಸ್ಥೆಗೆ ಇಬ್ಬರು ಶಾಸಕರುಗಳೇ ನೇರ ಹೊಣೆ ಎಂದು ಆರೋಪಿಸಿರುವ ಜಾತ್ಯತೀತ ಜನತಾದಳದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್, ಡಿ.22ರಂದು ಮೂರ್ನಾಡಿನಲ್ಲಿ ರಸ್ತೆ ತಡೆ ನಡೆಸುವ ಮೂಲಕ ರಸ್ತೆಗಳ ದುರಸ್ತಿಗಾಗಿ ಒತ್ತಾಯಿಸಲಾಗುವುದು ಎಂದು ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜಿಲ್ಲೆಯ ಎಲ್ಲಾ ರಸ್ತೆಗಳು ಹದಗೆಟ್ಟು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದರೂ ದುರಸ್ತಿ ಕಾರ್ಯಕ್ಕೆ ಕ್ರಮ ಕೈಗೊಳ್ಳುತ್ತಿಲ್ಲ. ಚುನಾವಣೆ ಸಮೀಪಿಸುವಾಗ ಕಾಮಗಾರಿ ಆರಂಭಿಸುವ ತಂತ್ರಗಾರಿಕೆ ಯಾಕೆ ಎಂದು ಪ್ರಶ್ನಿಸಿದರು.

ರಸ್ತೆಗಳ ಹೀನಾಯ ಪರಿಸ್ಥಿತಿಗೆ 25 ವರ್ಷಗಳಿಂದ ಶಾಸಕರುಗಳಾಗಿರುವವರೇ ನೇರ ಕಾರಣಕರ್ತರಾಗಿದ್ದಾರೆ. ಕಳೆದ ಒಂದು ವಾರದಿಂದ ಮಳೆಯ ವಾತಾವರಣ ಮೂಡಿದೆ ಅಷ್ಟೇ, ಈ ಹಿಂದೆ ಇವರು ಏನು ಮಾಡುತ್ತಿದ್ದರು ಎಂದು ಅಸಮಾಧಾನ ವ್ಯಕ್ತಪಡಿಸಿದ ಗಣೇಶ್, ಮಡಿಕೇರಿ ನಗರ ಮತ್ತು ಗ್ರಾಮೀಣ ಪ್ರದೇಶದ ರಸ್ತೆಗಳಲ್ಲಿ ಸಂಚಾರ ಅಸಾಧ್ಯವಾಗಿದೆ. ಹಿಂದುತ್ವದ ಹೆಸರಿನಲ್ಲಿ ಗೆದ್ದು ಬರುತ್ತಿರುವ ಇಬ್ಬರು ಶಾಸಕರು ತಮ್ಮ ದೀರ್ಘಾವಧಿಯ ಸಾಧನೆಯನ್ನು ಜನರೆದುರು ಬಹಿರಂಗಪಡಿಸಲಿ ಎಂದು ಒತ್ತಾಯಿಸಿದರು.

ಪ್ರತಿಭಟನೆ: ಮೂರ್ನಾಡು, ಹೊದ್ದೂರು, ಕೊಂಡಂಗೇರಿ ಸುತ್ತಮುತ್ತಲ ಭಾಗದ ಎಲ್ಲಾ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನಗಳ ಸಂಚಾರ ಕಷ್ಟ ಸಾಧ್ಯವಾಗಿದೆ. ಈ ರಸ್ತೆಗಳನ್ನು ದುರಸ್ತಿಪಡಿಸುವಂತೆ ಒತ್ತಾಯಿಸಿ ಡಿ.22 ರಂದು ಮೂರ್ನಾಡಿನಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಜೆಡಿಎಸ್ ಪಕ್ಷ ರಸ್ತೆ ತಡೆ ಪ್ರತಿಭಟನೆ ನಡೆಸಲಿದೆ ಎಂದರು.

ಪ್ರತಿಭಟನೆಯ ಸಂದರ್ಭ ಜಿಲ್ಲೆಯ ಎಲ್ಲಾ ರಸ್ತೆಗಳ ದುರಸ್ತಿಗಾಗಿ ಒತ್ತಾಯಿಸಲಾಗುವುದು. ಇದಕ್ಕೆ ಸೂಕ್ತ ಸ್ಪಂದನೆ ದೊರೆಯದಿದ್ದಲ್ಲಿ ಜಿಲ್ಲಾ ವ್ಯಾಪಿ ಎಲ್ಲಾ ಪಂಚಾಯ್ತಿ ಮಟ್ಟದಲ್ಲಿ ಹೋರಾಟ ನಡೆಸಲಾಗುವುದು ಎಂದು ಗಣೇಶ್ ಎಚ್ಚರಿಕೆ ನೀಡಿದರು. ಪಕ್ಷ ಪ್ರತಿಭಟನೆ ನಡೆಸಿದ ಪರಿಣಾಮವಾಗಿ ಕೆ.ನಿಡುಗಣೆಯಲ್ಲಿ ಮಳೆಹಾನಿ ಸಂತ್ರಸ್ತರಿಗೆ 70 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಇದೇ ಮಾದರಿಯಲ್ಲಿ ರಸ್ತೆ ದುರಸ್ತಿಗಾಗಿ ನಿರಂತರ ಪ್ರತಿಭಟನೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕೊಡಗು ಜಿಲ್ಲೆಯ ಸಂತ್ರಸ್ತರಿಗೆ ಸುಮಾರು 900 ಮನೆಗಳನ್ನು ನಿರ್ಮಿಸಿಕೊಟ್ಟರು. ಆದರೆ ಈ ಮನೆಗಳ ಹಂಚಿಕೆ ಸಂದರ್ಭ ಶೇ.30 ರಷ್ಟನ್ನು ಮನೆ ಇರುವವರಿಗೇ ನೀಡಲಾಗಿದೆ ಎಂದು ಆರೋಪಿಸಿದ ಅವರು, ಕೆಲವು ನೈಜ ಫಲಾನುಭವಿಗಳು ಇಂದಿಗೂ ಅತಂತ್ರ ಪರಿಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಮಡಿಕೇರಿ ಮತ್ತು ವಿರಾಜಪೇಟೆ ತಾಲೂಕಿನ ಮಳೆಹಾನಿ ಸಂತ್ರಸ್ತರನ್ನು ಗುರುತಿಸಿ ತುರ್ತಾಗಿ ಮನೆಗಳನ್ನು ನೀಡಬೇಕೆಂದು ಗಣೇಶ್ ಒತ್ತಾಯಿಸಿದರು.

ಜೆಡಿಎಸ್ ಪಕ್ಷಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧ ಎಂದು ಸ್ಪಷ್ಟಪಡಿಸಿದ ಅವರು, ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕೆನ್ನುವುದು ನಮ್ಮ ಗುರಿ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮಡಿಕೇರಿ ತಾಲೂಕು ಅಧ್ಯಕ್ಷ ಬಲ್ಲಚಂಡ ಗೌತಮ್, ಹಿರಿಯ ಉಪಾಧ್ಯಕ್ಷ ಯೂಸುಫ್ ಕೊಂಡಂಗೇರಿ, ಯುವ ಘಟಕದ ಪ್ರಧಾನ ಕಾರ್ಯದರ್ಶಿ ಜಾಶೀರ್ ಹಾಗೂ ಪ್ರಮುಖರಾದ ಮನ್ಸೂರ್ ಉಪಸ್ಥಿತರಿದ್ದರು.

ಶಾಸ್ತ ಈಶ್ವರ ದೇವರಿಗೆ ಬೆಳ್ಳಿ, ಕಂಚಿನ ಕವಚಧಾರಣೆ

ಮಡಿಕೇರಿ, ಡಿ.14– ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಹೊದ್ದೂರು ಗ್ರಾಮದ ಶ್ರೀ ಶಾಸ್ತ ಈಶ್ವರ ದೇವರಿಗೆ ಬೆಳ್ಳಿಯ ಮತ್ತು ಕಂಚಿನ ಕವಚಧಾರಣೆ ಹಾಗೂ ಶ್ರೀ ಮಹಾಗಣಪತಿ ದೇವರಿಗೆ ಕಂಚಿನ ಕವಚಧಾರಣೆ ಮಹೋತ್ಸವ ಡಿ.18ರಂದು ನಡೆಯಲಿದೆ.



ಅಂದು ಪ್ರಾತಃಕಾಲ 6ರಿಂದ 9 ಗಂಟೆಯವರೆಗೆ ಶ್ರೀ ಗಣಪತಿ ಪೂಜೆ, ಶುದ್ಧಿ ಪುಣ್ಯಾಹ, ಕಲಶ ಸ್ಥಾಪನೆ, ಶಾಂತಿ ಹೋಮ, ಶ್ರೀಮಹಾ ಪೂರ್ಣಾವತಿಯೊಂದಿಗೆ ಶ್ರೀ ಶಾಸ್ತ ಈಶ್ವರ ದೇವರಿಗೆ ನೂತನ ರಜತಾ ಹಾಗೂ ಕಂಚಿನ ಕವಚಧಾರಣೆ, ಶ್ರೀ ಮಹಾಗಣಪತಿ ದೇವರಿಗೆ ನೂತನ ಕಂಚಿನ ಕವಚ ಧಾರಣೆಯಾಗಲಿದೆ. ನಂತರ ಮಹಾ ಮಂಗಳಾರತಿ ಜರುಗಲಿದೆ. ಶ್ರೀ ಬೇಟೆ ಅಯ್ಯಪ್ಪ ದೇವರಿಗೆ ಹಾಗೂ ಶ್ರೀ ವಿಷ್ಣು ಮೂರ್ತಿ(ಚಾಮುಂಡಿ) ದೇವರಿಗೆ ಕಲಶ ಅಭಿಷೇಕ ಪೂಜೆಯೂ ನಡೆಯಲಿದೆ.

ಬೆಳಗೆ 10 ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ ಸಾಮೂಹಿಕ ಸತ್ಯನಾರಾಯಣ ಪೂಜೆ, ಮಹಾಮಂಗಳಾರತಿ ನಂತರ ಭಕ್ತರಿಗೆ ತೀರ್ಥಪ್ರಸಾದ ಮತ್ತು ಅನ್ನ ಸಂತರ್ಪಣೆಯಾಗಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ದೇವಸ್ಥಾನ ಸಮಿತಿ ಅಧ್ಯಕ್ಷ ಕೂಡಂಡ ರಾಜೇಂದ್ರ ಅಯ್ಯಮ್ಮ ಹಾಗೂ ಪದಾಧಿಕಾರಿಗಳು ಮನವಿ ಮಾಡಿದ್ದು, ಹೆಚ್ಚಿನ ಮಾಹಿತಿಗೆ 9845571290, 9880295564 ಅನ್ನು ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಮೂವರು ಅಂತರಾಜ್ಯ ದಂತಚೋರರ ಸೆರೆ



ಗುಂಡ್ಲುಪೇಟೆ, ಡಿ.14– ಆನೆ ದಂತ ಮಾರಾಟಕ್ಕೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಸಿಬ್ಬಂದಿಗಳು ಕಾರ್ಯಾಚರಣೆ ಮುಂದುವರೆಸಿದ್ದು, ಮತ್ತೆ ಮೂವರು ಅಂತರಾಜ್ಯ ದಂತಚೋರರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತ್ತೀಚಿಗೆ ಗುಂಡ್ಲುಪೇಟೆ ಪಟ್ಟಣದ ಹೊರವಲಯದ ಊಟಿ ರಸ್ತೆಯ ಬಸವಾಪುರ ಗೇಟ್ ಬಳಿಯಿರುವ ಒಂಟಿ ಫಾರ್ಮ್ ಹತ್ತಿರ ಆನೆಯ ಎರಡು ದಂತಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಖಚಿತ ಮಾಹಿತಿಯ ಮೇರೆಗೆ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ ಮತ್ತು ಆರ್.ಎಫ್.ಓ ಎನ್.ಪಿ.ನವೀನ್‌ಕುಮಾರ್ ನೇತೃತ್ವದಲ್ಲಿ ಹುಲಿಸಂರಕ್ಷಣಾ ದಳದ ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಮಾಲು ಸಮೇತ ಐವರು ಆರೋಪಿಗಳನ್ನು ಮತ್ತು ಹುಂಡೈಯ್ ಕಾರನ್ನು ವಶಕ್ಕೆ ಪಡೆದು ಆನೆಯ ಎರಡು ದಂತಗಳನ್ನು ವಶಕ್ಕೆ ಪಡೆದುಕೊಂಡಿದ್ದರು.

ಮತ್ತೆ ಮೂವರ ಬಂಧನ: ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಊಟಿ ಸಮೀಪದ ಚೊಕ್ಕನಹಳ್ಳಿ ಗ್ರಾಮದ ವಾಸಿಗಳಾದ ಅಶೋಕ, ಅರ್ಜುನ ಮತ್ತು ಬಾಲನ್ ಎಂಬ ಮೂವರು ದಂತಚೋರರನ್ನು ಅರಣ್ಯ ಅಧಿಕಾರಿಗಳು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಉಪವಲಯಾರಣ್ಯಾಧಿಕಾರಿಗಳಾದ ಮುದ್ದುರಾಜ್, ಭರತ್, ಕಿರಣ್ ಕುಮಾರ್, ರಮೇಶ್ ಮಠಪತಿ, ಚಾಲಕ ಸೋಮು ಇತರರು ಭಾಗಿಯಾಗಿದ್ದರು.

ಚಾ.ನಗರ, ಗುಂಡ್ಲುಪೇಟೆಯಲ್ಲೂ ನಮ್ಮ ಕ್ಲಿನಿಕ್

ಹುಬ್ಬಳ್ಳಿಯಿಂದ ವರ್ಚುವಲ್ ಮೂಲಕ ಮುಖ್ಯಮಂತ್ರಿ ಬೊಮ್ಮಾಯಿ ಚಾಲನೆ



ಚಾಮರಾಜನಗರ, ಡಿ.14– ಚಾಮರಾಜನಗರ ಜಿಲ್ಲೆಯಲ್ಲೂ ಆರಂಭವಾಗುತ್ತಿರುವ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಕಾರ್ಯಕ್ರಮಗಳಲ್ಲಿ ಒಂದಾದ ನಮ್ಮ ಕ್ಲಿನಿಕ್‌ಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹುಬ್ಬಳ್ಳಿಯಿಂದ ವರ್ಚುವಲ್ ಮೂಲಕ ಇಂದು ಚಾಲನೆ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳ 114 ನಮ್ಮ ಕ್ಲಿನಿಕ್‌ಗಳಿಗೆ ಮುಖ್ಯಮಂತ್ರಿಯವರು ಹುಬ್ಬಳ್ಳಿಯಿಂದ ವರ್ಚುವಲ್ ಮೂಲಕ ಚಾಲನೆ ನೀಡಿದರು. ಚಾಮರಾಜನಗರದ ಕರಿನಂಜನಪುರದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಬಡಾವಣೆ ಸೇರಿದಂತೆ ಜಿಲ್ಲೆಯ ಒಟ್ಟು ಮೂರು ಕಡೆ ನಮ್ಮ ಕ್ಲಿನಿಕ್‌ಗಳು ಆರಂಭವಾಗುತ್ತಿದೆ. ಇದರ ಉದ್ಘಾಟನೆ ನಗರದ ಕರಿನಂಜನಪುರದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಬಡಾವಣೆಯ ನಮ್ಮ ಕ್ಲಿನಿಕ್‌ನಲ್ಲಿ ಏರ್ಪಾಡಾಗಿತ್ತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸ್ಥಳೀಯವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮುಖ್ಯಮಂತ್ರಿಗಳು, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರೊಂದಿಗೆ ಸಂವಾದ ನಡೆಸಿ ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ನಮ್ಮ ಕ್ಲಿನಿಕ್‌ಗಳು ಪ್ರಾರಂಭವಾಗುತ್ತಿದೆ. ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆಯೆ ಎಂದು ಪ್ರಶ್ನಿಸಿದರು. ಇದಕ್ಕೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಉತ್ತರಿಸಿ, ಚಾಮರಾಜನಗರದ ಕರಿನಂಜನಪುರ ಬಡಾವಣೆ ಹಾಗೂ ಗುಂಡ್ಲುಪೇಟೆಯಲ್ಲಿ ನಮ್ಮ ಕ್ಲಿನಿಕ್ ಪ್ರಾರಂಭಿಸಲಾಗಿದೆ. ಕೊಳ್ಳೇಗಾಲದಲ್ಲಿ ಕಟ್ಟಡ ಸಿದ್ಧವಿದ್ದು ಇನ್ನೆರಡು ದಿನಗಳಲ್ಲಿ ಕಾರ್ಯಾರಂಭವಾಗಲಿದೆ. ನಮ್ಮ ಕ್ಲಿನಿಕ್‌ಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ನಮ್ಮ ಕ್ಲಿನಿಕ್‌ನಲ್ಲಿ ವೈದ್ಯರು, ಲ್ಯಾಬ್ ಟೆಕ್ನಿಷಿಯನ್, ನರ್ಸಿಂಗ್ ಸಿಬ್ಬಂದಿ ಇದ್ದಾರೆ. ಔಷಧ ವಿತರಣೆಗೂ ವ್ಯವಸ್ಥೆ ಮಾಡಲಾಗಿದೆ. ನಮ್ಮ ಕ್ಲಿನಿಕ್ ಸಂಬಂಧ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾಡಿಕೊಂಡಿದ್ದೇವೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಬಳಿಕ ಮುಖ್ಯಮಂತ್ರಿಗಳು ಸ್ಥಳೀಯ ನಿವಾಸಿ ಸುಧಾ ಅವರೊಂದಿಗೆ ಮಾತನಾಡಿದರು. ನೀವು ಕ್ಲಿನಿಕ್ ಹತ್ತಿರ ಇದ್ದೀರಾ? ಯಾವ ಬಡಾವಣೆ ನಿಮ್ಮದು? ಈ ಮೊದಲು ಈ ರೀತಿಯ ಕ್ಲಿನಿಕ್ ನಿಮ್ಮ ಬಡಾವಣೆಯಲ್ಲಿ ಇತ್ತೆ? ಕ್ಲಿನಿಕ್ ಬಂದಿರುವುದರಿಂದ ಅನುಕೂಲ ಆಗಲಿದೆಯಾ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು. ಇದಕ್ಕೆ ಸುಧಾ ಅವರು ಆಸ್ಪತ್ರೆಗಾಗಿ ನಾವು ಪಟ್ಟಣಕ್ಕೆ ಹೋಗಬೇಕಿತ್ತು. ಈಗ ನಮ್ಮ ಬಡಾವಣೆಯಲ್ಲಿಯೇ ಕ್ಲಿನಿಕ್ ಮಾಡಿರುವುದರಿಂದ ತುಂಬಾ ಅನುಕೂಲವಾಗಿದೆ. ಇದಕ್ಕಾಗಿ ತಮಗೆ ಕೃತಜ್ಞತೆಗಳು ಎಂದರು.

ಸಣ್ಣ ಪುಟ್ಟ ಜ್ವರವಿರಲಿ, ಇನ್ನಿತರ ಯಾವುದೇ ಆರೋಗ್ಯ ಸಮಸ್ಯೆಗಳಿದ್ದರೆ ಕ್ಲಿನಿಕ್‌ನಲ್ಲಿ ಉಚಿತವಾಗಿ ಚಿಕಿತ್ಸೆ, ಔಷಧ ನೀಡಲಾಗುತ್ತದೆ. ಟೆಸ್ಟ್ ಲ್ಯಾಬ್ ಸೌಲಭ್ಯವು ಇರುತ್ತದೆ. ಈ ಎಲ್ಲಾ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಿ ಬೇರೆಯವರಿಗೂ ನಮ್ಮ ಕ್ಲಿನಿಕ್ ಬಗ್ಗೆ ತಿಳಿಸಿಕೊಡಿ ಎಂದು ಸಿಎಂ ಸಲಹೆ ಮಾಡಿದರು.

ಸ್ಥಳೀಯವಾಗಿ ನಡೆದ ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ಆಶಾ ನಟರಾಜು ಅವರು ನಮ್ಮ ಕ್ಲಿನಿಕ್ ಉದ್ಘಾಟಿಸಿದರು. ಸದಸ್ಯರಾದ ಮನೋಜ್ ಪಟೇಲ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ತಾಲೂಕು ವೈದ್ಯಾಧಿಕಾರಿ ಡಾ. ಶ್ರೀನಿವಾಸ್, ವೈದ್ಯಾಧಿಕಾರಿ ಡಾ. ಮಮತಾ ಸೇರಿದಂತೆ ಇತರರು ಇದ್ದರು.

ನಾಪತ್ತೆ



ಚಾಮರಾಜನಗರ, ಡಿ.14– ಲಲಿತಾಂಭ ಎಂಬುವವರು ಕಾಣೆಯಾಗಿರುವ ಬಗ್ಗೆ ಅಗರ–ಮಾಂಬಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದೂರು ದಾಖಲಾಗಿದೆ.

81 ವರ್ಷದ ಲಲಿತಾಂಭ ಅವರು 5.1 ಅಡಿ ಎತ್ತರ, ದೃಢಕಾಯ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ ಹೊಂದಿದ್ದಾರೆ.

ಸುಳಿವು ದೊರೆತಲ್ಲಿ ದೂ.ಸಂ. 08224–295176, ಪಿಎಸ್‌ಐ ಮೊ.ಸಂ 9480804654, ಚಾಮರಾಜನಗರ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ. 08226–222383 ಸಂಪರ್ಕಿಸುವಂತೆ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜವನಪ್ಪ ನಿಧನ

ಚಾಮರಾಜನಗರ, ಡಿ.14– ತಾಲೂಕಿನ ಹರವೆ ಹೋಬಳಿ ಅರಳೀಕಟ್ಟೆ ಗ್ರಾಮದ ನಿವಾಸಿ ಜವನಪ್ಪ(87) ಬುಧವಾರ ನಿಧನರಾದರು. ಮೃತರು ಹರವೆ ಮಹದೇಶ್ವರ ಆಫ್‌ಸೆಟ್ ಮುದ್ರಣದ ಮಾಲೀಕರಾದ ಪುತ್ರ ಬಸವಣ್ಣ, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು.



ಡಿ.24, ಅಂಗವಿಕಲರಿಗೆ ವಿವಿಧ ಸಾಧನ ಸಲಕರಣೆ ವಿತರಣೆ

ಸಂಸದರಿಂದ ಸ್ಥಳ ಪರಿಶೀಲನೆ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಭಾಗಿ

ಚಾಮರಾಜನಗರ, ಡಿ. 14– ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಹಾಗೂ ಅಲಿಂಕೋ ಸಂಸ್ಥೆ ವತಿಯಿಂದ ಡಿ. 24 ರಂದು ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಅಂಗವಿಕಲರಿಗೆ ನಾನಾ ಸಾಧನ ಸಲಕರಣೆ ವಿತರಣಾ ಕಾರ್ಯಕ್ರಮ ಆಯೋಜಿಸಿದ್ದು, ಈ ಸಂಬಂಧ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಅಧಿಕಾರಿಗಳು, ಅಲಿಂಕೋ ಸಂಸ್ಥೆಯ ತಂಡದೊಂದಿಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದರು, ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣ ಇಲಾಖೆ ವತಿಯಿಂದ ಅಂಗವಿಕಲರಿಗೆ ಸಾಧನ ಸಲಕರಣೆ ವಿತರಣೆ ಸಮಾರಂಭ ಡಿ 24 ರಂದು ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರಗಲ್ಲಿ ಅಂಗವಿಕಲರಿಗೆ ಕಳೆದ ಜುಲೈ 19, 20, 21, 22 ನಾಲ್ಕು ದಿನಗಳ ಕಾಲ ನಡೆದ ಶಿಬಿರದಲ್ಲಿ ತಪಾಸಣೆ ಮಾಡಿಸಿ ಆಯ್ಕೆಯಾದ 1639 ದೋಷವುಳ್ಳ ಅಂಗವಿಕಲರಿಗೆ ನಾನಾ ರೀತಿಯ ಸಲಕರಣೆಗಳನ್ನು ವಿತರಿಸಲಾಗುವುದು ಎಂದರು.



ಕಾರ್ಯಕ್ರಮದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಸಚಿವರಾದ ಎ.ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ ಈಗಾಗಲೇ ನಾಲ್ಕು ಟ್ರಕ್ ಉಪಕರಣ ಬಂದಿದೆ. ಇನ್ನೂ 8 ಟ್ರಕ್ ಲೋಡ್ ಉಪಕರಣಗಳು ಬರಲಿದೆ. ಈ ಕಾರ್ಯಕ್ರಮ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಕಾರ್ಯಕ್ರಮ ಹೇಗೆ ಮಾಡಬೇಕು ಎಂದು ಚರ್ಚಿಸಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಂಗವಿಲಕರನ್ನು ಗುರುತಿಸಿ ಅವರನ್ನು ಕರೆತರುವ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಇದು ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯ ಅಂಗವಿಕಲರಿಗೆ ಮಾತ್ರ ಈ ಕಾರ್ಯಕ್ರಮದಲ್ಲಿ ಸಾಧನ ಸಲಕರಣೆ ವಿತರಿಸಲಾಗುತ್ತಿದೆ. ಉಳಿದ ಮೈಸೂರು ಜಿಲ್ಲೆಯ ನಾಲ್ಕು ಕ್ಷೇತ್ರಗಳಾದ ನಂಜನಗೂಡು, ತಿ.ನರಸೀಪುರ, ವರುಣಾ, ಎಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಅಂಗವಿಕಲರಿಗೆ ನಂಜನಗೂಡಿನಲ್ಲಿ ಕಾರ್ಯಕ್ರಮ ಅಯೋಜನೆ ಮಾಡಿ ವಿತರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀಪ್ರತಾಪ್, ಚಾಮುಲ್ ನಿರ್ದೇಶಕ ಅಯ್ಯನಪುರ ಶಿವಕುಮಾರ್, ನಗರಸಭಾ ಮಾಜಿ ಸದಸ್ಯ ಬಸವರಾಜು, ಬಿಜೆಪಿ ಮುಖಂಡ ಅಮ್ಮನಪುರ ಮಲ್ಲೇಶ್, ಶಿವರಾಜ್ ಸಿದ್ದಯ್ಯನಪುರ, ರಾಮ ಸಮುದ್ರ ಬಂಗಾರು, ಪ್ರಸನ್ನ, ಶಿವಣ್ಣ, ಸಂಸದ ಆಪ್ತ ಸಹಾಯಕರಾದ ಆನಂದ್, ಅಲಿಂಕೋ ಸಂಸ್ಥೆಯ ಅಧಿಕಾರಿ ಅಶೋಕ್‌ಕುಮಾರ್ ಇತರರು ಹಾಜರಿದ್ದರು.

ಓವರ್‌ಲೋಡ್ ಎಂ ಸ್ಯಾಂಡ್, ಜಲ್ಲಿ ಲಾರಿಗಳ ವಶ; ದಂಡ

ಚಾಮರಾಜನಗರ, ಡಿ.14– ಚಾಮರಾಜನಗರ ತಾಲೂಕು ವ್ಯಾಪ್ತಿಯಲ್ಲಿ ಪರ್ಮಿಟ್‌ಗಿಂತ ಹೆಚ್ಚು ಜಲ್ಲಿ ಮತ್ತು ಎಂ ಸ್ಯಾಂಡ್ ತುಂಬಿಕೊಂಡು ಸಾಗಿಸುತ್ತಿದ್ದ ಲಾರಿಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.



ಇತ್ತೀಚೆಗೆ ಅಧಿಕ ಭಾರ ಹೊಂದಿದ ಲಾರಿಗಳಿಂದ ರಸ್ತೆಗಳು ಹಾಳಾಗಿ ಹೋಗಿದ್ದು, ಧೂಳಿನಿಂದ ರೋಗ ರುಜಿನಗಳು ಹರಡುತ್ತಿವೆ ಎಂದು ಸಚಿವರ ಸಭೆಯಲ್ಲಿ ರೈತ ಸಂಘದ ಮುಖಂಡರು ಆರೋಪ ಮಾಡಿದ್ದರು, ಈ ಹಿನ್ನೆಲೆಯಲ್ಲಿ ಗಣಿ ಇಲಾಖೆ ಅಧಿಕಾರಿಗಳು ಉಪ ಖನಿಜ ಸಾಗಾಣಿಕೆ ವಾಹನಗಳನ್ನು ತಡೆದು ಪರೀಶೀಲಿಸಿದಾಗ ಓವರ್ ಲೋಡ್ ಕಂಡು ಬಂದು ಲಾರಿ ಮಾಲೀಕರಿಗೆ ದಂಡ ವಿಧಿಸಿ ವಾಹನಗಳನ್ನು ಗ್ರಾಮಾಂತರ ಪೊಲೀಸರಿಗೆ ಒಪ್ಪಿಸಿದ್ದಾರೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕ ನಂಜುಂಡಸ್ವಾಮಿ ಮಾರ್ಗದರ್ಶನದಲ್ಲಿ ಭೂ ವಿಜ್ಞಾನಿಗಳಾದ ಡಾ. ಮಹದೇವಸ್ವಾಮಿ, ಪ್ರಸನ್ನಕುಮಾರ್, ಕಿರಿಯ ಇಂಜನಿಯರ್‌ಗಳಾದ ಚೈತ್ರ, ವಾಹನ ಚಾಲಕ ಮಧು ಇದ್ದರು.

ಜಿಲ್ಲಾ ವಕೀಲರ ಸಂಘದಿಂದ ಸಿಎಂಗೆ ಮನವಿ

ಚಾಮರಾಜನಗರ, ಡಿ.14– ಜಿಲ್ಲಾ ಕೇಂದ್ರಕ್ಕೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರನ್ನು ಜಿಲ್ಲಾ ವಕೀಲರ ಸಂಘ ವತಿಯಿಂದ ಸನ್ಮಾನಿಸಿ ಮನವಿ ಸಲ್ಲಿಸಲಾಯಿತು.



ಇತ್ತೀಚಿನ ದಿನಗಳಲ್ಲಿ ದೇಶ, ರಾಜ್ಯಾದ್ಯಂತ ವಕೀಲರ ಮೇಲೆ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಬೆಳಗಾವಿ ಅಧಿವೇಶನದಲ್ಲಿ ಜಾರಿಗೆ ತರುವಂತೆ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದ್ದಾರೆ. ಜಿಲ್ಲಾ ಕೇಂದ್ರದಲ್ಲಿ ವಕೀಲರ ಭವನ ಹಾಗೂ ನ್ಯಾಯಾಲಯದ ಸಂಕೀರ್ಣದಲ್ಲಿ ಮತ್ತು ವಕೀಲರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಉಪಾಧ್ಯಕ್ಷ ಎಸ್.ಮಂಜು ಹರವೆ, ಪ್ರಧಾನ ಕಾರ್ಯದರ್ಶಿ ಎನ್. ಕೆ.ವಿರೂಪಾಕ್ಷ ಸ್ವಾಮಿ,ಖಜಾಂಚಿ ಆರ್.ಗಿರೀಶ್, ಜಂಟಿ ಕಾರ್ಯದರ್ಶಿ ಮಲ್ಲು ಹಾಜರಿದ್ದರು.

ಬಸ್ ಸೌಕರ್ಯಕ್ಕಾಗಿ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಕೊಳ್ಳೇಗಾಲ, ಡಿ.14– ಲೊಕ್ಕನಹಳ್ಳಿ ಹಾಗೂ ಒಡೆಯರ ಪಾಳ್ಯ ಮಾರ್ಗದಲ್ಲಿ ಸಮರ್ಪಕವಾಗಿ ಬಸ್ ಸಂಚರಿಸುತ್ತಿಲ್ಲ, ಇದರಿಂದ ತೊಂದರೆಯಾಗುತ್ತಿದೆ ಎಂದು ನೂರಾರು ವಿದ್ಯಾರ್ಥಿಗಳು ಇಂದಿಲ್ಲಿ ಪ್ರತಿಭಟನೆ ನಡೆಸಿದರು.



ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋನಲ್ಲಿ ಸಮಾವೇಶಗೊಂಡ ನೂರಾರು ವಿದ್ಯಾರ್ಥಿಗಳು ಮುತ್ತಿಗೆ ಹಾಕಿ ಪ್ರತಿಭಟಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ವ್ಯವಸ್ಥಾಪಕ ಮುತ್ತುರಾಜ್ ಈ ವೇಳೆ ಮಾತನಾಡಿ, ಸೋಮವಾರದಿಂದ ಬಸ್ ಸೌಲಭ್ಯ ಸಮರ್ಪಕ ರೀತಿಯಲ್ಲಿ ಕಲ್ಪಿಸುವ ಭರವಸೆ ಬಳಿಕ ಪ್ರತಿಭಟನೆ ಕೈಬಿಟ್ಟರು. ಒಡೆಯರ್ ಪಾಳ್ಯ ರೋಜಾ, ಸುಜಾತ, ಶಾಯಿನ ತಾಜ್, ಪಿಜಿಪಾಳ್ಯ ಸೌಂದರ್ಯ, ಕೀರ್ತಿಕಾ, ಲೊಕ್ಕನಹಳ್ಳಿ ಅನುಪ್ರಿಯಾ, ಇಂದುಜಾ, ಮದನ್, ದರ್ಶನ್, ಅಭಿ, ಸುರೇಶ್, ಪ್ರಜ್ವಲ್, ಸನತ್, ಮಹದೇವ ಪ್ರಸಾದ್, ಚಂದನ್, ಪ್ರೀತಮ್, ಸತೀಶ್, ನವೀನ್, ವಿನೋದ್, ಆಕಾಶ್ ರಾವ್, ಬಿಜೆಪಿ ಹನೂರು ಘಟಕ ಪ್ರಧಾನ ಕಾರ್ಯದರ್ಶಿ ನಾಗರಾಜು ಇದ್ದರು.

ಒಂದನೇ ಪುಟದಿಂದ

ಉತ್ತರ ಬರೆಯಲು ಅವಕಾಶ

ಸಭೆಯ ಬಗ್ಗೆ ಮಾತನಾಡಿದ ಅವರು, ಉನ್ನತ ಶಿಕ್ಷಣದ ಹಂತದಲ್ಲಿ ಕನ್ನಡದ ಬಳಕೆಯನ್ನು ಗರಿಷ್ಠ ಪ್ರಮಾಣದಲ್ಲಿ ಉತ್ತೇಜಿಸಲು ಕೂಡ ಒಮ್ಮತದ ನಿರ್ಧಾರ ಕೈಗೊಳ್ಳಲಾಗಿದೆ. ಜತೆಗೆ, ಹೊಸದಾಗಿ ಬುಡಕಟ್ಟು ವಿಶ್ವವಿದ್ಯಾಲಯದ ಸ್ಥಾಪನೆಯ ಬದಲಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ಕರ್ನಾಟಕ ರಾಜ್ಯ ಜಾನಪದ ವಿ.ವಿ.ಯಲ್ಲೇ ಬುಡಕಟ್ಟು ಅಧ್ಯಯನಕ್ಕೂ ಸಮರ್ಪಕ ವ್ಯವಸ್ಥೆ ಮಾಡಲಾಗುವುದು ಎಂದು ವಿವರಿಸಿದ್ದಾರೆ.

ಇದುವರೆಗೂ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಯಾವುದೇ ಒಂದು ವಿಷಯದ ಪರೀಕ್ಷೆಯನ್ನು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಬರೆಯಲು ಅವಕಾಶವಿತ್ತು. ಆದರೆ ಇನ್ನು ಮುಂದೆ ಒಂದೇ ವಿಷಯವನ್ನು ಎರಡು ಭಾಷೆಗಳಲ್ಲಿಯೂ ಬರೆಯಬಹುದು. ವಿದ್ಯಾರ್ಥಿಗಳಿಗೆ ಆಯಾಯ ಪ್ರಶ್ನೆಗೆ ಉತ್ತರಿಸಲು ಯಾವ ಭಾಷೆ ಸೂಕ್ತವೆನಿಸುತ್ತದೋ ಅದರಲ್ಲೇ ಉತ್ತರ ಬರೆಯುವ ಅವಕಾಶ ಕೊಡಲಾಗುವುದು. ಒಂದು ಪ್ರಶ್ನೆಗೆ ಕನ್ನಡದಲ್ಲಿ ಉತ್ತರ ಬರೆದು, ಇನ್ನೊಂದು ಪ್ರಶ್ನೆಗೆ ಇಂಗ್ಲಿಷ್‌ನಲ್ಲಿ ಬೇಕಾದರೂ ಉತ್ತರಿಸಬಹುದು. ಪಾಲಿಟೆಕ್ನಿಕ್ ಶಿಕ್ಷಣದಲ್ಲಿ ಈಗಾಗಲೇ ಈ ಸೌಲಭ್ಯವಿದೆ ಎಂದು ಅವರು ಮಾಹಿತಿ ನೀಡಿದರು.

ಕಾಲೇಜುಗಳಿಗೆ ಭೇಟಿ ಕಡ್ಡಾಯ: ಸುಶಾಸನ ಮಾಸಾಚರಣೆ ಅಂಗವಾಗಿ ಕುಲಪತಿಗಳು ಮತ್ತು ಇತರ ಉನ್ನತಾಧಿಕಾರಿಗಳು ತಮ್ಮ ವ್ಯಾಪ್ತಿಯ ಕಾಲೇಜುಗಳಿಗೆ ಭೇಟಿ ಕೊಟ್ಟು, ಪ್ರಗತಿ ಪರಿಶೀಲಿಸಬೇಕು ಎಂದು ಡಾ. ಅಶ್ವತ್ಥನಾರಾಯಣ ಹೇಳಿದರು.

ಎನ್‌ಇಪಿಯಲ್ಲಿ ಒತ್ತು ಕೊಟ್ಟಿರುವ ಓಪನ್ ಎಲೆಕ್ಟೀವ್, ಪರಿಕಲ್ಪನಾತ್ಮಕ ಕಲಿಕೆ ಮತ್ತು ಶೈಕ್ಷಣಿಕ ಪ್ರಗತಿಯ ಮೌಲ್ಯಮಾಪನ ಪದ್ಧತಿಯನ್ನು ಕಾಲೇಜುಗಳಲ್ಲಿ ಸರಿಯಾಗಿ ಜಾರಿಗೆ ತರಬೇಕು. ಇದರಿಂದ ವಿದ್ಯಾರ್ಥಿಗಳ ಉದ್ಯೋಗಾರ್ಹತೆ ಹೆಚ್ಚಲಿದೆ. ರಾಜ್ಯದಲ್ಲಿ ಯಥೇಚ್ಛವಾಗಿ ಲಭ್ಯವಿರುವ ಉದ್ಯೋಗಾವಕಾಶಗಳಿಗೆ ತಕ್ಕಂತೆ ಕೌಶಲ್ಯಾಭಿವೃದ್ಧಿ ಒದಗಿಸಲು ಇದರಿಂದ ನೆರವಾಗುತ್ತದೆ ಎಂದು ಅವರು ಒತ್ತಿ ಹೇಳಿದರು. ಉನ್ನತ ಶಿಕ್ಷಣ ವಲಯವು ಉದ್ಯಮಗಳ ಜತೆ ಸಕ್ರಿಯ ಸಂಬಂಧ ಹೊಂದಬೇಕು. ಕಾಲೇಜುಗಳು ಈ ನಿಟ್ಟಿನಲ್ಲಿ ಒಡಂಬಡಿಕೆ ಮಾಡಿಕೊಳ್ಳಬೇಕು ಎಂದು ಅವರು ಸೂಚಿಸಿದರು. ಉನ್ನತ ಶಿಕ್ಷಣ ವಲಯದಲ್ಲಿ ನಮ್ಮ ಆದ್ಯತೆ ಸಂಶೋಧನಾ ಸಂಸ್ಕೃತಿಯ ಕಡೆಗೆ ಇರಬೇಕು. ಇದಕ್ಕೆ ನಾವು ಹೆಚ್ಚು ಹಣ ವಿನಿಯೋಗಿಸಬೇಕು ಎಂದು ಅವರು ಪ್ರತಿಪಾದಿಸಿದರು. ಸಭೆಯಲ್ಲಿ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಶಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ, ಶಿಕ್ಷಣ ಪರಿಷತ್ತಿಗೆ ಇತ್ತೀಚೆಗೆ ನಾಮಕರಣವಾದ ಕೇಂದ್ರೀಯ ಬುಡಕಟ್ಟು ವಿವಿ ಕುಲಪತಿ ಪ್ರೊ ಟಿ.ವಿ.ಕಟ್ಟೀಮನಿ, ಎಂಇಆರ್‌ಸಿಕೆ ಎಂಡಿ ಎನ್.ಎಸ್.ಶ್ರೀನಾಥ, ಬಾಷ್ ಗ್ಲೋಬಲ್ ಸಾಫ್ಟ್‌ವೇರ್‌ನ ರಾಘವೇಂದ್ರ ಕೃಷ್ಣಮೂರ್ತಿ, ಪ್ರೊ ಎನ್.ಉಷಾರಾಣಿ, ಜೋಗನ್ ಶಂಕರ್ ಸೇರಿದಂತೆ ರಾಜ್ಯದ ಎಲ್ಲ ವಿವಿಗಳ ಕುಲಪತಿಗಳು ಉಪಸ್ಥಿತರಿದ್ದರು.

ಗಡಿ ವಿವಾದ: ಕೇಂದ್ರ ಮಧ್ಯಪ್ರವೇಶ

ಇತರ ಭಾಷೆಯ ಪ್ರವಾಸಿಗರು, ವ್ಯಾಪಾರಿಗಳು ಅಥವಾ ಜನರಿಗೆ ಯಾವುದೇ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಹಿರಿಯ ಐಪಿಎಸ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ಗಡಿ ವಿಚಾರ ಕುರಿತು ಕೇಂದ್ರ ಗೃಹಸಚಿವ ಅಮಿತ್ ಶಾ ಕರೆದಿದ್ದ ಸಭೆಗೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಮಿತ್ ಶಾ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಹಾಜರಿದ್ದರು.

ಬೀದಿ ಘರ್ಷಣೆಗಳಿಂದಲ್ಲ: ಶಾ

ರೀತಿಯಲ್ಲಿ ನಿರ್ಣಯವನ್ನು ತಲುಪಬೇಕು ಎಂದು ಒಪ್ಪಿಕೊಂಡರು. ಸುಪ್ರೀಂ ಆದೇಶ ಬರು ವವರೆಗೂ ಉಭಯ ರಾಜ್ಯಗಳು ವಿವಾದಿತ ಪ್ರದೇಶ ನಮ್ಮದು ಎಂದು ಹೇಳುವಂತಿಲ್ಲ'. ಗಡಿ ವಿವಾದವನ್ನು ಸಾಂವಿಧಾನಿಕ ವಿಧಾನ ಗಳಿಂದ ಮಾತ್ರ ಇತ್ಯರ್ಥಗೊಳಿಸಬಹುದೇ ವಿನಃ ಬೀದಿ ಘರ್ಷಣೆಗಳಿಂದಲ್ಲ ಎಂದು ಹೇಳಿದರು. ಅಂತೆಯೇ ಕರ್ನಾಟಕ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ದಶಕಗಳಿಂದ ನಡೆಯುತ್ತಿರುವ ರಾಜ್ಯ ಗಡಿ ವಿವಾದದಲ್ಲಿ ಸುಪ್ರೀಂ ಕೋರ್ಟ್ ಈ ವಿಷಯದ ಬಗ್ಗೆ ಆದೇಶ ಮಾಡು ವವರೆಗೆ ತಮ್ಮ ಹಕ್ಕುಗಳನ್ನು ಒತ್ತಾಯಿ ಸದಿರಲು ಒಪ್ಪಿದ್ದಾರೆ. ಸುಪ್ರೀಂಕೋರ್ಟ್ ತನ್ನ ತೀರ್ಪು ನೀಡುವವರೆಗೂ ರಾಜ್ಯ ಸರ್ಕಾರಗಳು ಯಾವುದೇ ಹಕ್ಕು ಸಲ್ಲಿ ಸುವುದಿಲ್ಲ ಎಂಬ ಒಪ್ಪಂದವಿದೆ. ವಿವಾದ ವನ್ನು ಮಾತುಕತೆಯ ಮೂಲಕ ಪರಿಹರಿಸಬೇಕು ಎಂದು ಹೇಳಿದರು.

ಮೈಸೂರು ಖದೀಮ ಚಿಕ್ಕಬಳ್ಳಾಪುರದಲ್ಲಿ ಬಂಧನ

ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಪ್ರಕರಣದಲ್ಲಿ ಆರೋಪಿಯನ್ನು ಪತ್ತೆ ಹಚ್ಚಲು ಚಿಕ್ಕಬಳ್ಳಾಪುರ ಡಿವೈಎಸ್ಪಿ ವಿ.ಕೆ. ವಾಸುದೇವ್ ಅವರು ಇನ್ಸ್‌ಪೆಕ್ಟರ್ ಬಿ. ರಾಜು ನೇತೃತ್ವದಲ್ಲಿ ತಂಡವೊಂದನ್ನು ರಚಿಸಿದ್ದರು. ಎಟಿಎಂ ಕೇಂದ್ರಗಳ ಬಳಿ ಮಫ್ತಿಯಲ್ಲಿ ಪೊಲೀಸರು ನಿಗಾ ವಹಿಸಿದ್ದರು. ಅಲ್ಲದೇ, ಕೆಲಸ ಹಿರಿಯ ನಾಗರಿಕರು ಹಣ ಡ್ರಾ ಮಾಡಲು ಬಂದಾಗ ಎಟಿಎಂ ಕೇಂದ್ರಕ್ಕೆ ಬೇರೆ ಯಾರಾದರೂ ಹೋಗುತ್ತಾರೆಯೇ ಎಂಬುದರ ಬಗ್ಗೆಯೂ ಗಮನ ಹರಿಸಿದ್ದರು.

ಚಿಕ್ಕಬಳ್ಳಾಪುರ ನಗರದ ಶಿಡ್ಲಘಟ್ಟ ರಸ್ತೆಯ ಚಾಮರಾಜಪೇಟೆ ಕ್ರಾಸ್‌ನಲ್ಲಿರುವ ಆಕ್ಸಿಸ್ ಬ್ಯಾಂಕ್ ಎಟಿಎಂ ಕೇಂದ್ರಕ್ಕೆ ಹಿರಿಯ ನಾಗರಿಕರೊಬ್ಬರು ಹಣ ಡ್ರಾ ಮಾಡಲು ಹೋದಾಗ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ ಮೈಸೂರಿನ ಬಿ.ಕೆ. ಕಿರಣ್‌ಕುಮಾರ್‌ನನ್ನು ವಶಕ್ಕೆ ಪಡೆದು ಶೋಧಿಸಿದಾಗ ಆತನ ಬಳಿ ವಿವಿಧ ಬ್ಯಾಂಕ್‌ಗಳ 14 ಎಟಿಎಂ ಕಾರ್ಡ್‌ಗಳು ದೊರೆತಿವೆ. ಆತನನ್ನು ವಿಚಾರಣೆಗೊಳಪಡಿಸಿದಾಗ ಎಟಿಎಂ ಕಾರ್ಡ್ ಲಪಟಾಯಿಸಿ, ವಂಚಿಸಿರುವ 8 ಪ್ರಕರಣಗಳು ಆತನ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿರುವುದು ಗೊತ್ತಾಗಿದೆ.

ಈತ ಚಿಕ್ಕಬಳ್ಳಾಪುರ ನಗರ ಠಾಣಾ ವ್ಯಾಪ್ತಿಯಲ್ಲಿ 2, ಹೊಸದುರ್ಗ ಠಾಣಾ ವ್ಯಾಪ್ತಿಯಲ್ಲಿ 2, ದಾವಣಗೆರೆ ಜಿಲ್ಲೆ ಬಸವನಗರ ಠಾಣೆ, ರಾಮನಗರದ ಐಗೂರು, ಯಾದಗಿರಿ, ಕೊಳ್ಳೇಗಾಲ, ಜಗಳೂರು, ಗದಗ ಮತ್ತು ಜಮಖಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಲಾ ಒಂದು ಪ್ರಕರಣ ಸೇರಿದಂತೆ ಒಟ್ಟು 11 ಪ್ರಕರಣಗಳನ್ನು ಎಸಗಿರುವುದು ಗೊತ್ತಾಗಿದೆ. ಈತ ಹಿರಿಯ ನಾಗರಿಕರು ಹಾಗೂ ಅಮಾಯಕರನ್ನೇ ಗುರಿಯನ್ನಾಗಿಟ್ಟುಕೊಂಡು ಕೃತ್ಯ ಎಸಗುತ್ತಿದ್ದ, ಯಾರಾದರೂ ಹಣ ಡ್ರಾ ಮಾಡಲು ಎಟಿಎಂ ಕೇಂದ್ರಕ್ಕೆ ಹೋದರೆ ಈತನೂ ಒಳಹೊಕ್ಕಿ ಅವರು ಎಟಿಎಂ ಪಿನ್ ನಮೂದಿಸುವಾಗ ಅದನ್ನು ತನ್ನ ಮೊಬೈಲ್‌ನಲ್ಲಿ ವೀಡಿಯೋ ರೆಕಾರ್ಡ್ ಮಾಡಿಕೊಳ್ಳುತ್ತಿದ್ದ. ಎಲ್ಲಾ ಬ್ಯಾಂಕ್‌ಗಳ ಎಟಿಎಂ ಕಾರ್ಡ್‌ಗಳನ್ನು ಹೊಂದಿದ್ದ ಈತ ಕ್ಷಣಮಾತ್ರದಲ್ಲಿ ಅವರು ಬಳಸುವಂತಹ ಕಾರ್ಡ್ ಅನ್ನು ಜೇಬಿನಿಂದ ತೆಗೆದುಕೊಂಡು, ಅವರು ಎಟಿಎಂನಿಂದ ಹಣ ಡ್ರಾ ಮಾಡಿ ಎಣಿಸುತ್ತಿದ್ದ ವೇಳೆ ಕಾರ್ಡ್ ಅನ್ನು ಬದಲಾಯಿಸಿ ಬಿಡುತ್ತಿದ್ದ. ನಂತರ ಆ ಕಾರ್ಡ್ ಅನ್ನು ಬಳಸಿ ಹಣ ಡ್ರಾ ಮಾಡಿಕೊಂಡು ಸದರಿ ಕಾರ್ಡ್ ಬ್ಲಾಕ್ ಆದ ಬಳಿಕ ಅದೇ ಕಾರ್ಡ್ ಅನ್ನು ಬೇರೆಯವರನ್ನು ವಂಚಿಸಲು ಉಪಯೋಗಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಅಲ್ಲದೇ, ಎಟಿಎಂನಲ್ಲಿ ಹಣ ಡ್ರಾ ಮಾಡಲು ಗೊತ್ತಿಲ್ಲದ ಅಮಾಯಕರು ಹಾಗೂ ಹಿರಿಯ ನಾಗರಿಕರಿಗೆ ಸಹಾಯ ಮಾಡುವ ನೆಪದಲ್ಲಿ ಅವರ ಕಾರ್ಡ್‌ಗಳನ್ನು ಎಗರಿಸಿ, ಬೇರೆ ಕಾರ್ಡ್ ಅವರಿಗೆ ಕೊಟ್ಟು ನಂತರ ಹಣ ಡ್ರಾ ಮಾಡಿಕೊಳ್ಳುತ್ತಿದ್ದ. ಎಟಿಎಂ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಇರುವುದರಿಂದ ಈತ ಒಂದು ಊರಿನಲ್ಲಿ ಒಂದು ಅಥವಾ ಎರಡು ಕೃತ್ಯ ಎಸಗಿದ ನಂತರ ಅಲ್ಲಿಂದ ಜಾಗ ಖಾಲಿ ಮಾಡಿ ಬೇರೆ ಊರಿಗೆ ಹೋಗಿ ತನ್ನ ಕೃತ್ಯ ಮುಂದುವರೆಸುತ್ತಿದ್ದ ನಾಲ್ಕೈದು ತಿಂಗಳ ನಂತರ ಮತ್ತೆ ಅದೇ ಊರಿಗೆ ಬರುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ಪೊಲೀಸರಿಗೆ ಸಿಕ್ಕಿಬಿದ್ದು, ಜೈಲು ಸೇರಿದರೆ ಸುಲಭವಾಗಿ ಜಾಮೀನು ಪಡೆದು ಮತ್ತೆ ಎಟಿಎಂ ಕೇಂದ್ರಗಳಲ್ಲಿ ಕೈವರಸೆ ತೋರಿಸುತ್ತಿದ್ದ ಎಂಬುದು ವಿಚಾರಣೆಗ ವೇಳೆ ತಿಳಿದುಬಂದಿದೆ. ಖದೀಮ ಕಿರಣ್‌ಕುಮಾರ್ ಬಂಧನ ಕಾರ್ಯಾಚರಣೆಯಲ್ಲಿ ಚಿಕ್ಕಬಳ್ಳಾಪುರ ಡಿವೈಎಸ್ಪಿ ವಿ.ಕೆ. ವಾಸುದೇವ್ ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಬಿ. ರಾಜು, ಸಬ್‌ಇನ್ಸ್‌ಪೆಕ್ಟರ್ ಕೆ. ಪ್ರದೀಪ್ ಪೂಜಾರಿ, ಸಿಬ್ಬಂದಿಗಳಾದ ರವಿಕುಮಾರ್, ವಿಜಯಕುಮಾರ್, ಮಧುಕುಮಾರ್, ರಾಮ-ಲಕ್ಷ್ಮಣ್, ಮಂಜುನಾಥ್ ಮುಂತಾದವರು ಭಾಗವಹಿಸಿದ್ದರು.

ಫೈನಲ್ ಪ್ರವೇಶಿಸಿದ ಅರ್ಜೆಂಟಿನಾ

ಅರ್ಜೆಂಟೀನಾ ತಂಡದ ಪರ ಜೂಲಿಯಾನ್ ಅಲ್ವಾರೆಜ್ (39 ಮತ್ತು 69ನೇ ನಿಮಿಷ) ಅವಳಿ ಗೋಲ್ ಬಾರಿಸಿದರೆ, ಸ್ಟಾರ್ ಆಟಗಾರ ಲಿಯೋನೆಲ್ ಮೆಸ್ಸಿ (39ನೇ ನಿಮಿಷ) ಏಕೈಕ ಗೋಲ್ ಬಾರಿಸಿದರು. 16ನೇ ಸುತ್ತಿನ ಪಂದ್ಯದಲ್ಲಿ ಜಪಾನ್ ಹಾಗೂ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಲಿಷ್ಠ ಬ್ರೆಜಿಲ್ ತಂಡಕ್ಕೆ ಆಘಾತ ಕೊಟ್ಟು ಸೆಮಿ ಹಂತಕ್ಕೆ ಪ್ರವೇಶ ಪಡೆದಿದ್ದ ಕ್ರೊಯೇಷಿಯಾ ಬಳಗಕ್ಕೆ ಈ ಬಾರಿ ಅದ್ಭುತ ಸಾಧನೆ ಮಾಡಲು ಸಾಧ್ಯವಾಗಲಿಲ್ಲ. ರಕ್ಷಣಾ ವಿಭಾಗ ಹೆಚ್ಚು ಕಾರ್ಯಪ್ರವೃತ್ತವಾಗಿದ್ದ ಹೊರತಾಗಿಯೂ ಗೋಲ್ ಬಾರಿಸಲು ವಿಫಲಗೊಂಡು ನಿರಾಸೆ ಎದುರಿಸಿತು.

ಪಂದ್ಯದ ಪ್ರಥಮಾರ್ಧ ಮುಕ್ತಾಯದ ವೇಳೆಗೆ 2-0 ಗೋಲ್‌ಗಳ ಮುನ್ನಡೆ ಪಡೆದುಕೊಂಡ ಅರ್ಜೆಂಟೀನಾ, ದ್ವಿತೀಯಾರ್ಧದಲ್ಲೂ ಅದೇ ಮಾದರಿಯ ಆಟವನ್ನು ಮುಂದುವರಿಸಿ 69ನೇ ನಿಮಿಷದಲ್ಲಿ ಮತ್ತೊಂದು ಗೋಲ್ ಹೊಡೆದು ವಿಜಯದ ಅಂತರವನ್ನು ಹೆಚ್ಚಿಸಿಕೊಂಡಿತು. ಫ್ರಾನ್ಸ್ ಮತ್ತು ಮೊರಾಕ್ಕೊ ತಂಡಗಳ ನಡುವಿನ ಎರಡನೇ ಸೆಮಿಫೈನಲ್ ಪಂದ್ಯದ ವಿಜೇತ ತಂಡ ಫೈನಲ್‌ನಲ್ಲಿ ಅರ್ಜೆಂಟೀನಾಗೆ ಎದುರಾಗಲಿದೆ.

ಇದು ನನ್ನ ಕೊನೆಯ ವಿಶ್ವಕಪ್ ಪಂದ್ಯ: ಡಿ.18 ರಂದು ನಡೆಯುವ ಫಿಫಾ ವಿಶ್ವಕಪ್ 2022ರ ಫೈನಲ್ ಪಂದ್ಯ ತನ್ನ ಕೊನೆಯ ಆಟ ಎಂದು ಅರ್ಜೆಂಟಿನಾ ತಂಡದ ನಾಯಕ ಲಿಯೋನೆಲ್‌ಮೆಸ್ಸಿ ತಿಳಿಸಿದ್ದಾರೆ. ಫೈನಲ್‌ನಲ್ಲಿ ನನ್ನ ಕೊನೆಯ ಪಂದ್ಯವನ್ನು ಆಡುವ ಮೂಲಕ ವಿಶ್ವಕಪ್ ಪ್ರಯಾಣವನ್ನು ಪೂರ್ಣಗೊಳಿಸಲು ಇಚ್ಛಿಸಿದ್ದೇನೆ ಎಂದು ಮೆಸ್ಸಿ ತಿಳಿಸಿದ್ದಾರೆ. ಹಲವು ವರ್ಷಗಳ ನಂತರ ಮುಂದಿನ ವಿಶ್ವಕಪ್ ಪಂದ್ಯ ನಡೆಯುತ್ತದೆ. ಅಲ್ಲಿ ಇಂಥಹ ಸಾಧನೆ ಮಾಡಲು ಆಗುವುದಿಲ್ಲ ಎಂದು ನನಗೆ ಎನ್ನಿಸುತ್ತಿದೆ. ಹೀಗಾಗಿ ವಿದಾಯ ಹೇಳುವುದು ಉತ್ತಮ ಎನಿಸುತ್ತಿದೆ ಎಂದು ಮೆಸ್ಸಿ ಸ್ಪಷ್ಟಪಡಿಸಿದ್ದಾರೆ. 35 ವರ್ಷ ವಯಸ್ಸಿ ಮೆಸ್ಸಿ ಈ ಬಾರಿ ತಮ್ಮ ಐದನೇ ವಿಶ್ವಕಪ್‌ನಲ್ಲಿ ಆಡುತ್ತಿದ್ದಾರೆ. ಭಾನುವಾರ ವಿಶ್ವಕಪ್‌ಫೈನಲ್ ಪಂದ್ಯ ನಡೆಯಲಿದೆ.

ಮೈಸೂರಲ್ಲಿ ಚಿತ್ರದುರ್ಗ ಪರಿಶಿಷ್ಟರ ಐಕ್ಯತಾ ಸಮಾವೇಶದ ಪೂರ್ವಭಾವಿ ಸಭೆ

- ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು, ಮುಖಂಡರು ಭಾಗಿ
- ಸಮಾವೇಶದ ಯಶಸ್ಸಿಗೆ ಸಹಕರಿಸುವಂತೆ ಡಾ.ಜಿ.ಪರಮೇಶ್ವರ್ ಮನವಿ



ಮೈಸೂರು, ಡಿ.14(ಆರ್‌ಕೆಬಿ)- ಚಿತ್ರದುರ್ಗದಲ್ಲಿ ಜ.8ರಂದು ನಡೆಸಲು ತೀರ್ಮಾನಿಸಿರುವ ಕಾಂಗ್ರೆಸ್ ಎಸ್‌ಸಿ-ಎಸ್‌ಟಿ ಐಕ್ಯತಾ ಸಮಾವೇಶದ ಪೂರ್ವಭಾವಿ ಸಭೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ನಡೆಯಿತು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಅತೀ ಹೆಚ್ಚು ಸಂಖ್ಯೆಯಲ್ಲಿ ಪರಿಶಿಷ್ಟರನ್ನು ಕರೆತರುವಂತೆ ಸಮಾವೇಶ ಆಚರಣಾ ಸಮಿತಿ ಅಧ್ಯಕ್ಷರೂ ಆದ ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಎರಡೂ ಜಿಲ್ಲೆಯ ಶಾಸಕರು, ಮಾಜಿ ಶಾಸಕರು ಮತ್ತು ಮಾಜಿ ಸಂಸದರು, ಮುಖಂಡರಲ್ಲಿ ಮನವಿ ಮಾಡಿದರು.

ಮೈಸೂರು ಪ್ರಜ್ಞಾವಂತರ ಜಿಲ್ಲೆ. ರಾಜಕೀಯವಾಗಿಯೂ ಪ್ರಜ್ಞಾವಂತರಿದ್ದಾರೆ. ಬಹಳ ಬುದ್ಧಿವಂತರಿದ್ದಾರೆ. ಹಾಗಾಗಿ ಈ ಜಿಲ್ಲೆಯಿಂದ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆಯೂ ಅವರು ಮನವಿ ಮಾಡಿದರು.

ರಾಜ್ಯದ ಜನ ಬದಲಾವಣೆ ಬಯಸಿದ್ದಾರೆ. ಇಂತಹ ಸಂದರ್ಭದಲ್ಲಿ ನಡೆಸಲಾಗುತ್ತಿರುವ ಪರಿಶಿಷ್ಟರ ಐಕ್ಯತಾ ಸಮಾವೇಶದ ಮೂಲಕ ಕರ್ನಾಟಕ ರಾಜಕಾರಣದಲ್ಲಿಯೂ ಈ ಬದಲಾವಣೆಯ ಗಾಳಿ ಬೀಸಲಿದೆ. ಹಾಗಾಗಿ ಸಮಾವೇಶಕ್ಕೆ ಶಾಸಕರು, ಮಾಜಿ ಶಾಸಕರು ತಮ್ಮ ಕ್ಷೇತ್ರಗಳಿಂದ ಕನಿಷ್ಠ 2 ಸಾವಿರ ಜನರನ್ನಾದರೂ ಕರೆ ತರುವಂತೆ ಮನವಿ ಮಾಡಿದರು.

ಚುನಾವಣೆಗೆ ಇನ್ನು 105 ದಿನಗಳು ಮಾತ್ರ ಬಾಕಿ: ಚುನಾವಣೆಗೆ ಇನ್ನು ಕೇವಲ 105 ದಿನಗಳು ಮಾತ್ರ ಬಾಕಿಯಿದೆ. ದಿನಗಣನೆ ಶುರುವಾಗಿದೆ. ಚುನಾವಣೆ ದೃಷ್ಟಿಯಿಂದ ನಾವು ಸಂಘರ್ಷಕ್ಕೆ ಸಿದ್ಧರಾಗಬೇಕಿದೆ. ಹೀಗಾಗಿ ವರಿಷ್ಠರೊಂದಿಗೆ ಚರ್ಚಿಸಿ, ಜ.8ರಂದು ಪರಿಶಿಷ್ಟರ ಐಕ್ಯತಾ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು.

ಪರಿಶಿಷ್ಟ ಸಮುದಾಯಗಳು ಹೆಚ್ಚಿ ಸಂಖ್ಯೆಯಲ್ಲಿ ನಮ್ಮೊಂದಿಗೇ ಇದ್ದರೂ ಅನೇಕರು ನಮ್ಮಿಂದ ದೂರ ಇದ್ದು, ಸಂಪರ್ಕ ಕಳೆದುಕೊಂಡಿದ್ದಾರೆ. ಅವರನ್ನು ಸಂಪರ್ಕಿಸಿ, ಅವರಿಗೆ ಧೈರ್ಯ ತುಂಬಬೇಕೆಂದು ವರಿಷ್ಠರ ಸೂಚನೆ ಮೇರೆಗೆ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಪರಿಶಿಷ್ಟರ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಅವರನ್ನು ನಮ್ಮೊಂದಿಗೆ ಕೊಂಡೊಯ್ಯಬೇಕಾಗಿದೆ. ಮೀಸಲಾತಿ ಅನುಭವಿಸುವ ಎಲ್ಲಾ ಎಸ್‌ಸಿ-ಎಸ್‌ಟಿ ಸಮುದಾಯದವರು ಏಕಮನಸ್ಸಿನಿಂದ ಒಂದೆಡೆ ಸೇರಬೇಕಿದೆ. ಆ ನಿಟ್ಟಿನಲ್ಲಿ ಐಕ್ಯತಾ ಸಮಾವೇಶ ಮಹತ್ವ ಎನಿಸಿದೆ ಎಂದರು.



ಐಕ್ಯತಾ ಸಮಾವೇಶದ ಉಪಾಧ್ಯಕ್ಷರಲ್ಲಿ ಒಬ್ಬರಾದ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಎಸ್‌ಸಿ-ಎಸ್‌ಟಿ ಬೇರೆ ಇತ್ತು ಇನ್ನು ನಾವೆಲ್ಲರೂ ಒಟ್ಟಾಗಿ, ಒಂದಾಗಿದ್ದೇವೆ ಎಂಬ ಸಂದೇಶ ನೀಡೋಣ. ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿ. ಇದರಿಂದ ಕಾಂಗ್ರೆಸ್‌ಗೂ ಹೆಚ್ಚಿನ ಶಕ್ತಿ ಬರಲಿದೆ. ಶಾಸಕರು, ಮಾಜಿ ಶಾಸಕರು ಹೆಚ್ಚು ಸಂಖ್ಯೆಯಲ್ಲಿ ಜನರನ್ನು ಕರೆ ತನ್ನಿ. ಈ ಮೂಲಕ ಹಲವಾರು ಸವಾಲುಗಳಿಗೆ ಜವಾಬು ನೀಡಬೇಕಿದೆ. ಸಿದ್ದರಾಮಯ್ಯ ಆಡಳಿತದಲ್ಲಿ ರೈತರು, ವಿದ್ಯಾರ್ಥಿಗಳು, ಬಡವರ್ಗದ ಜನರಿಗೆ ನೀಡಿದ್ದ ಸೌಲಭ್ಯಗಳು ಮತ್ತು ಕಾರ್ಯಕ್ರಮಗಳನ್ನು ಬಿಜೆಪಿ ಸರ್ಕಾರ ಕಡಿತ ಮಾಡಿದೆ, ಇಲ್ಲವೇ ಸ್ಥಗಿತಗೊಳಿಸಿದೆ. ಈ ಬಗ್ಗೆ ಸಮಾವೇಶದಲ್ಲಿ ಚರ್ಚಿಸೋಣ ಬನ್ನಿ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ಶಾಸಕರು, ಹಲವು ಮುಖಂಡರು ಮಾತನಾಡಿ, ಸಮಾವೇಶಕ್ಕೆ ನಮ್ಮ ಕ್ಷೇತ್ರಗಳಿಂದ ಹೆಚ್ಚು ಜನರನ್ನು ಕರೆತರುವುದಾಗಿ ಭರವಸೆ ನೀಡಿದರು. ಪೂರ್ವಭಾವಿ ಸಭೆಯಲ್ಲಿ ಶಾಸಕರಾದ ಹೆಚ್.ಪಿ. ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಪುಟ್ಟರಂಗಶೆಟ್ಟಿ, ಆರ್. ನರೇಂದ್ರ, ಅನಿಲ್ ಚಿಕ್ಕಮಾದು, ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಮಲ್ಲಾಜಮ್ಮ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್.ಬಾಲರಾಜ್, ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಕೆ.ಆರ್.ನಗರದ ಡಿ.ರವಿಶಂಕರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಮುಖಂಡರಾದ ಕೆ.ಹರೀಶ್‌ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಮರಿಸ್ವಾಮಿ, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

> "ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟರ ಮೇಲೆ ದೌರ್ಜನ್ಯ ಬಹಳ ಹೆಚ್ಚಾಗುತ್ತಿದೆ. ಇದೆಲ್ಲವನ್ನು ನೋಡಿಯೂ ನಾವು ಕಣ್ಣು ಮುಚ್ಚಿ ಕೂರಲು ಸಾಧ್ಯವಿಲ್ಲ. ಪರಿಶಿಷ್ಟರ ಅಭಿವೃದ್ಧಿಗೆ ಈ ಹಿಂದಿನಂತೆಯೇ ಕಾಂಗ್ರೆಸ್ ಹೆಚ್ಚಿನ ಕಾರ್ಯಕ್ರಮ, ಯೋಜನೆ ನೀಡಲು ಚಿಂತಿಸಿದೆ.
> -ಡಾ.ಜಿ.ಪರಮೇಶ್ವರ್

ಕೆಆರ್‌ಎಸ್ ಪಕ್ಷದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ



ಮೈಸೂರು,ಡಿ.14(ಆರ್‌ಕೆಬಿ)-ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಕೇವಲ ಪುರುಷರದ್ದೇ ಪ್ರಾಬಲ್ಯವಿದ್ದು, ಮಹಿಳೆಯರು ಈ ಕ್ಷೇತ್ರದಲ್ಲಿರುವುದು ಕಡಿಮೆ. ಹೀಗಾಗಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಮಹಿಳೆಯರಿಗೆ ರಾಜಕೀಯ ಪ್ರವೇಶಿಸಲು ಹೆಚ್ಚಿನ ಅವಕಾಶ ಮಾಡಿಕೊಡಲಾಗುತ್ತಿದೆ ಎಂದು ಪಕ್ಷದ ಬೆಂಗಳೂರು ನಗರ ಕಾರ್ಯದರ್ಶಿ ಜನನಿ ವತ್ಸಲಾ ಹೇಳಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ನಿಟ್ಟಿನಲ್ಲಿ ಪಕ್ಷದ ವತಿಯಿಂದ 'ಹೆಣ್ಣೇ-ಪವಿತ್ರ ರಾಜಕಾರಣಕ್ಕೆ ಮುಂದಾಗು' ರಾಜ್ಯವ್ಯಾಪಿ ಅಭಿಯಾನ ಕೈಗೊಳ್ಳಲಾಗಿದೆ. ಇದರ ಅಂಗವಾಗಿ ತಾವು ಮೈಸೂರಿಗೆ ಭೇಟಿ ನೀಡಿ, ಮಹಿಳೆಯರು ಪಕ್ಷ ಸೇರಲು ಆಹ್ವಾನ ನೀಡಿರುವುದಾಗಿ ತಿಳಿಸಿದರು.

ತಮ್ಮ ಪಕ್ಷ ಸ್ವಚ್ಛ, ಪ್ರಾಮಾಣಿಕ, ಜನಪರ ರಾಜಕಾರಣದ ಉದ್ದೇಶ ಹೊಂದಿದ್ದು, ಮಹಿಳೆಯರ ಸಾಮರ್ಥ್ಯ, ಜನಪರ ಕಾಳಜಿ ಆಧಾರದ ಮೇಲೆ ರಾಜಕೀಯ ನಾಯಕತ್ವದ ಅವಕಾಶ ನೀಡುತ್ತಿದೆ. ಇದನ್ನು ನಾಡಿನ ಮಹಿಳೆಯರು ಸದುಪಯೋಗಪಡಿಸಿಕೊಂಡು ರಾಜಕೀಯ ಕ್ಷೇತ್ರದಲ್ಲಿಯೂ ಮುಂದೆ ಬರುವಂತೆ ಮನವಿ ಮಾಡಿದರು. ಪಕ್ಷಕ್ಕೆ ಸೇರ ಬಯಸುವವರು ಮೊಬೈಲ್- 91135 80591ಕ್ಕೆ ಕರೆ ಮಾಡುವಂತೆಯೂ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮಹಿಳಾ ಘಟಕದ ಮೈಸೂರು ಜಿಲ್ಲಾಧ್ಯಕ್ಷೆ ಭಾನು ಮೋಹನ್, ಕಾರ್ಯದರ್ಶಿ ಲಕ್ಷ್ಮಿ, ನಂಜನಗೂಡು ಭಾಗ್ಯ, ಜ್ಯೋತಿ ಇನ್ನಿತರರು ಉಪಸ್ಥಿತರಿದ್ದರು.

ಶಾರದಾದೇವಿಯವರ 170ನೇ ಜನ್ಮ ದಿನಾಚರಣೆ

ಇಂದು ಆಧ್ಯಾತ್ಮಿಕ ಜಗತ್ತು ಕಾರ್ಯಕ್ರಮ



ಮೈಸೂರು,ಡಿ.14- ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಪತ್ನಿ ಶ್ರೀಮಾತೆ ಶಾರದಾದೇವಿಯವರ 170ನೇ ಜನ್ಮದಿನಾಚರಣೆ ಅಂಗವಾಗಿ ಆಧ್ಯಾತ್ಮಿಕ ಜಗತ್ತು ಎಂಬ ಕಾರ್ಯಕ್ರಮವನ್ನು ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ನಾಳೆ (ಡಿ.15) ಬೆಳಗ್ಗೆ 11 ಗಂಟೆಗೆ ಶ್ರೀ ರಾಮಕೃಷ್ಣನಗರ ಪರಮಹಂಸ ವೃತ್ತದಲ್ಲಿ ಆಯೋಜಿಸಲಾಗಿದೆ ಎಂದು ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಶಾಸಕ ಜಿ.ಟಿ.ದೇವೇಗೌಡ, ಮಾಜಿ ವಿಧಾನಪರಿಷತ್ ಸದಸ್ಯ ಮಾದೇಗೌಡ, ಇಳೈಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಕಾಂಗ್ರೆಸ್ ಯುವ ಮುಖಂಡ ಎನ್.ಎಂ. ನವೀನ್‌ಕುಮಾರ್, ಪಾಲಿಕೆ ಸದಸ್ಯರಾದ ಶರತ್‌ಕುಮಾರ್, ಲಕ್ಷ್ಮಿ ಕಿರಣ್‌ಗೌಡ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ವಿಶ್ವ ದಾದಿಯರ ದಿನಾಚರಣೆ ಅಂಗವಾಗಿ ಟೈಗರ್ ಅಡ್ವೆಂಚರ್ ಫೌಂಡೇಷನ್ ವತಿಯಿಂದ

14 ಸಾವಿರ ಅಡಿ ಎತ್ತರದ ಹಿಮಾಲಯ ಶ್ರೇಣಿಗೆ ಶುಶ್ರೂಷಕಿಯರ ತಂಡದ ಚಾರಣಕ್ಕೆ ಸಿದ್ಧತೆ



ಮೈಸೂರು,ಡಿ.14(ಆರ್‌ಕೆಬಿ)- ಮೈಸೂರಿನ ಟೈಗರ್ ಅಡ್ವೆಂಚರ್ ಫೌಂಡೇಷನ್ ಆಶ್ರಯದಲ್ಲಿ ಮೇ 5ರಿಂದ 17ರವರೆಗೆ ದಾದಿಯರಿಗಾಗಿ ಹಿಮಾಲಯ ಚಾರಣ ಆಯೋಜಿಸಿದೆ. ಕೋಟ್ಯಾಂತರ ಜನರ ನೋವುಗಳನ್ನು ಮಾನವೀಯ ಸ್ಪರ್ಶದೊಂದಿಗೆ ದೂರ ಮಾಡುವ 12 ಮಂದಿ ಶುಶ್ರೂಷಕಿಯರ ಗುಂಪನ್ನು ಚಾರಣಕ್ಕೆ ಕರೆದೊಯ್ಯಲು ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಚೇರ್ಮನ್ ಸೋಲಂಕಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ಲಾರೆನ್ಸ್ ನೈಟಿಂಗೇಲ್ ಅವರ 200ನೇ ಜನ್ಮದಿನದಂದು ವಿಶ್ವ ದಾದಿಯರ ದಿನಾಚರಣೆ ಅಂಗವಾಗಿ ಕರ್ನಾಟಕದ 12 ಜನ ಶುಶ್ರೂಷಕಿಯರು 14 ಸಾವಿರ ಅಡಿ ಎತ್ತರದ ಹಿಮಾಲಯ ಶ್ರೇಣಿಯಲ್ಲಿ ಹಿಮಾಚಲ ಪ್ರದೇಶದಲ್ಲಿ ಆಚರಿಸಲಿದ್ದಾರೆ ಎಂದರು.

ಕೋವಿಡ್ ಹಿನ್ನೆಲೆಯಲ್ಲಿ 2020ರಿಂದ ಎರಡು ಬಾರಿ ಮುಂದೂಡಲ್ಪಟ್ಟಿದ್ದ ಚಾರಣ ಈ ವರ್ಷ ಮರು ನಿಗದಿ ಮಾಡಲಾಗಿದೆ. ಮೌಂಟ್ ರುಮ್ಸು ತಲುಪುವ ಮುನ್ನ ತಂಡವು ಕಷದ್ರ ಮೋತಿಕೋಚರ್, ಡೋರಾ, ಚಕ್ಲಾನಿ, ಸ್ಟಲಿಂಗ್ ಪ್ರದೇಶಗಳಲ್ಲಿ ಹಾದು ಹೋಗಲಿದೆ. ದೇಶದ ಅತೀ ಪ್ರಾಚೀನ ಗ್ರಾಮ ರುಮ್ಸುಗೆ ಭೇಟಿ ನೀಡಿ ಕಡೆಯದಾಗಿ ರೋರಿಚ್ ಆರ್ಟ್ ಗ್ಯಾಲರಿಯಲ್ಲಿ ಸೇರಲಿದೆ. ಚಾರಣಕ್ಕೆ ಮೈಸೂರಿನ ದಿಯಾ ಫೌಂಡೇಷನ್, ಲೇಡಿಸ್ ಸರ್ಕಲ್ ಇಂಡಿಯಾ ಸಹಕಾರ ನೀಡಿದೆ. ಯೋಜನೆಯ ಒಟ್ಟು 8 ಲಕ್ಷ ರೂ. ವೆಚ್ಚವನ್ನು ಕೌಡ್ ಫಂಡಿಂಗ್ ಮೂಲಕ ಭರಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಫೌಂಡೇಷನ್ ಟ್ರಸ್ಟಿ ಅನಿಲ್ ಕುಮಾರ್, ಕಾರ್ಯದರ್ಶಿ ಆರ್.ಸಂತೋಷ್, ಟ್ರಸ್ಟಿ ನಮ್ರತಾ ಶೆಣೈ, ಚಾರಣ ಮುಖ್ಯಸ್ಥೆ ಪುನಿತಾ ಉಪಸ್ಥಿತರಿದ್ದರು.

> ಚಾರಣಿಗರ ಗುಂಪು ದೆಹಲಿಯ ನ್ಯಾಷನಲ್ ಮಾರ್ಟಿಯರ್ ವಾರ್ ಮೆಮೋರಿಯಲ್, ಅಮೃತಸರದ ಸ್ವರ್ಣಮಂದಿರ, ವಾಘಾ ಗಡಿ, ಜಲಿಯನ್ ವಾಲಾಬಾಗ್, ಮಾಡಲ್ ಮಾತಾ ದೇವಾಲಯ, ದುರ್ಗಿಯಾನ ದೇವಾಲಯ, ಗೋಬಿಂದ್ಘರ್ ಕೋಟೆ, ವಿಭಜನ ಸಂಗ್ರಹಾಲಯ ಮತ್ತು ಫಿರೋಜ್‌ಪುರದ ಹುಸೇನ್ವಾಲಾ ಗಡಿಗೆ ಭೇಟಿ ನೀಡಲಿದೆ. ಚಾರಣಿಗರ ಗುಂಪು ಮೇ 18ರಂದು ಮೈಸೂರಿಗೆ ಹಿಂದಿರುಗಲಿದೆ. ಆಸಕ್ತ ಶುಶ್ರೂಷಕಿಯರು ಇಮೇಲ್: tigersolanki@rediff mail.com ಅಥವಾ ಮೊ. 9845116835 ಮೂಲಕ ಸಂಪರ್ಕಿಸಬಹುದು.

ವರುಣಾ ಕ್ಷೇತ್ರಕ್ಕೆ ವಿಜಯೇಂದ್ರ ಕೊಡುಗೆ ಏನೂ ಇಲ್ಲ

ತಿ.ನರಸೀಪುರ ಪುರಸಭೆ ಅಧ್ಯಕ್ಷ ಮದನ್‌ರಾಜ್ ಹೇಳಿಕೆ

ಮೈಸೂರು,ಡಿ.14(ಆರ್‌ಕೆಬಿ)-ವರುಣಾ ವಿಧಾನಸಭಾ ಕ್ಷೇತ್ರಕ್ಕೂ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರಿಗೂ ಯಾವುದೇ ಸಂಬಂಧವಾಗಲೀ, ಈ ಕ್ಷೇತ್ರಕ್ಕೆ ಅವರ ಕೊಡುಗೆಯಾಗಲೀ ಇಲ್ಲ. ಹೀಗಿದ್ದೂ ಅವರು ಆಗಾಗ್ಗೆ ಕ್ಷೇತ್ರಕ್ಕೆ ಭೇಟಿ ನೀಡಿ ಸ್ಪರ್ಧಿಸುವುದಾಗಿ ಹೇಳುತ್ತಿದ್ದಾರೆ.



ಈ ಕ್ಷೇತ್ರದ ಜನ ಪ್ರಬುದ್ಧರಾಗಿದ್ದು, ಅವರು ಬಿಜೆಪಿಯಿಂದ ಸ್ಪರ್ಧಿಸಿದರೆ ಸೋಲುವುದು ಖಚಿತ ಎಂದು ತಿ.ನರಸೀಪುರ ಪುರಸಭೆ ಅಧ್ಯಕ್ಷ ಮದನ್‌ರಾಜ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯೇಂದ್ರ ವರುಣಾ ಕ್ಷೇತ್ರಕ್ಕೆ ಬಂದು ಹೋದಾಗಲೆಲ್ಲಾ ಕ್ಷೇತ್ರದಲ್ಲಿ ವಿಷಬೀಜ ಬಿತ್ತಿ ಹೋಗುತ್ತಿದ್ದಾರೆ. ಆದರೆ ಕ್ಷೇತ್ರದ ಜನತೆ ಇದಕ್ಕೆ ಸೊಪ್ಪು ಹಾಕುವುದಿಲ್ಲ. ಏಕೆಂದರೆ, ಈ ಹಿಂದಿನಿಂದಲೂ ಪ್ರತಿ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಕಾಂಗ್ರೆಸ್‌ಗೆ ದೊರೆಯುತ್ತಿರುವ ಮತಗಳ ಪ್ರಮಾಣ ಹೆಚ್ಚುತ್ತಲೇ ಇದೆ ಎಂದರು.

ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರ ಯಾವುದೇ ವಿಶೇಷ ಯೋಜನೆ ನೀಡಿಲ್ಲ. ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಶ್ರಮದಿಂದಲೇ ಅನುದಾನ ಬಿಡುಗಡೆಯಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಆಗಿದೆಯೇ ಹೊರತು ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರದಿಂದ ಯಾವುದೇ ವಿಶೇಷ ಯೋಜನೆ ನೀಡಿಲ್ಲ. ಇದರ ಅರಿವು ಕ್ಷೇತ್ರದ ಮತದಾರರಿಗೆ ಇದೆ ಎಂದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇಲ್ಲಿಂದಲೇ ಸ್ಪರ್ಧಿಸಿದರೆ ಮತ್ತೆ ಸಿಎಂ ಆಗಲಿದ್ದಾರೆಂಬ ಆಕಾಂಕ್ಷೆ ಕ್ಷೇತ್ರದ ಮತದಾರರದ್ದಾಗಿದೆ. ಹೀಗಾಗಿ ಅವರು ಇಲ್ಲಿಂದಲೇ ಸ್ಪರ್ಧಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯರಾದ ಮಂಜುನಾಥ್, ಕಾಂಗ್ರೆಸ್ ಮುಖಂಡ ಮಲ್ಲೇಶ್, ಶ್ರೀಕಂಠ ಉಪಸ್ಥಿತರಿದ್ದರು.

ಭರತನಾಟ್ಯ ವೃತ್ತಿಪರ ಕಲೆಯಾಗಿ ಮಾರ್ಪಡಲಿ

- ಸಂಗೀತ ವಿವಿ ಕುಲಸಚಿವ ಟಿ.ಎಸ್.ದೇವರಾಜ್ ಅಭಿಮತ
- ಸಂಗೀತಗಾರ ವಿದ್ವಾನ್ ಪ್ರೊ.ವಿಶ್ವೇಶ್ವರನ್ ಹಾಗೂ ಭರತನಾಟ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ 'ತರಂಗ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು,ಡಿ.14(ಎಂಟಿವೈ)-ಭಾರತ ಪ್ರದರ್ಶಕ ಕಲೆಗಳ ಆಗರವಾಗಿದ್ದು, ಅವುಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯವುಳ್ಳ ಸಾಹಿತ್ಯ ಲೋಕದ ಮೇಧಾವಿಗಳು ನಮ್ಮಲ್ಲಿರುವುದು ಹೆಮ್ಮೆಯ ಸಂಗತಿ ಎಂದು ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದ ಕುಲಸಚಿವ ಟಿ.ಎಸ್.ದೇವರಾಜ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಆವರಣದಲ್ಲಿ ಸಂಗೀತ ವಿವಿ ಹಾಗೂ ಯುಆರ್‌ಐಎಸ್ಇ ವೇದಿಕ್ ಸಂಗೀತ ಅಕಾಡೆಮಿ ಸಹಯೋಗದೊಂದಿಗೆ ಬುಧವಾರ ನಡೆದ 20ನೇ ವರ್ಷದ 'ತರಂಗ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಪ್ರಮುಖ ಸಾಂಸ್ಕೃತಿಕ ಕಲೆಗಳಲ್ಲಿ ಒಂದಾಗಿರುವ ಭರತನಾಟ್ಯ ಕಲೆ ಕೇವಲ ನಮ್ಮ ದೇಶಕ್ಕೆ ಸೀಮಿತವಾಗಬಾರದು. ಅದು ಪ್ರಪಂಚದಾದ್ಯಂತ ಪಸರಿಸಬೇಕು. ಆಗ ಮಾತ್ರ ಭರತನಾಟ್ಯ ಕಲೆಗೆ ವ್ಯಾಪಕ ಪ್ರಚಾರ ದೊರೆಯಲಿದೆ. ವಿಶ್ವದೆಲ್ಲೆಡೆ ಭರತನಾಟ್ಯವನ್ನು ಒಂದು ವೃತ್ತಿಪರ ಕಲೆಯಾಗಿ ಮಾರ್ಪಡಿಸಬೇಕು. ಆ ಮೂಲಕ ನಮ್ಮ ಸಂಸ್ಕೃತಿಯನ್ನು ಬೆಳೆಸಬೇಕು ಎಂದು ಹೇಳಿದರು.



ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಹಿಂದೂಸ್ತಾನಿ ಸಂಗೀತಗಾರ ವಿದ್ವಾನ್ ಪ್ರೊ.ಆರ್.ವಿಶ್ವೇಶ್ವರನ್ ಹಾಗೂ ಭರತನಾಟ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಅವರಿಗೆ 'ತರಂಗ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಯುಆರ್‌ಐಎಸ್‌ಇ ಸಂಸ್ಥಾಪಕಿ ಮಾ. ಚಿನ್ಮಯಿ ಮಾತನಾಡಿ, ಹಿಂದೂಸ್ಥಾನಿ ಸಂಗೀತದಲ್ಲಿ ಪ್ರೊ.ಆರ್.ವಿಶ್ವೇಶ್ವರನ್ ಹಾಗೂ ಭರತನಾಟ್ಯದಲ್ಲಿ ಡಾ.ವಸುಂಧರಾ ದೊರೆಸ್ವಾಮಿ ಇಬ್ಬರ ಸಾಧನೆ ಅನನ್ಯ. ಈ ಇಬ್ಬರು ತಮ್ಮದೇ ಶೈಲಿಯಲ್ಲಿ ಸಾವಿರಾರು ಮಂದಿಗೆ ಭರತನಾಟ್ಯವನ್ನು ಕಲಿಸುವ ಮೂಲಕ ಈ ಪ್ರದರ್ಶಕ ಕಲೆಯನ್ನು ಗಟ್ಟಿಗೊಳಿಸುತ್ತಿದ್ದಾರೆ. ಕಲೆಯನ್ನು ಉಳಿಸಿ, ಬೆಳೆಸುವವರ ಸಂಖ್ಯೆ ಹೆಚ್ಚಾದರೆ ನಮ್ಮ ಸಂಸ್ಕೃತಿ ಇನ್ನಷ್ಟು ಸದೃಢಗೊಳ್ಳುತ್ತದೆ ಎಂದು ಹೇಳಿದರು. ಇದೇ ವೇಳೆ ಹಿರಿಯ ಹಿಂದೂಸ್ತಾನಿ ಸಂಗೀತಗಾರ ವಿದ್ವಾನ್ ಪ್ರೊ.ಆರ್.ವಿಶ್ವೇಶ್ವರನ್ ಹಾಗೂ ಭರತನಾಟ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ 'ತರಂಗ ರತ್ನ' ಪ್ರಶಸ್ತಿ ಪ್ರದಾನ ಮಾಡಿ, ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಆಚಾರ್ಯ ಅಂಜನಾ ರಮೇಶ್, ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಧನುರ್ಮಾಸ ಪೂಜೆ

ಮೈಸೂರು,ಡಿ.14-ಶ್ರೀ ಸುತ್ತೂರು ಕ್ಷೇತ್ರದಲ್ಲಿ ಧನುರ್ಮಾಸದ ಪ್ರಯುಕ್ತ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಡಿ.16ರಿಂದ ಜ.14ರವರೆಗೆ ಪ್ರತಿದಿನ ಪ್ರಾತಃಕಾಲ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಗುರು ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ಡಿ.17, ಸರ್ಪಸಂಸ್ಕಾರ 18ರಂದು ಆಶ್ಲೇಷಾ ಬಲಿ

ಮೈಸೂರು: ಇಲ್ಲಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.17ರಂದು ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ ಮತ್ತು ಡಿ.18ರ ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ವೈ ಕುಮಾರ್ (ಜಾತಕ ವಿಮರ್ಶಕ)ರನ್ನು ಮೊ. 9845183399. 9342183392 ಮೂಲಕ ಸಂಪರ್ಕಿಸಬಹುದು.

ಯುವ ಬ್ರಿಗೇಡ್‌ನಿಂದ ಸ್ವಚ್ಛಗೊಂಡ ಕಪಿಲಾ ನದಿಗೆ ಆರತಿ

ಸಮಾಜ ಸದೃಢಗೊಳ್ಳಬೇಕಾದರೆ ಜಾತಿ ತೊಲಗಿಸಿ, ಜ್ಯೋತಿ ಬೆಳಗಿಸಿ: ಹುಕ್ಕೇರಿ ಹಿರೇಮಠದ ಸ್ವಾಮೀಜಿ ಸಲಹೆ





ನಂಜನಗೂಡು, ಡಿ.14– ನದಿಯನ್ನು ಹೊಲಸು ಮಾಡದೇ ಸ್ವಚ್ಛ ಮಾಡಿ ಆನಂತರ ಪೂಜೆ ಮಾಡಬೇಕೆಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕು. ಸಮಾಜದ ಆರೋಗ್ಯ ಸದೃಢಗೊಳಿಸುವ ಕೆಲಸ ಆಗಬೇಕಾದರೆ ಜಾತಿಯನ್ನು ಕಿತ್ತೊಗೆದು ಜ್ಯೋತಿಯನ್ನು ಹಚ್ಚೋಣ ಎಂದು ಹುಕ್ಕೇರಿ ಹಿರೇಮಠದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಂಜನಗೂಡಿನಲ್ಲಿ ಯುವ ಬ್ರಿಗೇಡ್ ವತಿಯಿಂದ ಸ್ವಚ್ಛಗೊಂಡ ಕಪಿಲಾ ನದಿಗೆ ಹದಿನಾರು ಮಂಟಪದ ಬಳಿ ಏರ್ಪಡಿಸಿದ್ದ ಕಪಿಲಾ ಆರತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಎದ್ದು ನಿಂತರೆ ಭಾರತ ವಿಶ್ವಗುರು ಆಗುವುದರಲ್ಲಿ ಸಂದೇಹವೇ ಇಲ್ಲ. ಕಪಿಲಾರತಿಯನ್ನು ಕಣ್ತುಂಬಿ ಕೊಳ್ಳಬೇಕೆಂಬ ಆಸೆಯೊಂದಿಗೆ ನಾನೇ ಖುದ್ದು ಹೇಳಿ ದೂರದ ಬೆಳಗಾವಿಯಿಂದ ಬಂದಿದ್ದೇನೆ. ಯುವಕರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಯುವ ಬ್ರಿಗೇಡ್ ತೋರಿಸಿಕೊಟ್ಟಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರೇಹಡಗಲಿ ಶ್ರೀ ಹಾಲಸ್ವಾಮೀಜಿ ಮಹಾಸಂಸ್ಥಾನ ಮಠದ ಅಭಿನವ ಹಾಲ ಸ್ವಾಮೀಜಿ ಮಾತನಾಡಿ, ಸಮಾಜದ ನ್ಯೂನತೆ, ಅಸಂಬದ್ಧ ಮೌಢ್ಯ ಮುಕ್ತ ಮಾಡಿ ನಾವೆಲ್ಲರೂ ಭಾರತೀಯರು ಎಂಬ ಸ್ಪಷ್ಟ ಸಂದೇಶವನ್ನು ಸಾರುವ ವಿಚಾರ ಮುಂದಿಟ್ಟುಕೊಂಡು ಮಾಡುತ್ತಿರುವ ಕಪಿಲಾರತಿ ಆಶಯ ಸಮಾಜಕ್ಕೆ ಮುಟ್ಟಬೇಕು. ಎಲ್ಲರೊಂದಿಗೂ ಪ್ರೀತಿ, ಸಮಾನ ಭಾವ ಮೂಡಿಸುವ ಇಚ್ಛಾಶಕ್ತಿ ಬೇಕಿದೆ. ನಮ್ಮ ನಡವಳಿಕೆ ಸಮಾಜಕ್ಕೆ ಮಾದರಿಯಾಗಿರಬೇಕು. ಜಾತಿ, ಮತ, ಪಂಥ ಮೀರಿದ ಭಾವ ನಮ್ಮನ್ನು ಆವರಿಸಿಕೊಳ್ಳಬೇಕು. ಜಾತಿ, ಅಹಂಕಾರವನ್ನು ಸುಟ್ಟು ಬೂದಿ ಮಾಡಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನಮ್ಮ ಪೂರ್ವಿಕರು ನದಿಗಳ ಪಾವಿತ್ರ್ಯತೆಯನ್ನು ಉಳಿಸಿ ನಮಗೆ ಕೊಡುಗೆಯಾಗಿ ನೀಡಿ ಹೋಗಿದ್ದಾರೆ ಅಂತೆಯೇ ನಾವು ಕೂಡ ಮುಂದಿನ ಪೀಳಿಗೆಗೆ ಸಂರಕ್ಷಣೆ ಮಾಡಿಕೊಟ್ಟು ಹೋಗಬೇಕಾದ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಸಪ್ತಸಿಂಧುಗಳ ಮೂಲಕ ನಮ್ಮ ನಾಗರಿಕತೆ ಜನ್ಮ ತಳೆದಿದೆ. ಭರತನ ಆಳ್ವಿಕೆಯಿಂದ ನಮ್ಮ ಪರಂಪರೆ ಮೂಡಿಬಂದಿದೆ. ಉತ್ತರ ಭಾರತದಲ್ಲಿ ಗಂಗಾ ನದಿಗೆ ಹೇಗೆ ಪಾವಿತ್ರ್ಯತೆ, ಭಕ್ತಿಭಾವವಿದೆಯೋ ಹಾಗೇ ದಕ್ಷಿಣ ಭಾರತದಲ್ಲಿ ಕಾವೇರಿ, ಕಪಿಲ ನದಿಗೆ ಇದೆ. ನಮ್ಮ ಪೂರ್ವಿಕರು ನದಿಗಳ ಪಾವಿತ್ರ್ಯತೆಯನ್ನು ಉಳಿಸಿ ನಮಗೆ ಕೊಡುಗೆಯಾಗಿ ನೀಡಿ ಹೋಗಿದ್ದಾರೆ. ಅಂತೆಯೇ ನಾವು ಕೂಡ ಮುಂದಿನ ಪೀಳಿಗೆಗೆ ಸಂರಕ್ಷಣೆ ಮಾಡಿಕೊಟ್ಟು ಹೋಗಬೇಕು ಎಂದರು.

ನಮ್ಮಲ್ಲಿರುವ ಅಜ್ಞಾನ, ಅಂಧಕಾರ ದೂರ ಮಾಡಿ ಬೆಳಕು ಮೂಡಬೇಕೆಂಬ ಆಶಯದೊಂದಿಗೆ ದೀಪವನ್ನು ಹೊತ್ತಿಸುತ್ತೇವೆ. ನಮ್ಮಲ್ಲಿ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಣೆ ಮಾಡಬೇಕೆಂಬ ಜ್ಞಾನದ ಬೆಳಕು ಮೂಡಿದಾಗ ಮಾತ್ರ ಬಮ್ಮ ಬದುಕಿಗೆ ಒಂದು ಅರ್ಥ ಬರುತ್ತದೆ. ಈ ದಿಶೆಯಲ್ಲಿ ನದಿ, ಕೆರೆ ಕಟ್ಟೆ, ಕಲ್ಯಾಣಿಗಳ ರಕ್ಷಣೆಗೆ ನಿಂತಿರುವ ಯುವ ಬ್ರಿಗೇಡ್ ತಂಡ ಮಾದರಿಯಾಗಿದೆ ಎಂದು ಪ್ರಶಂಸಿಸಿದರು.

ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ನೀರಿನ ಟ್ಯಾಂಕ್ ಮುಟ್ಟಿದ ಕಾರಣಕ್ಕೆ ಅಲ್ಲಿನ ಪೂರ್ತಿ ನೀರು ಖಾಲಿ ಮಾಡುತ್ತಾರೆ. ಆದರೆ ಎಲ್ಲಾ ಜಾತಿಯವರು ನದಿಯಲ್ಲಿ ನೀರು ಮುಟ್ಟುತ್ತಾರೆ. ನದಿ ನೀರನ್ನು ಪೂರ್ತಿ ಖಾಲಿ ಮಾಡಲು ಸಾಧ್ಯವೇ. ಹಾಗಾಗಿ ನಾವೆಲ್ಲರೂ ಜಾತಿ, ಮತ ಬಿಟ್ಟು ಭಾರತ ಕಟ್ಟೋಣ. ನದಿ ಉಳಿದರೆ ನಾವು ಉಳಿಯುತ್ತೇವೆ. ಕಪಿಲ ನದಿ ಉಳಿದರೆ ನಂಜುಂಡೇಶ್ವರನೂ ಉಳಿಯುತ್ತಾನೆ. ಹಾಗಾಗಿ ನಾವೆಲ್ಲರೂ ಕಪಿಲ ನದಿಯನ್ನು ಉಳಿಸಬೇಕಿದೆ. ಕಪಿಲೆಯನ್ನು ಶುದ್ಧವಾಗಿಡುವ ಕೆಲಸ ಮಾಡೋಣ. ಕಪಿಲಾರತಿ ಸಂಘಟನೆಯ ವೈಭವ ಅಲ್ಲ. ಜಾಗೃತಿ ಮೂಡಿಸುವ ಕೆಲಸ ಎಂಬುದು ಎಲ್ಲರ ಮನಸ್ಸಿನಲ್ಲಿ ಉಳಿದರೆ ನಮ್ಮ ಶ್ರಮ ಸಾರ್ಥಕವಾದಂತೆ ಎಂದರು.

ಕಣ್ತುಂಬಿಕೊಂಡ ಜನಸಾಗರ: ಮೊದಲಿಗೆ ಹದಿನಾರು ಕಾಲು ಮಂಟಪದಲ್ಲಿ ಇರಿಸಲಾಗಿದ್ದ ಶಿವಲಿಂಗಕ್ಕೆ ಪೂಜೆ ನಡೆಸಲಾಯಿತು. ಸಂಜೆ 8 ಗಂಟೆ ವೇಳೆಗೆ ಮೈಸೂರಿನ ಮಹಾರಾಜ ಯದುವೀರ ಒಡೆಯರ್, ಚಕ್ರವರ್ತಿ ಸೂಲಿಬೆಲೆ, ಹುಕ್ಕೇರಿ ಹಿರೇಮಠದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕಪಿಲಾ ನದಿಯ ಮಧ್ಯದಲ್ಲಿ ಸ್ಥಾಪಿಸಲಾಗಿದ್ದ ವೇದಿಕೆಗೆ ತೆರಳಿ ಕಪಿಲಾ ಆರತಿಗೆ ಚಾಲನೆ ನೀಡಿದರು. ಪುರೋಹಿತ ಕೃಷ್ಣ ಜೋಯಿಸ್ ನೇತೃತ್ವದ ತಂಡ ಕಪಿಲಾರತಿ ಬೆಳಗಿಸಿದರು. ನೆರೆದಿದ್ದ ಭಕ್ತರೇ ದೀಪವನ್ನು ಬೆಳಗಿಸುವ ಮೂಲಕ ಭಕ್ತಿಭಾವ ಮೆರೆದರು. ಅಲ್ಲದೆ ವಿಶೇಷವಾಗಿ ನದಿಯ ಎರಡೂ ದಡೆಯಲ್ಲಿ ಹೆಜ್ಜಿಗೆ ಸೇತುವೆ ಬಳಿಯಲ್ಲಿ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಕಪಿಲಾರತಿ ಹಾಗೂ ಲಕ್ಷ ದೀಪೋತ್ಸವವನ್ನು ಸಾವಿರಾರು ಭಕ್ತರು ಕಪಿಲ ಸ್ನಾನ ಘಟ್ಟದಲ್ಲಿ ನೆರೆದು ಕಣ್ತುಂಬಿಕೊಂಡರು.

ಹುಲಿ ದಾಳಿ: ರೈತ ಕುಟುಂಬಕ್ಕೆ ನೆರವು

ಮಲ್ಕುಂಡಿ, ಡಿ.14– ನಂಜನಗೂಡು ತಾಲೂಕಿನ ಬಳ್ಳೂರುಹುಂಡಿ ಗ್ರಾಮದ ರೈತ ಸ್ವಾಮಿದಾಸ್ (೦೨) ಎಂಬಾತನ ಮೇಲೆ ಹುಲಿ ದಾಳಿ ಮಾಡಿ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಬುಧವಾರ ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್. ಧ್ರುವನಾರಾಯಣ್ ಭೇಟಿ ನೀಡಿ, ಗಾಯಾಳು ಕುಟುಂಬಕ್ಕೆ ಧೈರ್ಯ ಹೇಳಿ ವೈಯಕ್ತಿಕ ಧನ ಸಹಾಯ ನೀಡಿದರು.



ಬಳಿಕ ಮಾತನಾಡಿದ ಅವರು, ಕಾಡಂಚಿನ ಗ್ರಾಮವಾದ ಬಳ್ಳೂರುಹುಂಡಿ ಗ್ರಾಮದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ಸರ್ಕಾರ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಸಂಪೂರ್ಣ ವಿಫಲವಾಗಿದೆ. ಸರ್ಕಾರ ಎಚ್ಚೆತ್ತುಕೊಂಡು ಕಾಡುಪ್ರಾಣಿಗಳ ಹಾವಳಿ ತಪ್ಪಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಗಾಯಾಳುಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದಲ್ಲದೆ ಅರಣ್ಯ ಅಧಿಕಾರಿಗಳಿಗೆ ಕರೆ ಮಾಡಿ ಕುಟುಂಬದ ವ್ಯಕ್ತಿಯೊಬ್ಬರಿಗೆ ಇಲಾಖೆಯಲ್ಲಿ ಉದ್ಯೋಗ ನೀಡಬೇಕೆಂದು ಆಗ್ರಹಿಸಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ ಹಾಗೂ ಇತರರು ಹಾಜರಿದ್ದರು.

ಭಾರೀ ಮಳೆಗೆ ಕೋಟೆ ಸಮೀಪದ ಸೇತುವೆ ಮುಳುಗಡೆ

ಹೆಚ್.ಡಿ. ಕೋಟೆ, ಡಿ.14– ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಪಟ್ಟಣದ ಸಮೀಪವಿರುವ ಹೊಸ ತೊರವಳ್ಳಿ ಸೇತುವೆ ಸಂಪೂರ್ಣ ಮುಳುಗಡೆಯಾಗಿದ್ದು, ಗ್ರಾಮಸ್ಥರು, ವಾಹನ ಸವಾರರು ಪರದಾಡುವಂತಾಗಿದೆ.



ಮಳೆಯಿಂದ ಹೆಬ್ಬಳ್ಳಕ್ಕೆ ಲಕ್ಷ್ಮಣತೀರ್ಥ ನದಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ಈ ಅವಾಂತರವಾಗಿದ್ದು, ಬಳಗನಹಳ್ಳಿ, ಹೊಸ ತೊರವಳ್ಳಿ ಗ್ರಾಮಸ್ಥರು ರಸ್ತೆ ಸಂಪರ್ಕ ಕಡಿದುಕೊಂಡು ಓಡಾಡಲು ಪರದಾಡಬೇಕಾಗಿದೆ.

ವರ್ಷದಲ್ಲಿ ಏಳನೇ ಬಾರಿ ಈ ಸೇತುವೆ ಮುಳುಗಡೆಯಾಗಿದೆ. ಪ್ರಯಾಣಿಕರು ಈ ಮಾರ್ಗದಲ್ಲಿ ಸಂಚರಿಸಲು ತೊಂದರೆ ಉಂಟಾಗುತ್ತಿದ್ದು, ಆದಷ್ಟು ಬೇಗ ಎತ್ತರವಾದ ಸೇತುವೆ ನಿರ್ಮಿಸಬೇಕು ಎಂದು ಎಷ್ಟೇ ಮನವಿ ಮಾಡಿದರೂ, ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಇತ್ತ ತಿರುಗಿ ನೋಡಿಲ್ಲ ಎಂದು ಬೆಳಗನಹಳ್ಳಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀರಿನ ಪ್ರವಾಹ ಹೆಚ್ಚಾದ ಹಿನ್ನೆಲೆಯಲ್ಲಿ ಸೇತುವೆ ಅಕ್ಕ-ಪಕ್ಕ ರಸ್ತೆ ಅತಿ ಹೆಚ್ಚು ಗುಂಡಿ ಬೀಳುತ್ತಿರುವ ಹಿನ್ನೆಲೆಯಲ್ಲಿ ಸೇತುವೆ ಅಪಾಯದ ಸ್ಥಿತಿಯಲ್ಲಿದೆ. ಸೇತುವೆ ಮೇಲೆ ಭಾರೀ ವಾಹನಗಳು ಸಂಚರಿಸುವುದರಿಂದ ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಸೇತುವೆ ಮೇಲೆ 2ರಿಂದ 3 ಅಡಿ ನೀರು ಹರಿಯುತ್ತಿದ್ದರೂ ಸಹ ವಾಹನ ಸವಾರರು ಇದನ್ನು ಲೆಕ್ಕಿಸದೆ ಸಂಚರಿಸಿದರು. ಮಂಗಳವಾರ ಸಂಜೆಯೂ ತಾಲೂಕಿನ ವಿವಿಧೆಡೆ ವರ್ಷಧಾರೆಯಾಗಿದ್ದು, ನೀರಿನ ಹರಿವು ಹೆಚ್ಚಾಗಿದೆ.

ಆರು ತಿಂಗಳಿಂದಲೂ ನದಿಗೆ ನೀರು: ಹೆಬ್ಬಳ್ಳ ಜಲಾಶಯವು ಮೇ 18ರಂದು ಭರ್ತಿಯಾಗಿತ್ತು. ಅಂದು ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಂದಿದ್ದರಿಂದ ಒಮ್ಮೆಲೇ ತುಂಬಿ, ಅದೇ ದಿನ ಸೇತುವೆ ಮೇಲೆ ನೀರು ಹರಿಯಲಾರಂಭಿಸಿ ಎರಡು ದಿನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಅಂದಿನಿಂದ ಇಂದಿನವರೆಗೂ ಜಲಾಶಯದಿಂದ ನೀರು ಹರಿಯುತ್ತಲೇ ಇದೆ. ಇದೇ ಮೊದಲ ಬಾರಿಗೆ ಇಷ್ಟು ಸುದೀರ್ಘ ಅವಧಿ ನೀರು ಹರಿದಿದೆ ಎಂದು ಜಲಾಶಯದ ಅಧಿಕಾರಿಗಳು ತಿಳಿಸಿದ್ದಾರೆ.

ಬೀರೇಶ್ವರ ದೇವಾಲಯದ ಸೇತುವೆಯೂ ಸಹ ಮುಳುಗಡೆಯಾಗಿದೆ. ಈ ಸೇತುವೆಯ ಮೇಲೂ ಪ್ರಯಾಣಿಕರು ಪ್ರಾಣದ ಹಂಗು ತೊರೆದು ಸಂಚರಿಸುತ್ತಿದ್ದಾರೆ. ಎರಡು ದಿನದ ವರ್ಷಧಾರೆಗೆ ಹಲವು ರೈತರ ಜಮೀನಿಗೂ ನೀರು ನುಗ್ಗಿದ್ದು, ಬೆಳೆ ಹಾನಿಯಾಗಿದೆ.

ಭಕ್ತರಿಂದಲೇ ವೀರಗಲ್ಲೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ



ಮೂಗೂರು, ಡಿ.14– ಅನಾದಿ ಕಾಲದಿಂದಲೂ ಅನಾಥವಾಗಿ ಮುಳ್ಳಿನ ಪೊದೆ ಗಿಡಗಂಟಿ ನಡುವೆ ಇದ್ದ (ವೀರಗಲ್ಲೇಶ್ವರ ಸ್ವಾಮಿ) ದೇವಾಲಯಕ್ಕೆ ಭಕ್ತರಿಂದ ಜೀರ್ಣೋದ್ಧಾರ ಕಾರ್ಯ ನೆರವೇರಿತು.

ಮೂಗೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ಬಳಿ ಇರುವ ಪ್ರಾಚೀನ ಕಾಲದ ವೀರಗಲ್ಲು ಹಾಗೂ ಇತರೆ ದೇವರ ಕಲ್ಲಿನ ವಿಗ್ರಹಗಳಿಗೆ ಸಂರಕ್ಷಣೆ ಇಲ್ಲವಾಗಿದ್ದು, ಕಲ್ಲಿನ ವಿಗ್ರಹಗಳು ಸೇರಿದಂತೆ ಅಳಿವಿನಂಚಿನಲ್ಲಿದ್ದ ಈ ದೇವಾಲಯವನ್ನು ದೇವರ ಒಕ್ಕಲಿನ ಅಕ್ಕೂರು ದೊಡ್ಡಿ, ಹುಲ್ಲಂಬಳಿ, ತಿರುಮಕೂಡಲು, ಆಲಗೂಡು, ಕಾಳಬಸವನ ಹುಂಡಿ, ಗ್ರಾಮಸ್ಥರ ಸಮುದಾಯದ ಮುಖಂಡರು ದಾನಿಗಳ ನೆರವಿನಿಂದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡು ಸ್ಥಳೀಯ ಮುಖಂಡರ ನೇತೃತ್ವದಲ್ಲಿ ಲೋಕಾರ್ಪಣೆ ಮಾಡಿದರು.

ವೀರಗಲ್ಲೇಶ್ವರ ಸ್ವಾಮಿ ಸೇವಾ ಸಮಿತಿಯ ಗ್ರಾಮಸ್ಥರಿಂದ ಅನ್ನಸಂತರ್ಪಣೆ ನಡೆಯಿತು.

ಈ ಸಂದರ್ಭದಲ್ಲಿ ಜಗದೀಶ್, ಸಿದ್ದನಾಯ್ಕ, ಶಂಕರ್, ಮಹದೇವನಾಯ್ಕ, ನಂಜುಂಡನಾಯ್ಕ, ಪುಟ್ಟಮಾದು, ದೊಡ್ಡಸಿದ್ದನಾಯ್ಕ, ಎಂ.ಎಂ. ಜಯಣ್ಣ, ಎಂ.ಪಿ.ಮರಿಸ್ವಾಮಿ, ರಮೇಶ್ ನಾಯಕ್ ಇತರರು ಉಪಸ್ಥಿತರಿದ್ದರು.

ಕೊಳೆತ ಸ್ಥಿತಿಯಲ್ಲಿ ಗಂಡಸಿನ ಶವ ಪತ್ತೆ

ಬನ್ನೂರು, ಡಿ.14– ಪಟ್ಟಣದ ಸಮೀಪದ ರಂಗನಾಥಪುರ ಗ್ರಾಮದ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಪಕ್ಕದ ನೀರಿನ ಹೊಂಡದಲ್ಲಿ ಸುಮಾರು 25 ರಿಂದ 30 ವರ್ಷ ವಯಸ್ಸಿನ ಗಂಡಸಿನ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಶವದ ಮುಖ ಹಾಗೂ ಇತರ ಭಾಗಗಳನ್ನು ಜಲಚರ ಪ್ರಾಣಿಗಳು ತಿಂದಿದ್ದು ಗುರುತು ಸಿಗದಂತಾಗಿದೆ. ಈತನನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ, ನೀರಿನ ಹೊಂಡದಲ್ಲಿ ಎಸೆದಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ. ವಾರಸುದಾರರು ಯಾರಾದರು ಇದ್ದರೆ, ಬನ್ನೂರು ಪೊಲೀಸ್ ಠಾಣೆಗೆ ಸಂಪರ್ಕಿಸಲು ಕೋರಿದೆ. ಬಲಗೈಯಲ್ಲಿ ರಾಜಿ, ಕುಮಾರ, ರುಕಿ ಎಂದು ಅಚ್ಚೆ ಗುರುತು ಇದೆ. ಕಪ್ಪು ಮುಖ ಕುರುಚಲು ಗಡ್ಡ ಬಿಟ್ಟಿರುತ್ತಾರೆ.

ಬ್ಯಾರನ್ ಕುಸಿತ

ಹುಣಸೂರು,ಡಿ.14– ತಾಲೂಕಿನಲ್ಲಿ ಕಳೆದ ಕೆಲವು ದಿನಗಳಿಂದ ಮಳೆ ಸುರಿಯುತ್ತಿದ್ದು, ತಾಲೂಕಿನ ಮೋದೂರು ಪಿ.ಕೊಪ್ಪಲು ಗ್ರಾಮದ ಸಿದ್ದೇಗೌಡರಿಗೆ ಸೇರಿದ ತಂಬಾಕು ಹದ ಮಾಡುವ ಬ್ಯಾರನ್‌ವೊಂದು ಕುಸಿದು ಬಿದ್ದಿದೆ.

ಸಕಾಲದಲ್ಲಿ ಸಾಲ ಮರುಪಾವತಿಸಿ: ಜಿಡಿಹೆಚ್



ಹುಣಸೂರು, ಡಿ.14– ಡಿಸಿಸಿ ಬ್ಯಾಂಕಿನಿಂದ ಪಡೆದುಕೊಳ್ಳುವ ಸಾಲವನ್ನು ರೈತರು ನಿಗದಿತ ಸಮಯದಲ್ಲಿ ಮರುಪಾವತಿ ಮಾಡುವ ಮೂಲಕ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ ಮನವಿ ಮಾಡಿದರು.

ತಾಲೂಕಿನ ಗುರುಪುರ ವ್ಯವಸಾಯ ಸೇವಾ ಸಹಕಾರ ಸಂಘದ ಆವರಣದಲ್ಲಿ ಡಿಸಿಸಿ ಬ್ಯಾಂಕ್ ವತಿಯಿಂದ 134 ರೈತರಿಗೆ ಸಾಲ ವಿತರಿಸಿ, ಅವರು ಮಾತನಾಡಿದರು.

ತಾಲೂಕಿನಲ್ಲಿ ವಸೂಲಾತಿ ಶೇ.100ರಷ್ಟಿದ್ದು, ಸುಮಾರು 36 ಕೋಟಿ ಠೇವಣಿ ಸಹ ನಮ್ಮ ಬ್ಯಾಂಕಿನಲ್ಲಿ ಇಡಲಾಗಿದೆ. ಇದರಿಂದ ವರ್ಷಕ್ಕೆ ಸುಮಾರು ಎರಡೂವರೆ ಕೋಟಿ ಬಡ್ಡಿ ಸಹ ಬರುತ್ತಿದ್ದು, ಬರುವ ಬಡ್ಡಿಯಲ್ಲಿ ಈಗಾಗಲೇ ಶಾಪಿಂಗ್ ಮಾಲ್, ಪೆಟ್ರೋಲ್ ಬಂಕ್ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು

ಡಿಸಿಸಿ ಬ್ಯಾಂಕ್ ಕೇವಲ ಮಹಿಳೆಯರಿಗಷ್ಟೆ ಅಲ್ಲದೆ ರೈತರ ಕೃಷಿ ಉದ್ದೇಶಗಳಿಗೂ ಸಾಲ ನೀಡುತ್ತಿದೆ. ಪಡೆದುಕೊಂಡ ಸಾಲವನ್ನು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಲು ರೈತರಿಗೆ ಬದ್ಧತೆ ಬೇಕು. ರೈತರು ಹಾಗೂ ಮಹಿಳಾ ಸಂಘಗಳ ಪದಾಧಿಕಾರಿಗಳು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ವ್ಯವಹರಿಸುವುದರ ಬದಲಿಗೆ ಸಹಕಾರಿ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಬೇಕು ಎಂದು ತಿಳಿಸಿದರು.

ಉದ್ದೇಶಿತ ಯೋಜನೆಗೆ ಸಾಲ ಉಪಯೋಗವಾಗಬೇಕು. ರೈತರು ಸಾಲ ಪಡೆದುಕೊಂಡು ಅದರಿಂದ ಆರ್ಥಿಕ ಅಭಿವೃದ್ಧಿ ಹೊಂದುವ ಕಡೆಗೆ ಗಮನಹರಿಸಬೇಕು ಎಂದು ತಿಳಿಸಿದರು. ಇದೆ ಸಂದರ್ಭದಲ್ಲಿ ಟಿಬೇಟ್ ವ್ಯವಸಾಯ ಸೇವಾ ಸಹಕಾರ ಸಂಘದ ವತಿಯಿಂದ ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.

ಸೋಲಿಸಿದರೂ ನಿಮ್ಮ ಮೇಲಿನ ಗೌರವ ಕಮ್ಮಿಯಾಗಿಲ್ಲ

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ



ತಿ.ನರಸೀಪುರ, ಡಿ.14– ಕಳೆದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕ್ಷೇತ್ರದ ಜನ ಕೊಟ್ಟಿದ್ದ ಅಧಿಕಾರವನ್ನು ಜನರ ಬದುಕನ್ನು ಹಸನಾಗಿಸಲು, ಹಳ್ಳಿಗಳ ಅಭಿವೃದ್ಧಿಗೆ ಸಂಪೂರ್ಣವಾಗಿ ಬಳಕೆ ಮಾಡಿದ್ದೇನೆಯೇ ಹೊರತು ಓಟ್ ಹಾಕಿದ್ದರಾ, ಯಾವ ಜಾತಿ-ಧರ್ಮದವರ ಎಂಬ ತಾತ್ಸಾರ ಭಾವನೆಯಿಂದ ನೋಡಿಯೇ ಇಲ್ಲ. ಸೋಲಿಸಿದರೆಂದು ಜನರ ಮೇಲಿರುವ ಗೌರವ ಕಮ್ಮಿಯಾಗಿಲ್ಲ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ನಡೆದ ಪಂಚಾಯಿತಿ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದರೆ ರೈತಾಪಿ ವರ್ಗ ಮತ್ತು ಬಡ ಜನರು ಗ್ರಾಮಗಳಲ್ಲಿ ನೆಮ್ಮದಿಯಿಂದ ಜೀವನ ನಡೆಸುವಂತಾಗಲಿ ಎಂಬ ಉದ್ದೇಶದಿಂದಲೇ ಶಾಸಕನಾಗಿದ್ದಾಗ ನಾಲೆಗಳ ಸರ್ವೇ ನಡೆಸಿ, ಸಚಿವರಾದ ಬಳಿಕ ಆಧುನೀಕರಣಕ್ಕೆ ಹಣವನ್ನು ಮಂಜೂರು ಮಾಡಿದ್ದೆ ಎಂದರು.

ಮೊದಲ ಬಾರಿಗೆ ಸಚಿವ ಆಗಿದ್ದಾಗಲೇ ನರಸೀಪುರ ಸಾರ್ವಜನಿಕ ಆಸ್ಪತ್ರೆಯನ್ನು ನಿರ್ಮಾಣ ಮಾಡಿ, ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಉನ್ನತೀಕರಣಗೊಳಿಸಿ, ಹೊರ ರೋಗಿಗಳ ವಿಭಾಗಕ್ಕೆ ಪ್ರತ್ಯೇಕ ಕಟ್ಟಡವನ್ನು ಕಲ್ಪಿಸಿ, ಎಲ್ಲಾ ವೈದ್ಯಕೀಯ ವಿಭಾಗಗಳಿಗೂ ನುರಿತ ವೈದ್ಯರನ್ನು ನಿಯೋಜಿಸಲಾಯಿತು. ಹೆಣ್ಣು ಮಕ್ಕಳ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ವಸತಿ ಶಾಲೆ, ಪ್ರಥಮ ದರ್ಜೆ ಕಾಲೇಜುಗಳಿಗೆ ಭವ್ಯವಾದ ಕಟ್ಟಡಗಳು, ಕೌಸಲ್ಯ ಶಿಕ್ಷಣ ನೀಡಲು ತಲಕಾಡು ಗ್ರಾಮದಲ್ಲಿ ಐಟಿಐ ಕಾಲೇಜು ಆರಂಭಿಸಲಾಗಿತ್ತು. ಇವೆಲ್ಲವನ್ನೂ ಯಾರೂ ಕೂಡ ಕೇಳದಿದ್ದರೂ ಜನರಿಗಾಗಿಯೇ ಮಾಡಿದ್ದೇವೆ ಎಂದು ಜನಪರ ಕೆಲಸವನ್ನು ತೆರೆದಿಟ್ಟರು.

ಯಾವುದೇ ಸರ್ಕಾರದ ಅವಧಿಯಲ್ಲಿ ಆಗಿನ ಶಾಸಕ ಅಥವಾ ಜನಪ್ರತಿನಿಧಿ ಮಾಡಿದ್ದ ಅಭಿವೃದ್ಧಿಯನ್ನು ನಾನಂತೂ ಹೇಳಿಕೊಂಡಿದ್ದೇನೆ. ಕಾಂಗ್ರೆಸ್ ಸರ್ಕಾರದಿಂದ ಕ್ಷೇತ್ರಕ್ಕೆ ಸಾವಿರಾರು ಕೋಟಿ ರೂ.ಗಳ ಅನುದಾನ ಮಂಜೂರು ಮಾಡಿದ್ದರೂ ಈಗಿನ ಶಾಸಕ ಕಮಿಷನ್ ಆಸೆಗೆ ಸತ್ಯವನ್ನು ಹೇಳುತ್ತಿಲ್ಲ. ನಾವು ತಂದಿದ್ದ ಅನುದಾನದಲ್ಲಿ ಭೂಮಿ ಪೂಜೆ ಮಾಡ್ಕಂಡು ಸಿಕ್ಕಿದಷ್ಟನ್ನು ಎಲಕೊಟ್ಟಿ ಹಾಕಂಡು ಕೆರೇಕತ್ತಾವನೆ ಎಂದು ಟೀಕಿಸಿದರು. ಚಿಕ್ಕೂವಳ್ಳಿಯಂತಹ ಕುಗ್ರಾಮವನ್ನೂ ಪಟ್ಟಣಗಳಂತೆ ಅಭಿವೃದ್ಧಿ ಮಾಡಿದ್ದಾಗಿಯೂ ಅಲ್ಲಿನ ನಿವಾಸಿಗಳು ನಮ್ಮನ್ನೇ ಬೆಂಬಲಿಸದಿರುವ ಬಗ್ಗೆಯೂ ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ವಸತಿ ಯೋಜನೆ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಡೇರಿ ಉಪಾಧ್ಯಕ್ಷ ಬಿ.ಜಿ.ರಮೇಶನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚನ್ನಕೇಶವ, ಎಂ.ಡಿ. ಬಸವರಾಜು, ಪುರಸಭೆ ಪ್ರಭಾರ ಅಧ್ಯಕ್ಷೆ ನಾಗರತ್ನ ಮಾದೇಶ್, ಎಸ್‌ಸಿ, ಎಸ್‌ಟಿ ಹಿತ ರಕ್ಷಣಾ ಸಮಿತಿಯ ಸದಸ್ಯ ಸೋಸಲೆ ಮಹದೇವಸ್ವಾಮಿ, ಮುಖಂಡರಾದ ಗಂಗಾಧರ್, ಜಯರಾಮು, ರವಿಶಂಕರ್, ಬಿ.ಎಂ.ಶಿವಶಂಕರಮೂರ್ತಿ, ಕಂಡಕ್ಟರ್ ಮರಿಸ್ವಾಮಿ, ಶಿವರುದ್ರಪ್ಪ ನಿರಂಜನ್, ಶಿವಸ್ವಾಮಿ, ಯೋಗೇಶ್ ಕುಮಾರ್, ಹಸುವಟ್ಟಿ ಆನಂದ, ಬಸವರಾಜು ಹಾಗೂ ಇನ್ನಿತರರು ಹಾಜರಿದ್ದರು.

ಪುರಸಭಾ ಸದಸ್ಯ ಮಿಲ್ ನಾಗರಾಜು ಉಪವಾಸ ಅಂತ್ಯ

ತಹಸೀಲ್ದಾರ್ ಮನವೊಲಿಕೆಗೆ ಸಮ್ಮತಿ

ಹೆಚ್.ಡಿ.ಕೋಟೆ, ಡಿ.14– ಪುರಸಭೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿ ಪುರಸಭೆಯ ಸದಸ್ಯ ಮಿಲ್ ನಾಗರಾಜು ಕಳೆದ ಮೂರು ದಿನಗಳಿಂದ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹ ಬುಧವಾರ ಅಂತ್ಯಗೊಂಡಿದೆ.




12 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದ ನಾಗರಾಜು ಅವರನ್ನು ಸತ್ಯಾಗ್ರಹದ ಸ್ಥಳದಲ್ಲಿ ತಹಸಿಲ್ದಾರ್ ರತ್ನಾಂಬಿಕಾ ಅವರು ಭೇಟಿ ಮಾಡಿ ನಿಮ್ಮ ಬೇಡಿಕೆಗಳನ್ನು ಬೆಂಗಳೂರು ಪೌರಾಡಳಿತ ಇಲಾಖೆ ಅಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳ ಗಮನಕ್ಕೆ ತರಲಾಗುವುದು. ನಿಮಗೆ ಖಂಡಿತ ನ್ಯಾಯ ಸಿಗಲಿದೆ. ನಿಮ್ಮ ಈ ಹೋರಾಟಕ್ಕೆ ತಕ್ಕ ಪ್ರತಿಫಲ ಲಭಿಸಲಿದೆ ಎಂದು ತಿಳಿಸಿದರು. ನಂತರ ಉಪವಾಸನಿರತ ಪುರಸಭಾ ಸದಸ್ಯ ನಾಗರಾಜು ಅವರಿಗೆ ಎಳನೀರು ನೀಡುವುದರ ಮುಖಾಂತರ ಉಪವಾಸವನ್ನು ಅಂತ್ಯಗೊಳಿಸಿದರು.

ಈ ವೇಳೆ ನಾಗರಾಜು ಮಾತನಾಡಿ, ಪುರಸಭೆಯಲ್ಲಿ ನಡೆದಿರುವ ಎಲ್ಲಾ ಅವ್ಯವಹಾರಗಳ ಬಗ್ಗೆ ಈ ಹಿಂದೆಯೂ ಸಹ ಜಿಲ್ಲಾ ಮತ್ತು ರಾಜ್ಯಮಟ್ಟದ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಇದರಿಂದ ಕೇವಲ ತನಿಖೆ ನಡೆಯುತ್ತಿದೆಯೇ ಹೊರತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲದ ಕಾರಣ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳಲಾಗಿತ್ತು. ಈ ದಿನ ತಹಸಿಲ್ದಾರ್ ರತ್ನಂಬಿಕಾ ಅವರು ನಮಗೆ ನ್ಯಾಯ ದೊರಕಿಸಿ ಕೊಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ನನ್ನ ಈ ಉಪವಾಸ ಸತ್ಯಾಗ್ರಹಕ್ಕೆ ಸಂಪೂರ್ಣ ಸಹಕಾರ ನೀಡಿದ ಪುರಸಭಾ ವ್ಯಾಪ್ತಿಯ ನಾಗರಿಕರಿಗೆ ತಾಲೂಕಿನ ಎಲ್ಲ ಸಂಘ–ಸಂಸ್ಥೆ ಪದಾಧಿಕಾರಿಗಳಿಗೆ ನಾನು ಕೃತಜ್ಞನಾಗಿರುತ್ತೇನೆ ಎಂದು ತಿಳಿಸಿದರು. ನನ್ನ ಈ ಹೋರಾಟಕ್ಕೆ ರಾಜ್ಯದ ಪೌರಾಡಳಿತ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸದೆ ಇದ್ದರೆ ಮುಂದಿನ 15 ದಿನಗಳ ನಂತರ ಬೆಂಗಳೂರಿನ ಪೌರಾಡಳಿತ ಇಲಾಖೆಯ ಮುಂಭಾಗ ಉಪವಾಸ ಸತ್ಯಾಗ್ರಹವನ್ನು ಮತ್ತೆ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಎಲ್.ಎನ್.ಶಿವಯೋಗಿ ನಿಧನ



ನಂಜನಗೂಡು, ಡಿ.14– ಮಾಜಿ ಶಾಸಕ ದಿವಂಗತ ಹೆಜ್ಜಿಗೆ ಲಿಂಗಣ್ಣ ಅವರ ಪುತ್ರ ಎಲ್.ಎನ್.ಶಿವಯೋಗಿ(72) ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು.

ಮೃತರು ತಾಯಿ, ಪತ್ನಿ ಹಾಗೂ ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಡಿ.15ರಂದು ಗುರುವಾರ ಹೆಜ್ಜಿಗೆ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್.ಎನ್.ಶಿವಯೋಗಿರವರು 1999ರಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ರಾಮಕೃಷ್ಣ ಹೆಗಡೆ ನೇತೃತ್ವದ ಸಂಯುಕ್ತ ಜನತಾದಳದಿಂದ ಸ್ಪರ್ಧಿಸಿ 23700 ಮತಗಳನ್ನು ಪಡೆದಿದ್ದರು. ಅಲ್ಲದೆ ಜಿಲ್ಲಾ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷರಾಗಿ, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಶಾಸಕ ಬಿ.ಹರ್ಷವರ್ಧನ್, ಮಾಜಿ ಸಂಸದ ಆರ್.ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಎನ್.ಸಿ.ಬಸವಣ್ಣ ಅಂತಿಮ ದರ್ಶನ ಪಡೆದು ಶಿವಯೋಗಿ ಅವರ ನಿಧನಕ್ಕೆ ಸಂತಾಪ ಸೂಚಿಸಿದರು.

ವಲಸೆ ತಡೆಗೆ { ಸಂಪುಟ ವಿಸ್ತರಣೆ ಇಲ್ಲವೇ ಪುನಾರಚನೆ

- ಗೃಹ ಸಚಿವ ಅಮಿತ್ ಷಾ ಬಳಿ ಪ್ರಸ್ತಾಪಿಸಿದ ಸಿಎಂ ಬೊಮ್ಮಾಯಿ
- ರಮೇಶ್ ಜಾರಕಿಹೊಳಿ, ಈಶ್ವರಪ್ಪ ಸಂಪುಟ ಸೇರ್ಪಡೆ ಸಾಧ್ಯತೆ

ಬೆಂಗಳೂರು, ಡಿ.14(ಕೆಎಂಶಿ)–ವಿಧಾನ ಸಭಾ ಚುನಾವಣಾ ಹೊಸ್ತಿಲಲ್ಲಿ ಪಕ್ಷದ ಮುಖಂಡರು ವಲಸೆ ಹೋಗುವುದನ್ನು ತಡೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಂತ್ರಿಮಂಡಲ ವಿಸ್ತರಣೆ ಇಲ್ಲವೇ ಪುನಾರಚನೆ ಮಾಡಲು ಮುಂದಾಗಿದ್ದಾರೆ.

ಸಂಪುಟ ವಿಸ್ತರಣೆಗಾಗಿ ದೆಹಲಿಯಲ್ಲಿ ಇಂದು ಗೃಹ ಸಚಿವ ಅಮಿತ್ ಷಾ ಅವರೊಂದಿಗೆ ಪ್ರಸ್ತಾಪವಿಟ್ಟಿದ್ದಾರೆ.

ನಾಳೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜತೆ ಸಮಾಲೋಚನೆ ಮಾಡಲಿದ್ದಾರೆ. ವರಿಷ್ಠರು ಒಂದು ವೇಳೆ ಅನುಮತಿ ನೀಡಿದರೆ, ಶುಕ್ರವಾರವೇ ಮಂತ್ರಿಮಂಡಲ ವಿಸ್ತರಣೆ ಇಲ್ಲವೇ ಪುನಾರಚನೆ ಆಗಲಿದೆ. ಶುಕ್ರವಾರ ಮಂಡ್ಯ ಜಿಲ್ಲೆಯ ಪಾಂಡವಪುರ, ಕೆ.ಆರ್.ಪೇಟೆಯಲ್ಲಿ ಜನ ಸಂಕಲ್ಪ ಯಾತ್ರೆ ನಡೆಸಲು ಮುಖ್ಯಮಂತ್ರಿ ನಿರ್ಧರಿಸಿದ್ದರು. ಈ ಹಠಾತ್ ಬೆಳವಣಿಗೆ ಹಿನ್ನೆಲೆಯಲ್ಲಿ ಪ್ರವಾಸ ರದ್ದು ಪಡಿಸುವಂತೆ ಸಚಿವಾಲಯದ ಸಿಬ್ಬಂದಿಗೆ ಮೌಖಿಕ ಸೂಚನೆ ನೀಡಿದ್ದಾರೆ. ವಿಸ್ತರಣೆಯಾದರೆ ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ ಮತ್ತು ರಮೇಶ್ ಜಾರಕಿ ಹೊಳಿ ಮತ್ತೆ ಮಂತ್ರಿಯಾಗುವುದು ಖಚಿತ. ಇವರೊಂದಿಗೆ ಮತ್ತ್ಯಾರಿಗೆ ಮಂತ್ರಿ ಯೋಗವಿದೆಯೋ ತಿಳಿಯದು. ರಮೇಶ್ ಜಾರಕಿ ಹೊಳಿಯ ಸಹೋದರ ಬಾಲಚಂದ್ರ ಜಾರಕಿ ಹೊಳಿ ಮತ್ತು ಅವರ ಬೆಂಬಲಿಗರು ಬಿಜೆಪಿ ತೊರೆದು ಜೆಡಿಎಸ್ ಸೇರಲು ಮುಂದಾಗಿದ್ದಾರೆ. ತಮ್ಮನ್ನು ಪಕ್ಷದಲ್ಲಿ ಕಡೆಗಾಣಿಸಲಾಗುತ್ತಿದೆ. ಸರ್ಕಾರದಲ್ಲಿ ತಮ್ಮನ್ನು ದಮನ ಮಾಡುತ್ತಿದ್ದಾರೆ ಎಂಬುದು ಸೇರಿದಂತೆ ಹತ್ತು ಹಲವು ಕಾರಣಗಳನ್ನು ಮುಂದಿಟ್ಟು ಪಕ್ಷ ತೊರೆಯಲು ಮುಂದಾಗಿದ್ದಾರೆ. ಜೆಡಿಎಸ್ ನಾಯಕ ಮಾಜಿ ಮುಖ್ಯ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ನಾಲ್ಕೈದು ಸುತ್ತಿನ ಮಾತುಕತೆ ನಡೆಸಿ, ಅಂತಿಮಗೊಳಿಸಿದ್ದರು. ಮಾತುಕತೆ ಸಂದರ್ಭ ದಲ್ಲಿ ಮತ್ತಷ್ಟು ಬಿಜೆಪಿ ಶಾಸಕರು ಮತ್ತು ಮುಖಂಡರನ್ನು ಕರೆತರುವ ಹಾಗೂ ಬೆಳಗಾವಿ, ರಾಯಚೂರು ಭಾಗದ ಪೂರ್ಣ ಜವಾಬ್ದಾರಿ ನೀಡುವ ಭರವಸೆ ನೀಡಿದ್ದರು. ಜಾರಕಿಹೊಳಿ ಕುಟುಂಬ ಬಿಜೆಪಿ ತೊರೆಯಲು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ಒತ್ತಾಸೆ ಇತ್ತು ಎಂದು ಹೇಳಲಾಗಿದೆ. ಇದರಿಂದ ಎಚ್ಚೆತ್ತ ಬಿಜೆಪಿ ಮುಖಂಡರು ಜಾರಕಿಹೊಳಿ ಮತ್ತು ಅವರ ಬೆಂಬಲಿಗರನ್ನು ಪಕ್ಷ ದಲ್ಲಿ ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಕಂದಾಯ ಸಚಿವ ಆರ್. ಅಶೋಕ್ ಅವರಿಗೆ ನೀಡಿದ್ದರು. ಅಶೋಕ್ ಅವರು ರೇಸ್‌ಕೋರ್ಸ್ ರಸ್ತೆಯ ಪೆಂಟ್ ಹೌಸ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆಗೂಡಿ ಜಾರಕಿಹೊಳಿ ಸಹೋದರರ ಜತೆ ಸಂಧಾನದ ಮಾತು ಕತೆ ನಡೆಸಿದ್ದರು. ನಿಮ್ಮಲ್ಲಿ ಒಬ್ಬರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲು ವರಿಷ್ಠರ ಮನವೊಲಿಸುವೆ. ಅಲ್ಲದೆ, ನಿಮ್ಮ ಸಕ್ಕರೆ ಕಾರ್ಖಾನೆಗಳ ಕೆಲ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆಯನ್ನು ಸಹ ಮುಖ್ಯಮಂತ್ರಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ. ಇನ್ನೂ ಈಶ್ವರಪ್ಪ ಅವರಿಗೆ ಮುಂದಿನ ಚುನಾವಣೆಯಲ್ಲಿ ಕಣಕ್ಕಿಳಿಯಲು ಅವಕಾಶವಿಲ್ಲ ಎಂದು ವರಿಷ್ಠರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಶೇ.40 ರಷ್ಟು ಕಮಿಷನ್ ಪಡೆದ ಆರೋಪದಿಂದ ಮುಕ್ತವಾಗಲು ಉಳಿದ ಅವಧಿಗೆ ಮಂತ್ರಿ ಮಾಡಿ ಎಂದು ಆರ್‌ಎಸ್‌ಎಸ್ ಮುಖಂಡರಲ್ಲಿ ಈಶ್ವರಪ್ಪ ಮನವಿ ಮಾಡಿಕೊಂಡಿದ್ದರು. ಸಂಪುಟ ವಿಸ್ತರಣೆಯಾದರೆ ಜಾರಕಿಹೊಳಿ ಜತೆಗೂ ಈಶ್ವರಪ್ಪ ಅವರಿಗೂ ಸಚಿವ ಸ್ಥಾನ ದೊರೆಯುವುದು ಖಚಿತ.


ರಮೇಶ್


ಈಶ್ವರಪ್ಪ

ಜಿಪಂ, ತಾಪಂ ಚುನಾವಣೆ ವಿಳಂಬ: ಸರ್ಕಾರಕ್ಕೆ 5 ಲಕ್ಷ ರೂ. ದಂಡ ವಿಧಿಸಿದ ಹೈಕೋರ್ಟ್





ಬೆಂಗಳೂರು, ಡಿ.14– ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ರೂ. 5 ಲಕ್ಷ ದಂಡ ವಿಧಿಸಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಅಧಿನಿಯಮ ರದ್ದುಪಡಿಸಬೇಕು ಹಾಗೂ ಕ್ಷೇತ್ರ ಪುನರ್ವಿಂಗಡಣೆ ಪಟ್ಟಿ ನೀಡಲು ನಿರ್ದೇಶಿಸಬೇಕು ಎಂದು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸೀಮಾ ನಿರ್ಣಯ ಆಯೋಗ ಪರ ಹಾಜರಾಗಿದ್ದ ಹಿರಿಯ ವಕೀಲರು, ಕ್ಷೇತ್ರ ಪುನರ್ ವಿಂಗಡಣೆಗೆ ಇನ್ನೂ 90 ದಿನಗಳ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಇದನ್ನು ಒಪ್ಪದ ನ್ಯಾಯಪೀಠ, ಪದೇ ಪದೇ ಕಾಲಾವಕಾಶ ಕೇಳುತ್ತಿರುವ ನಿಮ್ಮ ಹಾಗೂ ಸರ್ಕಾರದ ನಡೆ ಸರಿಯಲ್ಲ. ಇದು ಬಸವನಹುಳು ರೀತಿಯ ನಿಧಾನ ಗತಿಯಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

ಹೈಕೋರ್ಟ್ ಈ ವಿಷಯದಲ್ಲಿ ಈಗಾಗಲೇ ಆರು ತಿಂಗಳ ಸುದೀರ್ಘ ಕಾಲಾವಕಾಶ ನೀಡಿದ್ದರೂ ಈ ಪ್ರಕ್ರಿಯಯಲ್ಲಿ ಒಂದಿಂಚೂ ಪ್ರಗತಿಯಾಗಿಲ್ಲ. ಇದು ಕೋರ್ಟ್ ಆದೇಶಗಳನ್ನು ನಿಷ್ಕ್ರಿಯಗೊಳಿಸುವ ಧೋರಣೆಯಿಂದ ಕೂಡಿದ ವರ್ತನೆ ಎಂದು ಬೇಸರ ವ್ಯಕ್ತಪಡಿಸಿತು. 2023ರ ಫೆಬ್ರವರಿ 1ರೊಳಗೆ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಗಡುವು ನೀಡಿದ ನ್ಯಾಯಪೀಠ ವಿಚಾರಣೆಯನ್ನು 2023ರ ಫೆಬ್ರವರಿ 2ಕ್ಕೆ ಮುಂದೂಡಿದೆ.

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ , ಮೈಸೂರು ತಾಲ್ಲೂಕು. ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ, ನಾರಾಯಣಸ್ವಾಮಿ ಬೀದಿ, ಮನೆ ನಂ.344 ರಲ್ಲಿ ವಾಸವಾಗಿರುವ ಲೇಟ್. ಬೊಜ್ಜಯ್ಯ ರವರ ಮಗನಾದ ಶ್ರೀ ದಾಸಯ್ಯ, ಇವರ ಧರ್ಮಪತ್ನಿ ಶ್ರೀಮತಿ ಪುಟ್ಟಮಾದಮ್ಮ ಮತ್ತು ಇವರ ಒಬ್ಬನೇ ಮಗನಾದ ಶ್ರೀ ಚೇತನ್ ಡಿ. (ಷೆಡ್ಯೂಲ್ ಐಟಂ ನಂ.1ರ ಸ್ವತ್ತಿನ ಮಾಲೀಕರು) ರವರುಗಳಿಂದ ನಮ್ಮ ಕಕ್ಷಿದಾರರು ಷೆಡ್ಯೂಲ್ ಐಟಂ ನಂ.1ರ ಸ್ವತ್ತನ್ನು ಹಾಗೂ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ, ಮನೆ ನಂ.348 ರಲ್ಲಿ ವಾಸವಾಗಿರುವ ಲೇಟ್. ಎಸ್. ನಾರಾಯಣ ರವರ ಮಕ್ಕಳುಗಳಾದ ಕು: ಯಮುನಶ್ರೀ ಮತ್ತು ಶ್ರೀ ಸಾಗರ್ (ಷೆಡ್ಯೂಲ್ ಐಟಂ ನಂ.2ರ ಸ್ವತ್ತಿನ ಮಾಲೀಕರು) ರವರುಗಳಿಂದ ನಮ್ಮ ಕಕ್ಷಿದಾರರು ಷೆಡ್ಯೂಲ್ ಐಟಂ ನಂ.2ರ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕು ಬಾಧ್ಯತೆ ಇದ್ದಲ್ಲಿ ಈ ದಿನದಿಂದ 15 (ಹದಿನೈದು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 15 (ಹದಿನೈದು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 15 (ಹದಿನೈದು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂ 1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಗೊರೂರು ಗ್ರಾಮದ ಸರ್ವೆ ನಂ.139 ರ ವಿಸ್ತೀರ್ಣ 2 ಎಕರೆ 35 ಗುಂಟೆ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಕಾಲುವೆ, ಪಶ್ಚಿಮಕ್ಕೆ: ಕೆಂಪಯ್ಯ ರವರ ಜಮೀನು, ಉತ್ತರಕ್ಕೆ: ಎಸ್.ನಾರಾಯಣ ರವರ ಜಮೀನು, ದಕ್ಷಿಣಕ್ಕೆ : ಸಿದ್ದಯ್ಯರವರ ಜಮೀನು.

ಐಟಂ ನಂ 2 : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಗೊರೂರು ಗ್ರಾಮದ ಸರ್ವೆ ನಂ.138 ರ ವಿಸ್ತೀರ್ಣ 4 ಎಕರೆ 06 ಗುಂಟೆ ಜಮೀನಿನ ಪೈಕಿ ವರುಣ ನಾಲೆಗ ಭೂಸ್ವಾಧೀನ ಹೊಂದಿರುವ 0–19 ಗುಂಟೆ ಜಾಥಾ ಉಳಿಕೆ 3 ಎಕರೆ 27 ಗುಂಟೆ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಕೆ.ಸಿದ್ದಯ್ಯ ಮತ್ತು ಪುಟ್ಟಸಿದ್ದಮ್ಮ ರವರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ವರುಣ ನಾಲೆ, ದಕ್ಷಿಣಕ್ಕೆ: ಕೆಂಪಯ್ಯ ಮತ್ತು ದಾಸಯ್ಯರವರ ಜಮೀನು.

Sd/-Pradeep kumar S,MBA,LLB, Roll No. KAR/1332/2012 Advocate Office at, No 2917/A, 1st floor, opp.TTL College, Kantharaj Urs Road, Saraswathipuram, Mysore-570009, mob: 9740315184

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು ನಂಜನಗೂಡು ರಸ್ತೆ ಬಂಡಿಪಾಳ್ಯ, ಮೈಸೂರು–570025
E-mail: apmcmysore@rediffmail.com apmcmys@gmail.com
ದೂರವಾಣಿ: 0821-2482389

ಸಂ.ಕೃ.ಉಮಾಸ (ಮೈ)/2084–/2022–23 ದಿನಾಂಕ: 14.12.2022

ಪ್ರಕಟಣೆ

ಈ ಮೂಲಕ ಪೇಟೆ ಕಾರ್ಯಕರ್ತರುಗಳಿಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೆ: ಚಾಮುಂಡೇಶ್ವರಿ ಟ್ರೇಡರ್ಸ್, ಮಾ: ಶ್ರೀ ಎಂ.ಜೆ.ಪುಟ್ಟರಾಜು ಇವರಿಗೆ ಬಿ ಬ್ಲಾಕ್ ನಿವೇಶನ ನಂ.474 ಲೀಸ್–ಕಂ–ಸೇಲ್ ಆಧಾರದ ಮೇಲೆ ಹಂಚಿಕೆಯಾಗಿದ್ದು ನಂತರ ಸದರಿಯವರು ಸಂಸ್ಥೆಯನ್ನು ಪಾಲುದಾರಿಕೆ ಸಂಸ್ಥೆಯನ್ನಾಗಿ ಪರಿವರ್ತಿಸಿಕೊಂಡು ಶ್ರೀ ಸಯ್ಯದ್ ಇದಾಯತ್ ಉಲ್ಲಾ ಇವರನ್ನು ಪಾಲುದಾರರನಾಗಿ ಸೇರ್ಪಡೆ ಮಾಡಿಕೊಂಡಿದ್ದು, ಶ್ರೀ ಎಂ.ಜೆ.ಪುಟ್ಟರಾಜು ಅವರ ಮರಣಾನಂತರ ಸಂಸ್ಥೆಯ ಉಳಿದ ಪಾಲುದಾರರಾದ ಶ್ರೀ ಸಯ್ಯದ್ ಇದಾಯತ್ ಉಲ್ಲಾ ಇವರು ನಿವೇಶನವನ್ನು ನಿಯಮಾನುಸಾರ ವರ್ಗಾವಣೆ ಪಡೆದುಕೊಂಡು ಕಟ್ಟಡ ನಿರ್ಮಿಸಿ ಲೀಸ್–ಕಂ–ಸೇಲ್ ಅವಧಿ ಪೂರ್ಣಗೊಂಡ ತರುವಾಯ ಕ್ರಯಪತ್ರ ಪಡೆದುಕೊಂಡಿರುತ್ತಾರೆ.

ಮೆ; ಚಾಮುಂಡೇಶ್ವರಿ ಟ್ರೇಡರ್ಸ್, ಮಾ: ಶ್ರೀ ಸಯ್ಯದ್ ಇದಾಯತ್ ಉಲ್ಲಾ, ಇವರು ದಿ: 12–12–2022 ರಂದು ಮನವಿ ಸಲ್ಲಿಸಿ ತಮ್ಮ ವ್ಯಾಪರದಲ್ಲಿ ನಷ್ಟ ಉಂಟಾಗಿ ಹಣಕಾಸಿನ ತೊಂದರೆಯಾಗಿರುವುದರಿಂದ ತಾವು ಹೊಂದಿರುವ ಬಿ–ಬ್ಲಾಕ್ ನಿವೇಶನ ನಂ.474 (30X40ಅಡಿ ಅಳತೆಯ ವಿಸ್ತೀರ್ಣ)ರ ನಿವೇಶನ ಸಹಿತ ಕಟ್ಟಡವನ್ನು ಮೆ: ಆಶ್ರಯ ಟ್ರೇಡರ್ಸ್, ಮ: ಶ್ರೀ ಮಹೇಶ್.ಈ ಇವರಿಗೆ ಮಾರಾಟ ಮಾಡಿ ಸಂಸ್ಥೆಯ ಹೆಸರಿನಲ್ಲಿರುವ ಲೈಸನ್ಸ್ ರದ್ದುಪಡಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ ಹಾಗೂ ಖರೀದಿದಾರರಾದ ಮೆ:ಆಶ್ರಯ ಟ್ರೇಡರ್ಸ್, ಮಾ: ಶ್ರೀ ಮಹೇಶ್.ಈ ಇವರು ಮೇಲ್ಕಂಡ ನಿವೇಶನ ಸಹಿತ ಕಟ್ಟಡವನ್ನು ಖರೀದಿಸಲು ಅನುಮತಿ ಕೋರಿರುತ್ತಾರೆ.

ಪ್ರಯುಕ್ತ ಮೆ: ಚಾಮುಂಡೇಶ್ವರಿ ಟ್ರೇಡರ್ಸ್, ಮಾ: ಶ್ರೀ ಸಯ್ಯದ್ ಇದಾಯತ್ ಉಲ್ಲಾ ಇವರು ಹೊಂದಿರುವ ಬಿ–ಬ್ಲಾಕ್ ನಿವೇಶನ ನಂ 474(30*40 ಅಡಿ ಅಳತೆಯ ವಿಸ್ತೀರ್ಣ)ರ ನಿವೇಶನ ಸಹಿತ ಕಟ್ಟಡವನ್ನು, ಮೆ: ಆಶ್ರಯ ಟ್ರೇಡರ್ಸ್, ಮಾ: ಶ್ರೀ ಮಹೇಶ್.ಈ ಇವರಿಗೆ ಮಾರಾಟ ಮಾಡಲು ಕುರಿತು ಯಾವುದೇ ಆಕ್ಷೇಪಣೆ/ಸಲಹೆ ಮತ್ತು ತಕರಾರುಗಳು ಏನಾದರೂ ಇದ್ದಲ್ಲಿ ಅದನ್ನು ಪುಷ್ಠೀಕರಿಸುವ ದಾಖಲಾತಿಗಳೊಂದಿಗೆ ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ/ದೂರುಗಳನ್ನು ಪರಿಗಣಿಸಲಾಗುವುದಿಲ್ಲ

ಷೆಡ್ಯಲ್ ಸ್ವತ್ತಿನ ವಿವರ:

ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣ, ಬಿ–ಬ್ಲಾಕ್, ನಿವೇಶನ ಸಂ, 474ರ ಪೂರ್ವ ಪಶ್ಚಿಮ 30, ಉತ್ತರ ದಕ್ಷಿಣ 40 ಅಡಿಗಳುಳ್ಳ 1200 ಚದರಡಿ , ನಿವೇಶನ ಹಾಗೂ ಅದರಲ್ಲಿರುವ ಕಟ್ಟಡ. ಚಕ್ಕುಬಂದಿ: ಪೂರ್ವಕ್ಕೆ–ರಸ್ತೆ, ಪಶ್ಚಿಮಕ್ಕೆ–ದಲ್ಲಾಲರ ಸಂಘದ ನಿವೇಶನ, ಉತ್ತರಕ್ಕೆ– ನಿವೇಶನ ಸಂ. 475, ದಕ್ಷಿಣಕ್ಕೆ: ನಿವೇಶನ ಸಂ. 473ರ ನಿವೇಶನ ಸಹಿತ ಕಟ್ಟಡ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.ಮೈಸೂರು
ಸಹಿ/– ಆಡಳಿತಾಧಿಕಾರಿ, ಕೃ.ಉ.ಮಾ.ಸ.ಮೈಸೂರು

BEFORE THE PRESIDING OFFICER: INDUSTRIAL TRIBUNAL AT BANGALORE

Serial Application No. 512/2019
IN
ID. No. 13/2013

BETWEEN
The Divisional Controller, K.S.R.T.C., Chamarajanagar Division, Chamarajanagar.
APPLICANT

AND
Sri. Shivanagendra Prasad
RESPONDENT

SUMMONS / NOTICE TO THE RESPONDENT

Sri. Shivanagendra Prasad, S/o. Sri. Maliyappa, No. 184, 13th Cross, A Block, Jyothi Nagara, Mysuru.

Whereas, the Applicant Corporation has filed the above Serial Application under section 33(2) (b) of I.D. Act, against you for approval of dismissal order dated 02.12.2019, you are hereby summoned to appear in this Tribunal in person or by a pleader on the 30th day of December 2022 at 11 a.m. to answer the same, filing which suit / application will be disposed of exparte.

Given under my hand and the seal of the Court on this 28th day of November 2022.

BY ORDER OF THE COURT
Sd/-
Sheristedar, Industrial Tribunal, Bangalore

DIPR/CP/LC/3519/2022-23

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2473923, ಫ್ಯಾಕ್ಸ್ ನಂ.0821–2473933,
ಇ–ಮೇಲ್ : mymuladmn@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಗುತ್ತಿಗೆ ಕಾರ್ಮಿಕರುಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **www.eproc.karnataka.gov.in** ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.720/1: ADMN: Tender:2022	ಎರಡು ವರ್ಷಗಳ ಅವಧಿಗೆ ತುಂಡು ಗುತ್ತಿಗೆ ಆಧಾರದಲ್ಲಿ ಮೊಸರು. ಲಸ್ಸಿ, ಮಜ್ಜಿಗೆ, ಪೇಡಾ, ಮೈಸೂರು ಪಾಕ್, ತುಪ್ಪ, ಕ್ಯಾಶ್ಯು ಬರ್ಫಿ, ಖೋವಾ, ನಂದಿನಿ ಬೈಟ್ ಮತ್ತು ಪನ್ನೀರ್ ತಯಾರಿಕೆ ಮತ್ತು ಪ್ಯಾಕಿಂಗ್ ಮಾಡಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	11.01.2023 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ / ಖರೀದಿ) ರವರನ್ನು ಮೊಬೈಲ್ ಸಂಖ್ಯೆ: 6366430803 ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಹಸಿರು ನಮ್ಮ ಉಸಿರು

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ –570026

Web : www.bogaditown.mrc.gov.in — Ph: 0821-2331099
E-Mail: itstaff_ulb_bogadi@yahoo.com — Helpline: 080-23108108
ನಂ.:ಪ.ಪಂ.ಬೋಗಾದಿ/ವಸತಿ–ಶಾಖೆ–02/2022–23 — ದಿ: 13.12.2022

ಸಾರ್ವಜನಿಕ ಪ್ರಕಟಣೆ

ಬೋಗಾದಿ ಪಟ್ಟಣ ಪಂಚಾಯಿತಿಗೆ 2021–22ನೇ ಸಾಲಿಗೆ ಸರ್ಕಾರದ ಪತ್ರ ಸಂಖ್ಯೆ: ದಿ: 01.12.2022 ಹಾಗೂ ದಿ: 03.12.2022ರ ಆದೇಶದಂತೆ ಡಾ॥ ಬಿ. ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ) ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳ ಮನೆಗಳ ನಿರ್ಮಾಣಕ್ಕೆ ಗುರಿ ನಿಗಧಿಪಡಿಸಿದ್ದು, ಆಸಕ್ತಿ ಉಳ್ಳ ಖಾಲಿ ನಿವೇಶನವನ್ನು ಹೊಂದಿರುವ ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡಲು ಸಹಾಯಧನ ನೀಡಲಾಗುವುದು ಆದ್ದರಿಂದ ಆಗತ್ಯ ದಾಖಲೆಗಳೊಂದಿಗೆ ದಿ: 26.12.2022ರ ಒಳಗಾಗಿ ಕಛೇರಿಯಿಂದ ಅರ್ಜಿ ಪಡೆದು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು ಎಂದು ಈ ಮೂಲಕ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರ.	ಡಾ॥ ಬಿ ಆರ್ ಅಂಬೇಡ್ಕರ್ ನಿವಾಸ್ ಯೋಜನೆ			ವಾಜಪೇಯಿ ನಗರ ವಸತಿ ಯೋಜನೆ			ಒಟ್ಟು
ಸಂ.	ಪರಿಶಿಷ್ಠ ಜಾತಿ	ಪರಿಶಿಷ್ಠ ಪಂಗಡ	ಒಟ್ಟು	ಅಲ್ಪ ಸಂಖ್ಯಾತರು	ಸಾಮಾನ್ಯ	ಒಟ್ಟು	
01	09	03	12	05	33	38	50

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. (ದೂ:0821–2331099)

ಸಹಿ/– (ಗಿರೀಶ್.ಜಿ.ಎಸ್), ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ ಬೋಗಾದಿ
ಸಹಿ/– (ಶ್ಯಾಮ್ ಸುಂದರ್ ಸಿ), ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಬೋಗಾದಿ

DIPR/DDMYS/MCA/760/2022-23

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬಸವರಾಜು
ಲೇ॥ ಯಜಮಾನ್ ಮಾದಯ್ಯ, ಉ॥ ಭೂಪಣ್ಣನವರ ಮಗ), ಕೆ.ಜಿ.ಕೊಪ್ಪಲು ಮೈಸೂರು

ಇವರು ದಿನಾಂಕ: 04.12.2022 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 15.12.2022 ಗುರುವಾರ ಬೆಳಿಗ್ಗೆ 11.00 ಗಂಟೆಗೆ ಶ್ರೀ ಮುರುಳೀಶ್ವರ ದೇವಸ್ಥಾನ, ಶಾಂತಿಧಾಮ ಆವರಣ, ಕಾವೇರಿ ಶಾಲೆ ಎದುರು, ಕುವೆಂಪು ನಗರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ಶ್ರೀಮತಿ ಜಯಲಕ್ಷ್ಮಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಲೇ॥ ಯಜಮಾನ್ ಮಾದಯ್ಯ ಉ॥ ಭೂಪಣ್ಣನವರ ಕುಟುಂಬ ವರ್ಗದವರು ಹಾಗೂ ಗ್ರಾಮಸ್ಥರು.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

BHARATIYA VIDYA BHAVAN SCHOOL, Mysore

CA-14, Hunsur Road, Vijayanagar 1st Stage, Mysore
Phone: 0821-2416106, 2412141 | Email : bvbmysore@gmail.com

RECRUITMENT FOR THE ACADEMIC YEAR 2023 - 24

Teachers with relevant experience and proven professional competency for the below mentioned posts.

- **VICE-PRINCIPAL :**
  a) Qualification: Post-Graduate degree with B.Ed., / M.Ed., from a recognised university.
  b) Experience: Shall have held the position of Vice-Principal / Principal with a minimum of 10 years experience after obtaining a Post-Graduate degree.
- **HIGH SCHOOL TEACHERS :**
  a) Qualification: Graduates/Post Graduates with B.Ed., / M.Ed., from a recognised University.
  b) Experience: Shall have hands-on experience of a minimum of 5 years.
- **PRIMARY TEACHERS :**
  a) Qualification: Any degree with B.Ed., / D.Ed., from a recognised university.
  b) Experience : Shall have hands-on experience of a minimum of 5 years.
- **KINDERGARTEN :**
  a) Qualification: Any Degree with Montessori / Nursery Training
  b) Experience: Shall have hands-on experience of a minimum of 5 years.
  Note: All the above openings require a good command over the English language coupled with proven excellent teaching capabilities.
- **ACCOUNTS OFFICER :**
  b) Experience: 10 years of hands on experience in independently managing the Accounts Department with knowledge of EPF, ESI, Gratuity, GST and Tally.

Those with strong communication skills and proficient in their areas of specialization may apply with confidence on or before 20th December 2022.

Salary and perquisites offered match the best in the industry in Mysore.

Sd/- Hon. Secretary